ಸಂಪುಟ: ೦೭/ ಸಂಚಿಕೆ: ೧೮೨/ ಮಂಗಳವಾರ ದಿನಾಂಕ : ೦೯-೦೯-೨೦೨೫/ ಪುಟ: ೬/ ಬೆಲೆ ೨-೦೦

ಸತ್ಯಕ್ಕೆ ಕಿರಣ ಸುಳ್ಳಿಗೆ ಕಿಡಿ

ಕಛೇರಿ ದೂರವಾಣಿ ಸಂಖ್ಯೆ 0831-3564491

# ಬೆಳಗಿನ ಸೂರ್ಯೋದಯ

ಕನ್ನಡ ಪ್ರಾದೇಶಿಕ ದಿನಪತ್ರಿಕೆ

■ ಬೆಳಗಾವಿ ■ ಧಾರವಾಡ ■ ಬಾಗಲಕೋಟ ■ ವಿಜಯಪುರ ■ ಗದಗ ■ ಕೊಪ್ಪಳ ■ ಹಾವೇರಿ ■ ಕಾರವಾರ

ಸಂಪಾದಕರು : ಗುರುರಾಜ ಈರಪ್ಪಾ. ಕದಮ, Editor : GURURAJ IRAPPA. KADAM Cell : 9620099959

Volume : 07/ ISSUE : 182/ TUESDAY Date : 09-09-2025/ RNI No. KARKAN/2019/77640/ Postal Reg No. PMG/KA/NK/BM/135/2025-27 / POST AT Vantamury Colony Post Office / email : belaginasuryodaya@gmail.com / Page : 6 / Rs. 2.00



## ಹಿಂದೂಗಳ ಮೇಲಿನ ಹಲ್ಲೆ ಖಂಡಿಸಿ ಇಂದು ಮದ್ದೂರು ಬಂದ್

**ಮಂಡ್ಯ:** ಹಿಂದೂಗಳ ಮೇಲಿನ ಹಲ್ಲೆ ಖಂಡಿಸಿ ನಾಳೆ ಮದ್ದೂರು ಬಂದ್‌ಗೆ ಹಿಂದೂ ಪರ ಸಂಘಟನೆಗಳು ಕರೆ ನೀಡಿವೆ. ನಿನ್ನೆ ಸಂಜೆ ಶಾಂತಿಯುತ ಗಣೇಶಮೂರ್ತಿ ಮೆರವಣಿಗೆಗೆ ಅಡ್ಡಿಪಡಿಸಲು ವ್ಯವಸ್ಥಿತವಾಗಿ ಸಂಚು ರೂಪಿಸಿ ಕಲ್ಲು ತೂರಿ, ದೊಣ್ಣೆಯಿಂದ ಹಲ್ಲೆ ಮಾಡಲಾಗಿದೆ ಎಂದು ಹಿಂದೂ ಸಂಘಟನೆಗಳು ಆರೋಪಿಸಿದ್ದು, ಇಂಥ ಘಟನೆಗಳನ್ನು ಹತ್ತಿಕ್ಕಲು ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಇಂದು ಮದ್ದೂರು ಬಂದ್‌ಗೆ ಕರೆ ನೀಡಿವೆ. ಗುಂಪು ಚದುರಿಸುವ ವೇಳೆ ಮಹಿಳೆಯರು ಎನ್ನದೇ ಲಾಠಿ ಬೀಸಿದ್ದರಿಂದ ಗಾಯಗೊಂಡ ಯುವತಿಯೊಬ್ಬಳು ರಸ್ತೆ ಮಧ್ಯೆ ಕೂತು ಬಾಯಿ ಬಡೆದುಕೊಂಡು ಹಿಡಿ ಶಾಪ ಹಾಕಿದ್ದು ಕಂಡು ಬಂತು. ಕೆಲ ಯುವಕರು ಪೊಲೀಸರ ನಡೆಯನ್ನು ಖಂಡಿಸಿ ಸ್ಥಳದಲ್ಲೇ ಕೂತು ಆಕ್ರೋಶ ಹೊರಹಾಕಿದ್ದಾರೆ. ಗುಂಪನ್ನು ಚದುರಿಸಲು ಪೊಲೀಸರು ಲಾಠಿ ಚಾರ್ಜ್ ನಡೆಸಿದ ವೇಳೆ ರಸ್ತೆ ಬದಿ ನಿಲ್ಲಿಸಿದ ವಾಹನಗಳ ಮೇಲೆ ಬಿದ್ದು ಕೆಲವರು ಗಾಯಗೊಂಡಿದ್ದಾರೆ. ಈ ನಡುವೆ ಸ್ಥಳೀಯ ಶಾಸಕರ ಮನೆಯ ಬಳಿಯು ಪ್ರತಿಭಟನೆ ನಡೆದಿದ್ದು, ಪೊಲೀಸರು ಅದನ್ನು ತಡೆದಿದ್ದಾರೆ. ಒಟ್ಟಾರೆ ಮದ್ದೂರಿನಲ್ಲಿ ಪ್ರತಿಭಟನೆಗಳು ಮುಂದುವರೆದಿದ್ದು, ಪೊಲೀಸರು ಪರಿಸ್ಥಿತಿ ನಿಯಂತ್ರಿಸಲು ಹರಸಾಹಸ ಪಟ್ಟಿದ್ದಾರೆ. ಬೆಂಗಳೂರು– ಮೈಸೂರು ಹೆದ್ದಾರಿಯನ್ನು ತಡೆದು ನೂರಾರು ಮಂದಿ ಪ್ರತಿಭಟನೆ ನಡೆಸಿದ ಸಂದರ್ಭದಲ್ಲಿ ಮಾಜಿ ಸಂಸದ ಪ್ರತಾಪ್‌ಸಿಂಹ ಕೂಡ ಆಗಮಿಸಿ ಬೆಂಬಲ ಸೂಚಿಸಿದ್ದಾರೆ.


### ಅಕ್ರಮ ಬೆಟ್ಟಿಂಗ್ ಪ್ರಕರಣ

## ‘ಕೈ’ ಶಾಸಕ 14 ದಿನ ನ್ಯಾಯಾಂಗ ಬಂಧನ

**ಬೆಂಗಳೂರು:** ಅಕ್ರಮವಾಗಿ ಬೆಟ್ಟಿಂಗ್ ಕಂಪನಿ ನಡೆಸುತ್ತಿದ್ದ ಆರೋಪಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧನಕ್ಕೀಡಾಗಿರುವ ಕಾಂಗ್ರೆಸ್ ಶಾಸಕ ಕೆಸಿ ವೀರೇಂದ್ರ ಪಪ್ಪಿಗೆ ಕೋರ್ಟ್ 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಆದೇಶಿಸಿದೆ. ಇಡಿ ಕಸ್ಟಡಿ ಅವಧಿ ಮುಗಿದ ಹಿನ್ನೆಲೆಯಲ್ಲಿ ಅವರನ್ನು ಸೋಮವಾರ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಈ ವೇಳೆ ವಿಚಾರಣೆ ನಡೆಸಿದ ನ್ಯಾಯಾಲಯ ವಿರೇಂದ್ರ ಪಪ್ಪಿ ಅವರನ್ನು ಸೆ. 22ರವರೆಗೆ 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಕಳುಹಿಸಿ ಆದೇಶ ಹೊರಡಿಸಿದೆ. ಅಕ್ರಮ ಬೆಟ್ಟಿಂಗ್ ಪ್ರಕರಣಕ್ಕೆ ಸಂಬಂಧಿಸಿದಂತೆ ಹಲವು ರಾಜ್ಯಗಳಲ್ಲಿ ಇಡಿ ದಾಳಿ ನಡೆಸಿತ್ತು. ಇನ್ನು ದಾಳಿ ವೇಳೆ ವೀರೇಂದ್ರ ಪಪ್ಪಿ ಮನೆಯಲ್ಲಿ 12 ಕೋಟಿ ರೂ. ನಗದು (ಒಂದು ಕೋಟಿ ರೂ. ವಿದೇಶಿ ಕರೆನ್ಸಿ ಸೇರಿದಂತೆ), 6 ಕೋಟಿ ರೂ. ಮೌಲ್ಯದ ಚಿನ್ನಾಭರಣ, ಸುಮಾರು 10 ಕೆಜಿ ಬೆಳ್ಳಿ ಮತ್ತು ನಾಲ್ಕು ವಾಹನಗಳನ್ನು ವಶಪಡಿಸಿಕೊಂಡಿತ್ತು. ಚಿತ್ರದುರ್ಗದ 50 ವರ್ಷದ ಶಾಸಕನನ್ನು ಆಗಸ್ಟ್ 22 ರಂದು ಸಿಕ್ಕಿಂನ ರಾಜಧಾನಿ ಗ್ಯಾಂಗ್ಟಾಕ್‌ನಲ್ಲಿ ಬಂಧಿಸಿದ್ದು ಇಡಿ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಿ ಬೆಂಗಳೂರಿನ ನ್ಯಾಯಾಲಯದ ಮುಂದೆ ಹಾಜರುಪಡಿಸಲು ಟ್ರಾನ್ಸಿಟ್ ರಿಮಾಂಡ್ ಪಡೆದು ರಾಜ್ಯಕ್ಕೆ ಕರೆತಂದಿದ್ದರು. ಬಂಧನದ ವೇಳೆ ಶಾಸಕರು ತಮ್ಮ ಸಹಚರರೊಂದಿಗೆ ಕ್ಯಾಸಿನೊವನ್ನು ಗುತ್ತಿಗೆ ಪಡೆಯುವ ಸಲುವಾಗಿ ಮಾತುಕತೆ ನಡೆಸಲು ಗ್ಯಾಂಗ್ಟಾಕ್‌ಗೆ ಭೇಟಿ ನೀಡಿದ್ದರು ಎಂದು ತನಿಖಾ ಸಂಸ್ಥೆ ತಿಳಿಸಿದೆ.

## ಹೆತ್ತವರಿಂದಲೇ ಮಗನ ಕೊಲೆ

**ಜಮಖಂಡಿ:** ಸ್ವಂತ ಮಗನ ಜೀವ ತೆಗೆದು ತಂದೆ, ತಾಯಿ, ಅಣ್ಣ ಸೇರಿ ಸುಟ್ಟು ಹಾಕಿದ್ದಾರೆ. ಈ ಘಟನೆ ಜಮಖಂಡಿ ತಾಲೂಕಿನ ಬಿದರಿ ಗ್ರಾಮದ ತೋಟದ ಮನೆಯೊಂದರಲ್ಲಿ ನಡೆದಿದೆ. ನಿತ್ಯ ಮದ್ಯಪಾನ ಮಾಡಿ ಮನೆಗೆ ಬಂದು ತಂದೆ, ತಾಯಿ ಜೊತೆ ಜಗಳ ತೆಗೆಯುತ್ತಿದ್ದನು. ಈತನ ಅಣ್ಣ ಬಸವರಾಜ ಭಾರತ ಸೇನೆಯಲ್ಲಿ ಯೋಧನಾಗಿದ್ದಾನೆ.



ಇತ್ತೀಚೆಗಷ್ಟೇ ರಜೆ ತೆಗೆದುಕೊಂಡು ಮನೆಗೆ ಬಂದಿದ್ದನು. ಆದರೆ ಅನಿಲ್? ವರಸೆ ಮುಂದುವರೆದಿತ್ತು. ಇದರಿಂದ ಕೋಪಿತಗೊಂಡ ಮನೆಯವರು ಮಗನ ಪ್ರಾಣವನ್ನೇ ತೆಗೆದು ಬಿಟ್ಟಿದ್ದಾರೆ. ಬಳಿಕ ಡೀಸೆಲ್ ಹಾಕಿ ಸುಟ್ಟಿದ್ದಾರೆ. ಅನಿಲ ಪರಪ್ಪ ಕಾನಟ್ಟಿ (32) ಮೃತ ವ್ಯಕ್ತಿ ಸದ್ಯ ಸಂಬಂಧ ಮೂವರನ್ನು ಪೊಲೀಸರು ಬಂಧಿಸಿದ್ದಾರೆ. ಈ ಘಟನೆಯು ಸೆಪ್ಟೆಂಬರ್ 5 ರಂದೇ ನಡೆದಿದ್ದು ತಡವಾಗಿ ಬೆಳಕಿಗೆ ಬಂದಿದೆ.

# ಮಳೆಹಾನಿ ಪರಿಹಾರ ಕಾರ್ಯಗಳಿಗೆ ಯಾವುದೇ ಅನುದಾನದ ಕೊರತೆಯಿಲ್ಲ

**ಬೆಂಗಳೂರು:** ಅತಿವೃಷ್ಟಿಯಿಂದ ಉಂಟಾಗಿರುವ ಮೂಲಸೌಕರ್ಯಗಳ ಹಾನಿ ದುರಸ್ತಿಗೆ ಎಸ್‌ಡಿಆರ್‌ಎಫ್ ಅಡಿ ಅನುದಾನ ಬಿಡುಗಡೆ ಮಾಡಲು ಅವಕಾಶವಿದ್ದು, ಮಳೆಹಾನಿ ಪರಿಹಾರ ಕಾರ್ಯಗಳಿಗೆ ಯಾವುದೇ ಅನುದಾನದ ಕೊರತೆಯಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಸಿಎಂ ಗೃಹ ಕಚೇರಿ ಕೃಷ್ಣಾದಲ್ಲಿ ‘ಅತಿವೃಷ್ಟಿಯಿಂದಾಗಿ ರಾಜ್ಯದಲ್ಲಿ ಉಂಟಾದ ಹಾನಿ ಹಾಗೂ ಪರಿಹಾರ ಕ್ರಮಗಳ ಕುರಿತು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯಿತಿ ಸಿಇಓಗಳು ಸೇರಿದಂತೆ ಅಧಿಕಾರಿಗಳೊಂದಿಗೆ ನಡೆಸಿದ ವಿಡಿಯೋ ಸಂವಾದ’ದಲ್ಲಿ ಮಾತನಾಡಿದ ಅವರು, ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಹಾಗೂ ತಹಶೀಲ್ದಾರ್ ವಿಪತ್ತು ನಿಧಿ ಅಡಿ 1385.21 ಕೋಟಿ ರೂ. ಅನುದಾನ ಲಭ್ಯವಿದೆ ಎಂದರು.

ರೈತರ ಜಮೀನುಗಳಿಗೆ ಉಂಟಾಗಿರುವ ಹಾನಿಗೂ ಪರಿಹಾರ ಒದಗಿಸಲು ಅನುದಾನ ಲಭ್ಯವಿದ್ದು, ಹೆಚ್ಚುವರಿ ಪರಿಹಾರ ಒದಗಿಸುವ ಕುರಿತು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗುವುದು. ಇನ್ನು ಹಿಂಗಾರು ಬಿತ್ತನೆಗೆ ಅಗತ್ಯವಾದ ಬಿತ್ತನೆ ಬೀಜ, ರಸಗೊಬ್ಬರ ಸೇರಿದಂತೆ ಈಗಲೇ ತಯಾರಿ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೆಳೆ ಹಾನಿ ಬಗ್ಗೆ ಜಂಟಿ ಸಮೀಕ್ಷೆ ಕಾರ್ಯ ನಡೆಯುತ್ತಿದ್ದು, ಆದಷ್ಟು ಬೇಗನೆ ಪೂರ್ಣಗೊಳಿಸಬೇಕು. ಹಾನಿ ಬಗ್ಗೆ ಪ್ರಾಥಮಿಕ ಸಮೀಕ್ಷೆ ನಡೆಸಲಾಗಿದ್ದು, 4,80,256 ಹೆಕ್ಟೇರ್ ಕೃಷಿ ಬೆಳೆ ಹಾನಿಯಾಗಿದೆ. 40,407 ಹೆಕ್ಟೇರ್ ತೋಟಗಾರಿಕಾ ಬೆಳೆಗಳಿಗೆ ಹಾನಿಯಾಗಿದ್ದು, ಒಟ್ಟು 5,20,663 ಹೆಕ್ಟೇರ್ ಬೆಳೆ ಹಾನಿಯಾಗಿದೆ ಎಂದು ಸಿದ್ದರಾಮಯ್ಯ ಮಾಹಿತಿ ನೀಡಿದರು. 651 ಮನೆಗಳು ಸಂಪೂರ್ಣ ಹಾನಿಯಾಗಿದ್ದು, 9,087 ಮನೆಗಳು ಭಾಗಶಃ ಹಾನಿಯಾಗಿವೆ. ಸಂಪೂರ್ಣ ಹಾನಿಯಾದ 649 ಮನೆಗಳಿಗೆ ಹಾಗೂ ಭಾಗಶಃ ಹಾನಿಯಾದ 8,608 ಮನೆಗಳಿಗೆ ಪರಿಹಾರ ಪಾವತಿಸಲಾಗಿದೆ. ಮನೆ ಹಾನಿಯಾದವರಿಗೆ ಪರಿಹಾರ ಹಾಗೂ ವಿವಿಧ ವಸತಿ ಯೋಜನೆಗಳಡಿ ಮನೆಯನ್ನೂ ಒದಗಿಸಲು ಕ್ರಮ ಕೈಗೊಳ್ಳಬೇಕು ಎಂದು ಅವರು ಅಧಿಕಾರಿಗಳಿಗೆ ಹೇಳಿದರು. ಮಳೆಯಿಂದಾಗಿ 683 ಕಿ.ಮೀ. ರಾಜ್ಯ ಹೆದ್ದಾರಿ, 1,383 ಜಿಲ್ಲಾ ಪ್ರಮುಖ ಹೆದ್ದಾರಿ, 5,558 ಗ್ರಾಮೀಣ ರಸ್ತೆಗಳು, 656 ಸೇತುವೆ/ಕಲ್ವರ್ಟ್‌ಗಳು, 1,877 ಶಾಲಾ ಕಟ್ಟಡಗಳು, 160 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 1,018 ಅಂಗನವಾಡಿಗಳು, 25,279 ವಿದ್ಯುತ್ ಕಂಬಗಳು, 819 ಟ್ರಾನ್ಸ್‌ಫಾರ್ಮರ್‌ಗಳು, 31 ಸಣ್ಣ ನೀರಾವರಿ ಕೆರೆಗಳಿಗೆ ಹಾನಿ ಸಂಭವಿಸಿದೆ ಎಂದು ಅವರು ವಿವರಿಸಿದರು.



> **ಮಳೆಯಿಂದಾಗಿ ಎಪ್ರಿಲ್ ತಿಂಗಳಿನಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಒಟ್ಟು 111 ಮಂದಿ ಸಾವನ್ನಪ್ಪಿದ್ದು, ಎಲ್ಲ ಪ್ರಕರಣಗಳಲ್ಲಿ ಪರಿಹಾರ ವಿತರಿಸಲಾಗಿದೆ. ಒಟ್ಟು 5.55 ಕೋಟಿ ರೂ.ಪರಿಹಾರ ನೀಡಲಾಗಿದೆ. ಈ ಅವಧಿಯಲ್ಲಿ ಒಟ್ಟು 766 ಜಾನುವಾರುಗಳು ಸಾವಿಗೀಡಾಗಿದ್ದು, ಒಟ್ಟು 1.52 ಕೋಟಿ ರೂ. ಪರಿಹಾರ ವಿತರಿಸಲಾಗಿದೆ. ‘ತುಂಗಾಭದ್ರಾ ಅಣೆಕಟ್ಟಿನ ಕ್ರೆಸ್ಟ್ ಗೇಟ್ ಬದಲಾವಣೆ, ನಿರ್ವಹಣೆ ಸೇರಿದಂತೆ ಅಣೆಕಟ್ಟಿನ ಮೂಲ ಸೌಕರ್ಯಗಳ ಅಭಿವೃದ್ಧಿಯು ಕೇಂದ್ರ ಸರಕಾರದ ಅಧೀನದಲ್ಲಿರುವ ತುಂಗಾಭದ್ರಾ ಮಂಡಳಿಯ ವ್ಯಾಪ್ತಿ ಬರಲಿದ್ದು, 32 ಕ್ರೆಸ್ಟ್ ಗೇಟ್ ಬದಲಾವಣೆಗೆ ಈಗಾಗಲೇ ಟೆಂಡರ್ ಆಗಿದೆ. 8 ಕ್ರೆಸ್ಟ್‌ಗೇಟ್‌ಗಳು ಅಳವಡಿಕೆಗೆ ಸಿದ್ಧವಿದೆ’**
>
> ಸಿದ್ದರಾಮಯ್ಯ, ಮುಖ್ಯಮಂತ್ರಿ

ತುಂಗಾಭದ್ರಾ ಅಣೆಕಟ್ಟಿನಲ್ಲಿ ಪ್ರಥಮ ಬೆಳೆಗೆ ಮಾತ್ರ ನೀರು ಲಭ್ಯವಿದ್ದು, ಎರಡನೆ ಬೆಳೆಗೆ ನೀರು ಹರಿಸಲು ಪ್ರಸ್ತುತ ಸನ್ನಿವೇಶದಲ್ಲಿ ಸಾಧ್ಯವಿಲ್ಲ. ನೀರು ಹರಿಸುವ ಪೂರ್ವದಲ್ಲೇ ಎಲ್ಲ ಸಣ್ಣಪುಟ್ಟ ದುರಸ್ತಿ ಕಾರ್ಯಗಳನ್ನು ಪೂರ್ಣಗೊಳಿಸಬೇಕು ಎಂದು ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು. ರಾಜ್ಯದ ಪ್ರಮುಖ ಜಲಾಶಯಗಳಲ್ಲಿ ನೀರಿನ ಮಟ್ಟ ಹಿಂದಿನ ವರ್ಷಕ್ಕೆ ಹೋಲಿಸಿದರೆ ಈಗ ಸ್ವಲ್ಪ ಕಡಿಮೆಯಿದೆ. ಪ್ರಮುಖ ಜಲಾಶಯಗಳ ಗರಿಷ್ಠ ಸಾಮರ್ಥ್ಯ 895.62 ಟಿಎಂಸಿ ಇದ್ದು, ಪ್ರಸ್ತುತ 840.52 ಟಿಎಂಸಿ ಸಂಗ್ರಹವಿದೆ. ಹಿಂದಿನ ವರ್ಷ ಈ ಅವಧಿಯಲ್ಲಿ 856.17 ಟಿಎಂಸಿ ಸಂಗ್ರಹ ಇತ್ತು ಎಂದು ಸಿದ್ದರಾಮಯ್ಯ ಹೇಳಿದರು.

ರಾಜ್ಯದಲ್ಲಿ ಮುಂಗಾರು ಹಂಗಾಮಿನಲ್ಲಿ ಜೂ.1ರಿಂದ ಸೆಪ್ಟೆಂಬರ್ ಮೊದಲ ವಾರದ ವರೆಗೆ ವಾಡಿಕೆಗಿಂತ ಶೇ.4ರಷ್ಟು ಹೆಚ್ಚು ಮಳೆಯಾಗಿದೆ. ಈ ಅವಧಿಯಲ್ಲಿ ವಾಡಿಕೆ ಮಳೆ 721 ಮಿ.ಮೀ ಇದ್ದು, 753 ಮಿ.ಮೀ ಮಳೆ ದಾಖಲಾಗಿದೆ. ಹಿಂದಿನ ವರ್ಷ ಶೇ.23ರಷ್ಟು ಹೆಚ್ಚುವರಿ ಮಳೆ ದಾಖಲಾಗಿತ್ತು. ಚಾಮರಾಜ ನಗರದಲ್ಲಿ ಶೇ.24ರಷ್ಟು ಕಡಿಮೆ ಮಳೆಯಾಗಿದೆ. ವಿಜಯಪುರ, ಗದಗ, ಬಾಗಲಕೋಟೆ, ದಾವಣಗೆರೆ, ತುಮಕೂರು ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಶೇ.20ಕ್ಕಿಂತ ಹೆಚ್ಚು ಮಳೆ ದಾಖಲಾಗಿದೆ. ರಾಜ್ಯದಲ್ಲಿ ಶೇ.98ರಷ್ಟು ಬಿತ್ತನೆ ಪೂರ್ಣಗೊಂಡಿದೆ. ಬಿತ್ತನೆ ಗುರಿ 82.50 ಲಕ್ಷ ಹೆಕ್ಟೇರ್ ಇದ್ದು, 80.76 ಲಕ್ಷ ಹೆಕ್ಟೇರ್ ವಾಸ್ತವಿಕ ಬಿತ್ತನೆಯಾಗಿದೆ ಎಂದು ಅವರು ವಿವರಿಸಿದರು.

### ಸರಕಾರದ ಪಂಚ ಗ್ಯಾರಂಟಿ ಹೊರೆ

## ಅನರ್ಹ ಬಿಪಿಎಲ್ ಕಾರ್ಡ್ ರದ್ದುಗೊಳಿಸಲು ಮುಖ್ಯಮಂತ್ರಿ ಸೂಚನೆ

**ಬೆಂಗಳೂರು:** ಅನರ್ಹ ಬಿಪಿಎಲ್ ಕಾರ್ಡುದಾರರನ್ನು ಗುರುತಿಸಿ ಬಿಪಿಎಲ್ ಕಾರ್ಡ್ ರದ್ದುಪಡಿಸುವ ಕಾರ್ಯವನ್ನು ಪಂಚಾಯತ್ ಮಟ್ಟದಲ್ಲಿ ನಡೆಸುವಂತೆ ಸಿಎಂ ಸಿದ್ದರಾಮಯ್ಯ ಖಡಕ್ ಸೂಚನೆ ನೀಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಸೋಮವಾರ ಗೃಹ ಕಚೇರಿ ಕೃಷ್ಣಾದಲ್ಲಿ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ನಡೆಯಿತು. ಸಭೆಯಲ್ಲಿ ಅನರ್ಹ ಫಲಾನುಭವಿಗಳನ್ನು ತೆಗೆದು ಹಾಕುವ ಬಗ್ಗೆ ಹೆಚ್ಚಿನ ಚರ್ಚೆ ನಡೆಸಲಾಯಿತು. ಆ ಮೂಲಕ ಪಂಚ ಗ್ಯಾರಂಟಿಯ ಹೊರೆ ಕಡಿಮೆ ಮಾಡಲು ಸರ್ಕಾರ ಮುಂದಾಗಿದೆ. ಅನರ್ಹ ಫಲಾನುಭವಿಗಳು ಪಂಚ ಗ್ಯಾರಂಟಿ ಯೋಜನೆಯ ದುರ್ಬಳಕೆ ಮಾಡುವುದನ್ನು ತಡೆಯುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವ ಬಗ್ಗೆ ಅಧಿಕಾರಿಗಳಿಗೆ ಸಿಎಂ ಸಿದ್ದರಾಮಯ್ಯ ಸೂಚನೆ ಕೊಟ್ಟರು.

ಪಂಚ ಗ್ಯಾರಂಟಿ ಯೋಜನೆಯಡಿ ಇದುವರೆಗೆ 97,813 ಕೋಟಿ ರೂ. ಅನುದಾನವನ್ನು ವೆಚ್ಚ ಮಾಡಲಾಗಿದೆ. ಇದರಲ್ಲಿ ಗೃಹಲಕ್ಷ್ಮಿ ಯೋಜನೆಯಡಿ 1.24 ಕೋಟಿ ಫಲಾನುಭವಿಗಳಿಗೆ ಒಟ್ಟು 50,005 ಕೋಟಿ ರೂ, ಗೃಹಜ್ಯೋತಿ ಯೋಜನೆಯಡಿ 1.64 ಕೋಟಿ ಫಲಾನುಭವಿಗಳಿಗೆ 18,139 ಕೋಟಿ ರೂ, ಯುವನಿಧಿ ಯೋಜನೆಯಡಿ 2.55 ಲಕ್ಷ ಫಲಾನುಭವಿಗಳಿಗೆ 623 ಕೋಟಿ ರೂ, ಶಕ್ತಿ ಯೋಜನೆಯಡಿ 544 ಕೋಟಿ ಫಲಾನುಭವಿಗಳಿಗೆ 13,903 ಕೋಟಿ ರೂ ಹಾಗೂ ಅನ್ನಭಾಗ್ಯ ಯೋಜನೆಯಡಿ 72.02 ಕೋಟಿ ಫಲಾನುಭವಿಗಳಿಗೆ ಒಟ್ಟು 11,821.17 ಕೋಟಿ ರೂಪಾಯಿ ವೆಚ್ಚ ಮಾಡಲಾಗಿದೆ.

ಮರಣ ಹೊಂದುವ ಫಲಾನುಭವಿಗಳ ಪಟ್ಟಿಯನ್ನು ಪ್ರತಿ ತಿಂಗಳು ಪಂಚಾಯತ್ ಹಂತದಲ್ಲಿ ನವೀಕರಿಸಿ ಸಂಬಂಧಪಟ್ಟ ಬ್ಯಾಂಕುಗಳಿಗೆ ಮಾಹಿತಿಯನ್ನು ಒದಗಿಸಬೇಕು. ಮರಣ ಹೊಂದುವ ಫಲಾನುಭವಿಗಳ ಹೆಸರನ್ನು ಪಟ್ಟಿಯಿಂದ ತೆಗೆದು ಹಾಕಬೇಕು. ಪಂಚಾಯತ್ ಮಟ್ಟದಲ್ಲಿ ಫಲಾನುಭವಿಗಳ ಸೇರ್ಪಡೆ ಮತ್ತು ತೆಗೆದು ಹಾಕುವಿಕೆಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಜಿಎಸ್‌ಟಿ ರಿಟರ್ನ್ ಸಲ್ಲಿಸುವವರು ಗೃಹಲಕ್ಷ್ಮಿ ಯೋಜನೆ ಲಾಭ ಪಡೆಯುವ ಕುರಿತು ಇರುವ ಗೊಂದಲವನ್ನು ನಿವಾರಿಸಲು ಕ್ರಮ ಕೈಗೊಳ್ಳಲು ಸೂಚನೆ ನೀಡಿದರು. ಅನರ್ಹ ಬಿಪಿಎಲ್ ಕಾರ್ಡುದಾರರನ್ನು ಗುರುತಿಸಿ ಬಿಪಿಎಲ್ ಕಾರ್ಡ್ ರದ್ದುಪಡಿಸುವ ಕಾರ್ಯವನ್ನು ಪಂಚಾಯತ್ ಮಟ್ಟದಲ್ಲಿ ನಡೆಸಬೇಕು. ಈ ಕುರಿತಾಗಿರುವ ಮಾನದಂಡಗಳನ್ನು ಕಟ್ಟುನಿಟ್ಟಿನಿಂದ ಜಾರಿಗೊಳಿಸಬೇಕು ಎಂದು ಸೂಚನೆ ನೀಡಿದರು.ಅನ್ನಭಾಗ್ಯ ಅಕ್ಕಿ ಕಾಳಸಂತೆಯಲ್ಲಿ ಮಾರಾಟ ಮಾಡುವುದನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಅಕ್ಕಿಯ ಬದಲು ಪ್ರದೇಶವಾರು ಇತರ ಧಾನ್ಯಗಳನ್ನು ನೀಡುವ ಬಗ್ಗೆ ಪರಿಶೀಲನೆ ನಡೆಸಲು ಸೂಚಿಸಲಾಗಿದೆ. ಗ್ಯಾರಂಟಿ ಯೋಜನೆಗಳ ಲಾಭ ಅರ್ಹ ಫಲಾನುಭವಿಗಳಿಗೆ ತಲುಪಿಸಲು ಆಂದೋಲನ ಮಾದರಿಯಲ್ಲಿ ಕಾರ್ಯ ನಿರ್ವಹಿಸಬೇಕು ಎಂದು ಸೂಚಿಸಿದರು.

## ಧರ್ಮಸ್ಥಳ ಪ್ರಕರಣ: ಶಾ ಭೇಟಿ ಮಾಡಲಿರುವ ರಾಜ್ಯ ಬಿಜೆಪಿ ನಿಯೋಗ

**ಬೆಂಗಳೂರು:** ಕರ್ನಾಟಕ ಬಿಜೆಪಿ ನಿಯೋಗ ಸೋಮವಾರ ರಾತ್ರಿ ನವದೆಹಲಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಲಿದೆ ಎಂದು ಪಕ್ಷದ ರಾಜ್ಯ ಘಟಕ ತಿಳಿಸಿದೆ. "ಧರ್ಮಸ್ಥಳ ವಿಷಯಕ್ಕೆ ಸಂಬಂಧಿಸಿದಂತೆ ಅಮಿತ್ ಶಾ ಅವರಿಗೆ ನಿಯೋಗ ವರದಿ ಸಲ್ಲಿಸಲಿದೆ. ಕೊಪ್ಪಳ ಘಟನೆ ಮತ್ತು ಹಿಂದೂಗಳ ಮೇಲಿನ ಇತರ ದಾಳಿ ಪ್ರಕರಣಗಳ ಬಗ್ಗೆಯೂ ನಾವು ಚರ್ಚಿಸುತ್ತೇವೆ" ಎಂದು ಬಿಜೆಪಿ ಬಿಡುಗಡೆ ಮಾಡಿದ ಹೇಳಿಕೆ ತಿಳಿಸಿದೆ. ಮಾಜಿ ನೈರ್ಮಲ್ಯ ಕಾರ್ಮಿಕನೊಬ್ಬ ಸೇವೆಯಲ್ಲಿದ್ದಾಗ, ಮಹಿಳೆಯರ ಶವಗಳು ಸೇರಿದಂತೆ ಹಲವಾರು ಮೃತದೇಹಗಳನ್ನು ದೀರ್ಘಕಾಲದವರೆಗೆ ಹೂಳಲು ಒತ್ತಾಯಿಸಲಾಯಿತು ಎಂದು ಆರೋಪಿಸಿದ ನಂತರ ಧರ್ಮಸ್ಥಳ ವಿವಾದ ಭುಗಿಲೆದ್ದಿತು. ಈ ಆರೋಪಗಳನ್ನು ಪರಿಶೀಲಿಸಲು ರಾಜ್ಯ ಸರ್ಕಾರವು ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಿತು. ದೂರುದಾರರು–ಸಾಕ್ಷಿಯವರು ಗುರುತಿಸಿದ ಹಲವಾರು ಸ್ಥಳಗಳಲ್ಲಿ ನೇತ್ರಾವತಿ ನದಿಯ ದಡದಲ್ಲಿ ಅಸ್ಥಿಪಂಜರ ಅವಶೇಷಗಳಿವೆಯೇ ಎಂದು ನೋಡಲು ಎಸ್‌ಐಟಿ ನೇತೃತ್ವದಲ್ಲಿ ಉತ್ಖನನ ನಡೆಸಲಾಯಿತು. ಎರಡು ಸ್ಥಳಗಳಲ್ಲಿ, ಅವರು ಅಸ್ಥಿಪಂಜರ ಅವಶೇಷಗಳನ್ನು ಕಂಡುಕೊಂಡರು.ಈ ಹಿಂದೆ ಗುರುತು ಬಹಿರಂಗಪಡಿಸದ ನೈರ್ಮಲ್ಯ ಕಾರ್ಮಿಕನನ್ನು ನಂತರ ಸುಳ್ಳು ಹೇಳಿಕೆಗಾಗಿ ಬಂಧಿಸಲಾಯಿತು ಮತ್ತು ಅವರನ್ನು ಸಿ ಎನ್ ಚಿನ್ನಯ್ಯ ಎಂದು ಗುರುತಿಸಲಾಯಿತು.

## ಅನುದಾನಿತ ಶಾಲೆಗಳ ಅತಿಥಿ ಶಿಕ್ಷಕರ ವೇತನಕ್ಕೆ ಪ್ರಯತ್ನ

**ಬೆಳಗಾವಿ:** ಅನುದಾನಿತ ಶಾಲೆಗಳ ಅತಿತಿ ಶಿಕ್ಷಕರಿಗೂ ಸರಕಾರದಿಂದ ವೇತನ ನೀಡುವ ಕುರಿತು ಪ್ರಯತ್ನ ಮಾಡುವುದಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಭರವಸೆ ನೀಡಿದ್ದಾರೆ.

ಭಾನುವಾರ ಬೆಳಗಾವಿಯ ಗೃಹ ಕಚೇರಿಯಲ್ಲಿ ವಿಶ್ವ ಭಾರತ ಸೇವಾ ಸಮಿತಿ ವತಿಯಿಂದ ನಿವೃತ್ತ ಶಿಕ್ಷಕರಿಗೆ, ಸಾಧಕ ಶಿಕ್ಷಕರಿಗೆ ಹಾಗೂ ಸಾಧಕ ರೈತರಿಗಾಗಿ ಹಮ್ಮಿಕೊಳ್ಳಲಾಗಿದ್ದ ಸನ್ಮಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಶಿಕ್ಷಕರು ಹಾಗೂ ರೈತರನ್ನು ಸನ್ಮಾನಿಸಿ ಅವರು ಮಾತನಾಡಿದರು. ಅನುದಾನಿತ ಶಾಲೆಗಳ ಅತಿತಿ ಶಿಕ್ಷಕರಿಗೂ ಸರಕಾರದಿಂದ ವೇತನ ನೀಡುವಂತೆ ಬಹಳಷ್ಟು ಸಂಸ್ಥೆಗಳ ಪ್ರತಿನಿಧಿಗಳು ನನಗೆ ಮನವಿ ಮಾಡಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿಗಳು ಹಾಗೂ ಶಿಕ್ಷಣ ಸಚಿವರ ಜೊತೆ ಚರ್ಚಿಸಿ ಅಗತ್ಯ ಕ್ರಮಕ್ಕೆ ಪ್ರಯತ್ನಿಸುತ್ತೇನೆ ಎಂದು ತಿಳಿಸಿದರು.

ಶಿಕ್ಷಕರ ಸ್ಥಾನ ಸಣ್ಣದಲ್ಲ, ಜನಸಾಮಾನ್ಯರಿಂದ ರಾಷ್ಟ್ರಪತಿಯವರೆಗೆ ಎಲ್ಲರ ಸಾಧನೆಯ ಹಿಂದೆ ಶಿಕ್ಷಕರ ಪಾತ್ರವಿದೆ. ಹಾಗಾಗಿ ಸಮಾಜದಲ್ಲಿ ಶಿಕ್ಷಕರಿಗೆ ದೊಡ್ಡ ಗೌರವವಿದೆ. ನಾನು ಈ ಸ್ಥಾನಕ್ಕೇರಲು ಶಿಕ್ಷಕರೇ ಕಾರಣ. ಶಿಕ್ಷಕರು ಕಲಿಸಿಕೊಟ್ಟ ಸಂಸ್ಕೃತಿ, ಪರಂಪರೆಯನ್ನು ನಾನೆಂದೂ ಮರೆತಿಲ್ಲ. ಹಾಗಾಗಿ ನಾನು ಶಿಕ್ಷಕರಿಗೆ ಸದಾ ಕೃತಜ್ಞನಾಗಿದ್ದೇನೆ ಎಂದು ಅವರು ಹೇಳಿದರು.




ವಿಶ್ವ ಭಾರತ ಸೇವಾ ಸಮಿತಿ ಕಳೆದ 66 ವರ್ಷದಿಂದ ಬಹಳ ದೊಡ್ಡ ಕೆಲಸ ಮಾಡುತ್ತಿದೆ. ಬಹಳಷ್ಟು ಜನರಿಗೆ ಭವಿಷ್ಯ ಕೊಟ್ಟಿದೆ. ಈ ಸಂಸ್ಥೆಗೆ ಅಗತ್ಯವಾದ ಎಲ್ಲ ರೀತಿಯ ನೆರವನ್ನು ನೀಡಲು ನಾನು ಸಿದ್ಧನಿದ್ದೇನೆ ಎಂದು ಸಚಿವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಹಾರಾಷ್ಟ್ರ ರಾಜ್ಯದ ಮಾಜಿ ಸಚಿವರಾದ ಭರಮು ಪಾಟೀಲ, ಮಾಜಿ ಶಾಸಕರಾದ ಪರಶುರಾಮ ಬಾವು ನಂದಿಹಳ್ಳಿ, ವಿಧಾನ ಪರಿಷತ್ ಸದಸ್ಯರಾದ ಚನ್ನರಾಜ ಹಟ್ಟಿಹೊಳಿ, ವಿಶ್ವ ಭಾರತ ಸೇವಾ ಸಮಿತಿಯ ಅಧ್ಯಕ್ಷರಾದ ವಿಜಯ ನಂದಿಹಳ್ಳಿ, ಶಿಕ್ಷಣಾಧಿಕಾರಿ ಆಂಜನೇಯ ಆರ್.ಕೆ, ಮನೋಹರ ಬೆಳಗಾಂವ್ಕರ್, ಯಲ್ಲಪ್ಪ ಬೆಳಗಾಂವ್ಕರ್, ಬಸವರಾಜ ಹಟ್ಟಿಹೊಳಿ, ಬವರಾಜ ತೆರಸೆ, ಯಶವಂತ ಸೋನಾರ್ ಮುಂತಾದವರು ಉಪಸ್ಥಿತರಿದ್ದರು.

## ಯಾತ್ರೆ ಹೆಸರಲ್ಲಿ ಸಮಾಜ ಒಡೆಯೋ ಕೆಲಸ ನಡೆಯುತ್ತಿದೆ

**ಹುಬ್ಬಳ್ಳಿ:** ಬಸವ ಸಂಸ್ಕೃತಿ ಯಾತ್ರೆ ಹೆಸರಲ್ಲಿ ಸಮಾಜ ಒಡೆಯೋ ಕೆಲಸ ಮಾಡುತ್ತಿದ್ದಾರೆ. ಬಸವಣ್ಣನ ಹೆಸರಲ್ಲಿ ಕೆಲವರಿಂದ ಸಮಾಜ ಒಡೆಯೋ ಕೆಲಸ ನಿರಂತರವಾಗಿ ನಡೆದಿದೆ. ಬಸವಣ್ಣ ಹೆಸರು ಬಳಸಿಕೊಂಡು, ಮನಬಂದಂತೆ ಮಾತನಾಡುತ್ತಿದ್ದಾರೆ. ಬಸವೇಶ್ವರ ವಿಚಾರಧಾರೆಗಳನ್ನು ಬಿತ್ತುವುದಾಗಿರಬೇಕಿತ್ತು, ಆದರೆ ಅಲ್ಲಿ ಬಸವಣ್ಣ ಆಚಾರ–ವಿಚಾರಗಳಿಗೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿದೆ. ಮೊದಲು ಬಸವಣ್ಣನವರ ತತ್ವದಂತೆ ನಡೆದುಕೊಳ್ಳಿ ಎಂದು ಶಿರಹಟ್ಟಿ ಫಕೀರೇಶ್ವರ ಮಠದ ದಿಂಗಾಲೇಶ್ವರ ಸ್ವಾಮೀಜಿ ಹೇಳಿದ್ದಾರೆ.

ಸಮಾಜ ಒಡೆಯುವ ಕೆಲಸ ಮಾಡುತ್ತಿದ್ದಾರೆ: ನಗರದಲ್ಲಿಂದು ಮಾಧ್ಯಮಗೋಷ್ಠಿ ನಡೆಸಿ ಮಾತನಾಡಿದ ಅವರು, ವೇದಿಕೆ ಮೇಲೆ ಎಸ್.ಸಿ, 2ಎ ಸಮುದಾಯಕ್ಕೆ ಸೇರಿದ ಸ್ವಾಮೀಜಿಗಳಿದ್ದಾರೆ.

ಅವರು ತಮ್ಮ ತಮ್ಮ ಸಮಾಜವನ್ನು ಬಿಟ್ಟು ಲಿಂಗಾಯತ ಧರ್ಮ ಅಂತ ಬರೆಸುತ್ತಾರಾ? ಅವರ ಮಠಗಳಲ್ಲಿ ವೈದಿಕ ಪರಂಪರೆಯ ಪಾಠ ಶಾಲೆ ನಡೆಸುತ್ತಾರೆ. ಆದರೆ ಭಾಷಣದಲ್ಲಿ ವೈದಿಕ ಪರಂಪರೆಯ ವಿರುದ್ಧ ಮಾತನಾಡ್ತಾರೆ. ಬಸವಣ್ಣನವರ ಹೆಸರಲ್ಲಿ ಸಮಾಜ ಒಡೆಯುವ ಕೆಲಸ ಮಾಡುತ್ತಿದ್ದಾರೆ ಎಂದು ತೋಂಟದಾರ್ಯ ಸ್ವಾಮೀಜಿ ವಿರುದ್ಧ ಕಿಡಿಕಾರಿದರು.

**ಸೆಪ್ಟೆಂಬರ್ 11 ರಂದು ಮಠಾಧಿಪತಿಗಳ ಸಭೆ:** ಕಳೆದ ಬಾರಿ ಕಾಂಗ್ರೆಸ್ ಸರ್ಕಾರ ಇದ್ದಾಗಲೇ ಪ್ರತ್ಯೇಕ ಲಿಂಗಾಯತ ಧರ್ಮ ಹೋರಾಟ ಆರಂಭವಾಯ್ತು. ಈಗಲೂ ಕಾಂಗ್ರೆಸ್ ಸರ್ಕಾರ ಇದೆ. ಈಗ ಮತ್ತೆ ಪ್ರತ್ಯೇಕ ಧರ್ಮ ಹೋರಾಟ ಆರಂಭಗೊಂಡಿದೆ. ಹೆಸರಿಗೆ ಬಸವ ಸಂಸ್ಕೃತಿ ಯಾತ್ರೆ, ವೇದಿಕೆ ಮೇಲೆ ಪ್ರತ್ಯೇಕ ಲಿಂಗಾಯತ ಧರ್ಮದ ಬಗ್ಗೆ ಮಾತ್ರ ಮಾತನಾಡುತ್ತಾರೆ.



ಬೆಂಗಳೂರಿನ ಅಖಿಲ ಭಾರತ ವೀರಶೈವ ಮಹಾಸಭೆಯ ಕಚೇರಿಯಲ್ಲಿ ಸೆಪ್ಟಂಬರ್ 11 ರಂದು ವೀರಶೈವ ಲಿಂಗಾಯತ ಮಹಾಸಭಾ ಅಡಿಯಲ್ಲಿ ಮಹಾಸಭಾ ಪದಾಧಿಕಾರಿಗಳ ಜೊತೆ, ಮಠಾಧಿಪತಿಗಳ ಸಭೆ ನಡೆಯಲಿದೆ ಎಂದರು.

**ಜಾತಿ ಗಣತಿ ವಿಚಾರವಾಗಿ ಸಮಾಜದ ಬಗ್ಗೆ ಸಭೆ:** ಸೆಪ್ಟಂಬರ್ 19 ರಂದು ಹುಬ್ಬಳ್ಳಿಯ ನೆಹರು ಮೈದಾನದಲ್ಲಿ ವೀರಶೈವ ಲಿಂಗಾಯತ ಏಕತಾ ಸಮಾವೇಶವನ್ನು ಆಯೋಜನೆ ಮಾಡಲಾಗಿದೆ. ವೀರಶೈವ ಲಿಂಗಾಯತ ಅನ್ನೋ ಹೋರಾಟಕ್ಕೆ ಪಂಚಪೀಠಾದೀಶ್ವರರು ಬೆಂಬಲ ಸೂಚಿಸಿದ್ದಾರೆ. ನೆಹರೂ ಮೈದಾನದಲ್ಲಿ ನಮ್ಮ ಶಕ್ತಿಯನ್ನು ತೋರಿಸುತ್ತೇವೆ ಎಂದು ಹೇಳಿದರು.

ಮಾಧ್ಯಮಗೋಷ್ಟಿಯಲ್ಲಿ ಮೂರು ಸಾವಿರ ವಿರಕ್ತ ಮಠದ ವಿರೂಪಾಕ್ಷ ಮಹಾಸ್ವಾಮೀಜಿ, ಕಲ್ಯಾಣಪುರ ಮಠ ಕುಂದಗೋಳದ ಬಸವಣ್ಣ ಅಜ್ಜನವರು, ಜಡೆ ಮಠ ಮೊರಬದ ಮಹೇಶ್ವರ ಶಿವಾಚಾರ್ಯರು, ಸಿರಕೋಳದ ಗುರುಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ಸೇರಿದಂತೆ ಪ್ರಮುಖ ಧರ್ಮಗುರುಗಳು ಉಪಸ್ಥಿತರಿದ್ದರು.

## ಕೆ.ಆರ್ ಮಾರುಕಟ್ಟೆಯಲ್ಲಿ ಸ್ಮಾರ್ಟ್ ಪಾರ್ಕಿಂಗ್ ಸೌಲಭ್ಯ

**ಬೆಂಗಳೂರು:** ಕೆ.ಆರ್ ಮಾರುಕಟ್ಟೆಯ ಪಾರ್ಕಿಂಗ್ ಸಮಸ್ಯೆ ಪರಿಹರಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮುಂದಾಗಿದೆ. ಮಾರುಕಟ್ಟೆಗೆ ಬರುವವರ ವಾಹನಗಳಿಗೆ ಸೂಕ್ತ ಪಾರ್ಕಿಂಗ್ ಸೌಲಭ್ಯ ಕಲ್ಪಿಸಲು ನಿರ್ಧರಿಸಿದೆ.

ಈ ಹಿನ್ನೆಲೆಯಲ್ಲಿ ಕೆ.ಆರ್. ಮಾರುಕಟ್ಟೆಯಲ್ಲಿ ಕಾರುಗಳು ಮತ್ತು ದ್ವಿಚಕ್ರ ವಾಹನಗಳಿಗಾಗಿ ಬಹು ಹಂತದ ಸ್ಮಾರ್ಟ್ ಪಾರ್ಕಿಂಗ್ ಸೌಲಭ್ಯವನ್ನು ನಿರ್ಮಿಸಲಿದೆ. 200 ಕಾರುಗಳು ಮತ್ತು 400 ಬೈಕ್‌ಗಳಿಗೆ ಪಾರ್ಕಿಂಗ್ ಗಾಗಿ ಸ್ಥಳಾವಕಾಶ ಕಲ್ಪಿಸಲಿದೆ. ಗಾಂಧಿ ನಗರದ ಫ್ರೀಡಂ ಪಾರ್ಕ್ ಮಾದರಿ ಅಳವಡಿಸಿ ಸೌಲಭ್ಯ ಕಲ್ಪಿಸಲು ಮುಂದಾಗಿದೆ. ಪ್ರಿನ್ಸ್ ರಾಯಲ್ ಪಾರ್ಕಿಂಗ್ ಬ್ಯುಸಿನೆಸ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ಕಲ್ಯಾಣ್ ಎಸ್ ಅವರ ಪ್ರಕಾರ, ಸಂಸ್ಥೆಯು ಕೆ.ಆರ್. ಮಾರುಕಟ್ಟೆಯಲ್ಲಿ ಗಾಂಧಿ ನಗರ ಸ್ಮಾರ್ಟ್ ಪಾರ್ಕಿಂಗ್ ವ್ಯವಸ್ಥೆಯನ್ನು ಪುನರಾವರ್ತಿಸುತ್ತದೆ. ಮೂಲಸೌಕರ್ಯಗಳನ್ನು ಸ್ಥಾಪಿಸುವ ಕೆಲಸ ಸೋಮವಾರದಿಂದ ಪ್ರಾರಂಭವಾಗುತ್ತದೆ ಎಂದಿದ್ದಾರೆ. ಕಂಪನಿಯು ಈಗ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಆಗಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಪ್ರಾಜೆಕ್ಟ್ ವಿಭಾಗ) ದೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಸೆಪ್ಟೆಂಬರ್ 1 ರಂದು ಒಪ್ಪಂದಕ್ಕೆ ಸಹಿ ಹಾಕಲಾಗಿದ್ದು ಇದು 10 ವರ್ಷಗಳವರೆಗೆ ಅಸ್ತಿತ್ವದಲ್ಲಿರುತ್ತದೆ.



ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಕಚೇರಿಯ ಸಂಭಾಗಣದಲ್ಲಿ ಸೋಮವಾರ ಪ್ರಾಧಿಕಾರದ ಸಭೆ ನಡೆಯಿತು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಲಕ್ಷ್ಮಣರಾವ್ ಚಿಂಗಳೆ, ಶಾಸಕರುಗಳಾದ ಆಸೀಫ್ ಸೇಠ್, ಅಭಯ ಪಾಟೀಲ, ಬುಡಾ ಅಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು.

## ಆಧ್ಯಾತ್ಮ, ಸತ್ಯವನ್ನು ಹುಡುಕುವ ಚಿಂತನೆ: ಸಂಗಮನಾಥ ಶ್ರೀ

**ತಾಳಿಕೋಟೆ:** ಆಧ್ಯಾತ್ಮಿಕ ವಿಚಾರಗಳೆಂದರೇ ಬದುಕಿನಲ್ಲಿರುವ ಆಳವಾದ ಅರ್ಥವನ್ನು ಗ್ರಹಿಸುವಂತಹ ಶಕ್ತಿಯಾಗಿದ್ದು ಇದರ ಉದ್ಧೇಶ ಸತ್ಯವನ್ನು ಹುಡುಕುವ ಚಿಂತನೆಗಳಾಗಿದ್ದು ಇದು ಆಂತರಿಕ ಶಾಂತಿ ಪ್ರೀತಿ ಮತ್ತು ಸಾಮರಸ್ಯವನ್ನು ತರುತ್ತದೆ ಎಂದು ಅಂಬಳನೂರಿನ ಖ್ಯಾತ ಪ್ರವಚನಕಾರರಾದ ಶ್ರೀ ಸಂಗಮನಾಥ ದೇವರು ನುಡಿದರು.

ರವಿವಾರರಂದು ಸ್ಥಳೀಯ ಶ್ರೀ ಖಾಸ್ಗತೇಶ್ವರರ 129ನೇ ಹಾಗೂ ವೀರಕ್ತಮಹಾಸ್ವಾಮಿಗಳವರ 11ನೇ ಪುಣ್ಯಸ್ಮರಣೋತ್ಸವದ ಅಂಗವಾಗಿ 5 ದಿನಗಳವರೆಗೆ ಜರುಗಲಿರುವ ಆಧ್ಯಾತ್ಮಿಕ ಪ್ರವಚನದ ಪ್ರಾರಂಭೋತ್ಸವದ ದಿನದಂದು ಭಕ್ತಸಮೂಹಕ್ಕೆ ತಿಳಿಹೇಳುತ್ತಿದ್ದ ಅವರು 84ಲಕ್ಷ ಜೀವರಾಶಿಗಳಲ್ಲಿ ಮಾನವ ಜನ್ಮ ಮಹತ್ವದ ಜನ್ಮ ಇದಾಗಿದ್ದು ಈ ಜನ್ಮದಲ್ಲಿ ಭಗವಂತನನ್ನು ಸ್ಮರಿಸಿದರೇ ಬೇಕಾದದನ್ನು ಸಾಧಿಸಬಹುದಾಗಿದೆ ಎಂದರು.ಮನುಷ್ಯನಿಗೆ ಭಗವಂತ ಮೂರು ಮುಖ್ಯಗುಣಗಳನ್ನು ನೀಡಿದ್ದು ಅವುಗಳಲ್ಲಿ ಮಾತನಾಡುವಂತಹದ್ದೊಂದಾಗಿದ್ದರೆ ಎರಡನೇಯದಾಗಿ ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಲು ಕೈಗಳನ್ನು ಕೊಟ್ಟಿದ್ದಾರೆ ಯಾವಾಗಲೂ ಒಳ್ಳೆಯದನ್ನು ಮಾಡಿ ನಗುವಿನಿಂದ ಜೀವನ ನಡೆಸಲು ನಗುವನ್ನು ಕೊಟ್ಟಿದ್ದಾರೆ ಆದರೂ ಕೂಡ ಮನುಷ್ಯ ಭಗವಂತನನ್ನು ಸ್ಮರಿಸದೇ ಚಿಂತೆಯಲ್ಲಿಯೇ ಸಾಯಲೂ ಮುಂದಾಗಿತ್ತಾನೆಂದರು.ನಗು ಎನ್ನುವುದು ಸುಖವಿದ್ದಾಗ ಬರುತ್ತದೆ ದುಖಃದಲ್ಲಿದ್ದರೆ ಕಣ್ಣಲ್ಲಿ ನೀರು ಬರುತ್ತದೆ ನಗಿಸುವವರು ಸಿಕ್ಕಾಗ ನಗುವನ್ನು ಸದ್ಬಳಕೆಮಾಡಿಕೊಳ್ಳಬೇಕೆಂದರು. ಮಾತು ಎಂಬುದಕ್ಕೆ ಪ್ರಾಮುಖ್ಯತೆಯನ್ನು ನೀಡಬೇಕಾಗಿದೆ ಮಾತು ಎಂಬುದು ನಾಡಿನೊಳಗೆ ಶ್ರೇಷ್ಠತೆ ಪಡೆದಿದೆ ಮಾತಿನಲ್ಲಿ ಏರುಪೇರಾಗಬಾರದೆಂದು ಹೇಳಿದ ಶ್ರೀಗಳು ಸಿದ್ಧಾರೂಡರೂ ಮಾತು ಬೆಳ್ಳಿ ಮೌನ ಬಂಗಾರವೆಂಬುದನ್ನು ಅರ್ಥೈಸಿ ತಿಳಿಹೇಳಿದ್ದಾರೆ 64ವಿದ್ಯೆಗಳಲ್ಲಿ ಮಾತನಾಡುವುದೊಂದು ವಿದ್ಯೆಯಾಗಿದೆ ಎಂದು ಹೇಳಿದ ಅವರು ಶ್ರೀ ವೀರಕ್ತ ಮಹಾಸ್ವಾಮಿಗಳ ಈ ಹಿಂದೆ ಗತಿಸಿಹೋದ ಪವಾಡವೊಂದನ್ನು ನೆರೆದ ಭಕ್ತಸಮೂಹಕ್ಕೆ ವಿವರಿಸಿದರಲ್ಲದೇ ಹುಟ್ಟು ಸಾವಿನ ನಡುವೆ ಇರುವತನಕ ಪ್ರೀತಿ ಪ್ರೇಮದಿಂದ ಬದುಕಬೇಕು ಶರೀರ ಅಸ್ಥಿರವಾಗಿದೆ ಕಣ್ಣು ಕೈ ಎಲ್ಲಾ ಅಂಗಾಗಳನ್ನು ದೇವರು ಎಲ್ಲಿಇಡಬೇಕೋ ಅಲ್ಲಿ ಇಟ್ಟಿದ್ದಾನೆ ಕಾರಣ ಭಗವಂತನ ಸ್ಮರನೇ ಮಾಡುವ ಕಾರ್ಯವಾಗುತ್ತಿರಬೇಕೆಂದರು. ಶ್ರೀ ಖಾಸ್ಗತೇಶ್ವರ ಮಠದ ಬಾಲಶಿವಯೋಗಿ ಶ್ರೀ ಸಿದ್ಧಲಿಂಗ ದೇವರು ಅಧ್ಯಕ್ಷತೆ ವಹಿಸಿದ್ದರು.ಗವಾಯಿಗಳಾದ ಮಹೇಶ ಬಂಟನೂರ,ಬಸವನಗೌಡ ಬಿರಾದಾರ,ಲಕ್ಷಣಸಿಂಗ ವಿಜಾಪೂರ ಸಂಗೀತ ಸೇವೆ ಸಲ್ಲಿಸಿದರು.

ಈ ಸಮಯದಲ್ಲಿ ಗಣ್ಯರಾದ ರಮೇಶ ಸಾಲಂಕಿ, ವಿನೋದ ಕುಮಾರ ಚಿಕ್ಕಮಠ ಮೊದಲಾದವರು ಉಪಸ್ಥಿತರಿದ್ದರು. ಯಕ್ತಾಪುರದ ಶಾಸ್ತ್ರೀಗಳಾದ ಚಂದ್ರಶೇಖರಯ್ಯ ಶ್ರೀಗಳು ಸ್ವಾಗತಿಸಿ ನಿರೂಪಿಸಿದರು.



## ಜಾತ್ರೆಯಲ್ಲಿ ಒಂದಾದ ಸಹಪಾಠಿಗಳು

**ಮಹಾಲಿಂಗಪುರ:** ಇಲ್ಲಿಯ ಎಸ್‌ಸಿಪಿ ಪ್ರೌಢಶಾಲೆಯಲ್ಲಿ 2003ರಲ್ಲಿ ಎಸ್‌ಎಸ್‌ಎಲ್‌ಸಿ ಪಾಸಾದ ಹಳೇ ವಿದ್ಯಾರ್ಥಿಗಳು ಮಹಾಲಿಂಗಪುರದ ಮಹಾಲಿಂಗೇಶ್ವರ ಜಾತ್ರೆಗೆ ಬಂದಾಗ ಮತ್ತೆ ಒಂದಾಗಿ ಗ್ರುಪ್ ಫೋಟೋ ಕ್ಲಿಕ್ಕಿಸಿಕೊಂಡು ಜಾತ್ರೆಯಲ್ಲಿ ನೆನಪಿನ ಯಾತ್ರೆ ಕೈಗೊಂಡ ಅನುಭವ ಪಡೆದರು. 22 ವರ್ಷಗಳ ನಂತರ ಮತ್ತೆ ಒಂದಾದ ಸಹಪಾಠಿಗಳು ಇದೇ ಸಂದರ್ಭದಲ್ಲಿ ಸಭೆ ನಡೆಸಿ ಗುರುವಂದನಾ ಕಾರ್ಯಕ್ರಮ ಮಾಡಿ ಗುರುಗಳಿಗೆ ಗೌರವ ಸಲ್ಲಿಸುವ ಬಗ್ಗೆ ಚರ್ಚಿಸಿದರು.

### ಶಿಕ್ಷಕರ ದಿನಾಚರಣೆ : ಸೇವಾ ನಿವೃತ್ತರಿಗೆ ಹಮ್ಮಿಕೊಂಡ ಸತ್ಕಾರ ಸಮಾರಂಭದಲ್ಲಿ ಶಾಸಕ ಅಶೋಕ ಪಟ್ಟಣ ಕರೆ

# ಶಿಕ್ಷಕರು ತಮ್ಮ ಜವಾಬ್ಧಾರಿ ಅರಿತು ಕೆಲಸ ನಿರ್ವಹಿಸಲಿ

**ರಾಮದುರ್ಗ:** ಶಿಕ್ಷಕರು ದೇಶದ ಭವಿಷ್ಯದ ಪ್ರಜೆಗಳನ್ನು ತಯಾರಿ ಮಾಡುವ ಮಹಾನ್ ಶಕ್ತಿ ಹೊಂದಿದ್ದು, ಇಡೀ ಸಮಾಜವನ್ನು ತಿದ್ದುವ, ಜನತೆಯನ್ನು ಸನ್ಮಾರ್ಗದಲ್ಲಿ ತರುವ ಗುರುತರ ಜವಾಬ್ದಾರಿ ಅವರ ಮೇಲಿದೆ. ತಮ್ಮ ಜವಾಬ್ದಾರಿ ಅರಿತು ಕೆಲಸ ನಿರ್ವಹಿಸಬೇಕು ಎಂದು ವಿಧಾನಸಭೆ ಮುಖ್ಯ ಸಚೇತಕ ಹಾಗೂ ಶಾಸಕ ಅಶೋಕ ಪಟ್ಟಣ ಕರೆ ನೀಡಿದರು.

ಪಟ್ಟಣದ ವಿದ್ಯಾಚೇತನ ಶಾಲಾ ಆವರಣದಲ್ಲಿರುವ ಗುರುಭವನದಲ್ಲಿ ಶುಕ್ರವಾರ ತಾಲೂಕಾಡಳಿತ, ಶಿಕ್ಷಕರ ದಿನೋತ್ಸವ ಸಮಿತಿಯ ನೇತೃತ್ವದಲ್ಲಿ ಏರ್ಪಡಿಸಿದ ಶಿಕ್ಷಕರ ದಿನಾಚರಣೆ ಹಾಗೂ ಸೇವಾ ನಿವೃತ್ತರಿಗೆ ಹಮ್ಮಿಕೊಂಡ ಸತ್ಕಾರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳನ್ನು ಅಷ್ಟೇ ಅಲ್ಲಿದೆ ರಾಜಕಾರಣಿಗಳ ಸರಿ-ತಪ್ಪುಗಳನ್ನು ಗುರುತಿಸಿ, ಅವರಿಗೂ ಒಳ್ಳೆಯ ಮಾರ್ಗದರ್ಶನ ನೀಡುವಲ್ಲಿ ಶಿಕ್ಷಕರು ಮುಂದಾಗಬೇಕು. ವಿದ್ಯಾರ್ಥಿಗಳ ಕ್ರೀಡಾಶಕ್ತಿಗೆ ಪೂರಕವಾಗಿ, ತಾಲೂಕಿನಲ್ಲಿ ಭವ್ಯ ಕ್ರೀಡಾಂಗಣ ನಿರ್ಮಾಣ ಮಾಡಬೇಕಿದ್ದು, ಶೀಘ್ರದಲ್ಲಿ ಈ ಕುರಿತು ಕ್ರಮ ತೆಗೆದುಕೊಳ್ಳುತ್ತೇನೆ. ತಾಲೂಕಿನಲ್ಲಿ ನೂತನವಾಗಿ, ಮುರಾರ್ಜಿ ವಸತಿ ಶಾಲೆ ಸೇರಿದಂತೆ ವಿವಿಧ ಶಾಲೆಗಳ ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಲಾಗಿದೆ. ತಾಲೂಕಿನ ಸುಮಾರು ಆರು ಪ್ರಾಥಮಿಕ ಶಾಲೆಗಳನ್ನು ಉನ್ನತೀಕರಿಸಿದ ಪ್ರೌಢಶಾಲೆಗಳಾಗಿ ಪರಿವರ್ತಿಸಲಾಗಿದೆ. ಶಿಕ್ಷಕರ ಮೇಲೆ ಅನೇಕ ದೂರುಗಳಿದ್ದು, ಅವೆಲ್ಲಗಳನ್ನು ಸರಿಪಡಿಸಿಕೊಂಡು ಸರಕಾರಿ ಶಾಲೆಯ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಕಾರ್ಯಪ್ರವೃತ್ತರಾಗಬೇಕು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸುರೇಂದ್ರ ಕಾಂಬಳೆ ಮಾತನಾಡಿ, ರಾಮದುರ್ಗ ತಾಲೂಕು ಶೈಕ್ಷಣಿಕವಾಗಿ ಹಿಂದುಳಿದೆ ಎಂಬ ಹಣೆಪಟ್ಟಿಯಿಂದ ಹೊರಬರಲು, ಮಕ್ಕಳಿಗೆ ಶಿಕ್ಷಕರು ಗುಣಮಟ್ಟದ ಶಿಕ್ಷಣ ನೀಡಬೇಕು. ಇಲಾಖೆಯಲ್ಲಿರುವ ಸರ್ವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಶೈಕ್ಷಣಿಕ ಪ್ರಗತಿಗೆ ಶ್ರಮಿಸುವುದಾಗಿ ಭರವಸೆ ನೀಡಿದರು.ಇದೇ ಸಂದರ್ಭದಲ್ಲಿ ಸೇವಾ ನಿವೃತ್ತಿ ಹೊಂದಿದ ಸುಮಾರು 25ಕ್ಕೂ ಹೆಚ್ಚು ಶಿಕ್ಷಕರನ್ನು ಕಾರ್ಯಕ್ರಮದ ಪರವಾಗಿ ಸತ್ಕರಿಸಲಾಯಿತು.ಪುರಸಭೆ ಅಧ್ಯಕ್ಷೆ ಲಕ್ಷ್ಮೀ ಕಡಕೋಳ, ಸದಸ್ಯ ನಾಗರಾಜ ಕಟ್ಟಿಮನಿ, ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಬಸವರಾಜ ಐನಾಪೂರ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ರಾಜಶೇಖರ ಹಿರೇಮಠ, ಎಲ್. ಆರ್. ಕನಕಪ್ಪನವರ ಸೇರಿದಂತೆ ಇತರರಿದ್ದರು. ಕ್ಷೇತ್ರ ಸಮನ್ವಯಾಧಿಕಾರಿ ಜೆ.ಸಿ. ಶೀಲವಂತಮಠ ಸ್ವಾಗತಿಸಿದರು. ಶಿಕ್ಷಣ ಸಂಯೋಜಕ ಆನಂದತೀರ್ಥ ಜೋಶಿ ಕಾರ್ಯಕ್ರಮ ನಿರೂಪಿಸಿದರು.



ಪಟ್ಟಣದ ವಿದ್ಯಾಚೇತನ ಶಾಲಾ ಆವರಣದಲ್ಲಿರುವ ಗುರುಭವನದಲ್ಲಿ ಏರ್ಪಡಿಸಿದ ಶಿಕ್ಷಕರ ದಿನೋತ್ಸವ ಕಾರ್ಯಕ್ರಮವನ್ನು ವಿಧಾನಸಭೆ ಮುಖ್ಯ ಸಚೇತಕ ಹಾಗೂ ಶಾಸಕ ಅಶೋಕ ಪಟ್ಟಣ ಉದ್ಘಾಟಿಸಿದರು.

# ನಗರ ಸೇವಕ ಜೀರಗ್ಯಾಳ ಕಾರ್ಯಕ್ಕೆ ಮೆಚ್ಚುಗೆ

**ಬೆಳಗಾವಿ:** ಮಹಾನಗರ ಪಾಲಿಕೆಯ ವಾರ್ಡ್ ನಂಬರ್ 32 ನಗರ ಸೇವಕ ಸಂದೀಪ ಜೀರಗ್ಯಾಳ ಅವರು ವಿನೂತನ ಹೆಜ್ಜೆ ಇಟ್ಟಿದ್ದಾರೆ. ಮಹಾನಗರ ಪಾಲಿಕೆ ವ್ಯಾಪ್ತಿಯ ನಗರ ಸೇವಕರಿಗೆ ಪ್ರತಿ ವರ್ಷ 50 ರಿಂದ 60 ಲಕ್ಷ ವಾರ್ಡ್ ಅಭಿವೃದ್ಧಿಗೆ ಅನುದಾನ ನೀಡಲಾಗುವುದು. ನಗರ ಸೇವಕರು ವಾರ್ಡುಗಳ ವಿವಿಧ ಕಾಮಗಾರಿಗಳನ್ನು ಕೈಗೊಂಡು ಮಾದರಿ ವಾರ್ಡುಗಳಾಗಿ ಅಭಿವೃದ್ಧಿ ಪಡಿಸಬೇಕು ಎಂದು ಮಹಾನಗರ ಪಾಲಿಕೆ ಆಯುಕ್ತರಾದ ಶುಭ ಬಿ ಅವರು ಕರೆ ನೀಡಿದರು .

ಹನುಮಾನ ನಗರದ ವೃತ್ತದ ಬಳಿಯಲ್ಲಿ ಶನಿವಾರ (ಸೆ.06) ನಗರ ಸೇವಕರ ಅನುದಾನದಲ್ಲಿ ಖರಿಸಿದರ ಅಂದಾಜು 3 ಲಕ್ಷದ ವೆಚ್ಚದ ಗ್ರಾಸ್ ಕಟಿಂಗ್, ಗಿಡ ಕಟಾವು, ಪ್ರೆಷರ್ ವಾಶರ್ ಸೇರಿದಂತೆ ವಿವಿಧ ಉಪಕರಣಗಳನ್ನು ವಿತರಿಸಿ ಅವರು ಮಾತನಾಡಿದರು.ಪ್ಲಾಸ್ಟಿಕ್ ಮುಕ್ತ ವಾರ್ಡ್ ನಿರ್ಮಾಣಕ್ಕೆ ಇಲ್ಲಿನ ನಗರ ಸೇವಕರು ನಿರಂತರ ಸಕ್ರಿಯವಾಗಿ ಕೆಲಸ ಮಾಡುತ್ತಿದ್ದಾರೆ. ಸಾರ್ವಜನಿಕರು ಇದಕ್ಕೆ ಬೆಂಬಲ ಕೊಟ್ಟು ಸ್ವಚ್ಛತೆ ಕಾಪಾಡಿಕೊಳ್ಳಬೇಕು ಎಂದರು.

ವಾರ್ಡ್ ನಂಬರ್ 32 ನಗರ ಸೇವಕರು ಪರಿಸರ ಕಾಳಜಿ ವಹಿಸಿ ಕೆಲಸ ಮಾಡುವತ್ತ ನಗರ ಸೇವಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ನಗರ ಸೇವಕರು ತಮ್ಮ ಅನುದಾನವನ್ನು ಸದ್ಬಳಕೆ ಮಾಡಿಕೊಂಡು ನಗರ ಸ್ವಚ್ಛತೆಗೆ ಆದ್ಯತೆ ನೀಡಬೇಕು.ಅಂಗಡಿ ಮುಂಗಟ್ಟುಗಳಲ್ಲಿ ಪ್ಲಾಸ್ಟಿಕ್ ಬಳಕೆಯಾದಲ್ಲಿ ಅಂತವುಗಳನ್ನು ಮಹಾನಗರ ಪಾಲಿಕೆಯ ಗಮನಕ್ಕೆ ತರಬೇಕು ಎಂದು ಪಾಲಿಕೆ ಆಯುಕ್ತೆ ಶುಭ. ಬಿ ಹೇಳಿದರು. ಸ್ವಚ್ಛತೆಗೆ ಮೊದಲ ಆದ್ಯತೆ ಕೊಟ್ಟು ರಸ್ತೆ, ಚರಂಡಿಗಳ ಸ್ವಚ್ಛತೆ, ಹೆಚ್ಚುವರಿ ಗಿಡ ಕೊಂಬೆಗಳ ಕಟಾವು ಸೇರಿದಂತೆ ಇತರೆ ಉಪಯೋಗಕ್ಕೆ ಅಗತ್ಯ ಪರಿಕರಗಳನ್ನು ಸುಮಾರು ಮೂರು ಲಕ್ಷದ ಅನುದಾನದಲ್ಲಿ ಖರೀದಿಸಲಾಗಿದೆ ಎಂದು ವಾರ್ಡ್ ನಂಬರ್ 32 ನಗರ ಸೇವಕ ಸಂದೀಪ ಜೀರಗ್ಯಾಳ ಹೇಳಿದರು. ನಗರ ಸೇವಕರು ತಮ್ಮ ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳಬೇಕು. ಯಾವುದೇ ತೊಂದರೆಯಾಗದಂತೆ ವಾರ್ಡ್ ವ್ಯಾಪ್ತಿಯಲ್ಲಿ ನಿರಂತರ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಸಾರ್ವಜನಿಕರ ಸಮಸ್ಯೆಗೆ ಸ್ಪಂದಿಸಿ ಜನಸ್ನೇಹಿಯಾಗಬೇಕು ಎಂದು ಸಂದೀಪ ಜೀರಗ್ಯಾಳ ಹೇಳಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಪರಿಸರ ಅಧಿಕಾರಿ ಹನುಮಂತ ಕಲಾದಗಿ, ಆರೋಗ್ಯ ನಿರೀಕ್ಷಕ ಸಂತೋಷ ಕಾಂಬಳೆ ಸೇರಿದಂತೆ ವಿವಿಧ ಮುಖಂಡರು, ಹಿರಿಯ ನಾಗರಿಕರು ಗಣ್ಯರು ಹಾಜರಿದ್ದರು.





## ಅಕ್ರಮ ಅಕ್ಕಿ ಸಾಗಾಟ: ಅಕ್ಕಿ ವಶ

**ವಿಜಯಪುರ:** ವಿಜಯಪುರದ ಭೂತನಾಳ ಕೆರೆಯ ಹತ್ತಿರ ಅಕ್ರಮವಾಗಿ ಪಡಿತರ ಅಕ್ಕಿ ಸಾಗಾಟ ಮಾಡುತ್ತಿದ್ದ ಸಂದರ್ಭದಲ್ಲಿ ಆಹಾರ ಇಲಾಖೆ ಅಧಿಕಾರಿಗಳು ದಾಳಿ ನಡೆಸಿ,ಅಕ್ರಮವಾಗಿ ಸಾಗಿಸುತ್ತಿದ್ದ ಅಕ್ಕಿ ವಶಕ್ಕೆ ಪಡೆದಿದ್ದಾರೆ. ಭೂತನಾಳ ಕೆರೆ ಹತ್ತಿರ ಲಾರಿಯಲ್ಲಿ ಅಕ್ರಮವಾಗಿ ಅಕ್ಕಿ ಸಾಗಾಟ ಮಾಡುತ್ತಿರುವ ಸಂದರ್ಭದಲ್ಲಿ ಆಹಾರ ಇಲಾಖೆ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳು ದಾಳಿ ನಡೆಸಿ ರೂ.7,83,760 ಮೌಲ್ಯದ 346 ಕ್ವಿಂಟಲ್ 26 ಕೆಜಿ ಅಕ್ಕಿ ಹಾಗೂ ಲಾರಿ ವಶಕ್ಕೆ ಪಡೆದು ಶೇಖರ ಮದ್ಯೆಯನ್ ಎಂಬುವವರ ಮೇಲೆ ಆದರ್ಶ ನಗರ ಪೊಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಈ ದಾಳಿಯಲ್ಲಿ ಆಹಾರ ಇಲಾಖೆಯ ಸಹಾಯಕ ನಿರ್ದೇಶಕರಾದ ನಾಮದೇವ ಚವ್ಹಾಣ, ಆಹಾರ ಇಲಾಖೆಯ ಆಹಾರ ನಿರೀಕ್ಷಕರಾದ ವಿಜಯಕುಮಾರ ಗುಮಶೆಟ್ಟಿ,ಆದರ್ಶನಗರ ಪಿ ಎಸ್ ಐ ಪ್ರೇಮಾ ಕೂಚಬಾಳ ಹಾಗೂ ಎಎಸ್ಐ ವಿ.ಕೆ.ಪವಾರ ಹಾಗೂ ಆಹಾರ ಇಲಾಖೆ ಹಾಗೂ ಪೋಲಿಸ್‌ಸಿಬ್ಬಂದಿಗಳು ಇದ್ದರು ಎಂದು ಆಹಾರ ಇಲಾಖೆಯ ಉಪ ನಿರ್ದೇಶಕರಾದ ವಿನಯಕುಮಾರ ಪಾಟೀಲ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ತೇರದಾಳ ತಾಲೂಕು ಕಸಾಪ ಘಟಕ ಉದ್ಘಾಟನೆ

# ಕಸಾಪದಿಂದ ಕನ್ನಡ ಭಾಷೆ ಮೌಲ್ಯ ಹೆಚ್ಚಾಗಲಿ: ಸವದಿ

**ತೇರದಾಳ:** ನೂತನ ತಾಲೂಕು ಆಗಿರುವ ತೇರದಾಳ ತಾಲೂಕು ಕಸಾಪ ಘಟಕ ಉದ್ಘಾಟನೆಗೊಂಡಿರುವುದು ಸಂತಸದ ಸಂಗತಿಯಾಗಿದೆ. ಕಸಾಪದಿಂದ ಕನ್ನಡ ಭಾಷೆಯ ಮೌಲ್ಯ ಮತ್ತಷ್ಟು ಗಟ್ಟಿಗೊಳ್ಳುವಂತಾಗಲಿ ಎಂದು ಶಾಸಕ ಸಿದ್ದು ಸವದಿ ಹೇಳಿದರು.

ಇಲ್ಲಿನ ಪ್ರಭುಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡಿದ್ದ ತೇರದಾಳ ತಾಲೂಕು ಕಸಾಪ ಘಟಕ ಉದ್ಘಾಟಿಸಿ ಮಾತನಾಡಿದರು.

ಕನ್ನಡ ಸಾಹಿತ್ಯಕ್ಕೆ ಇರುವ ಶಕ್ತಿ ಬಹಳ ದೊಡ್ಡದು. ಆದ್ದರಿಂದ ಸಾಹಿತ್ಯ ಚಟುವಟಿಕೆಗಳು ಈ ಭಾಗದಲ್ಲಿ ನಿರಂತರವಾಗಿ ನಡೆಯಬೇಕು. ಸರಕಾರ ಹಾಗೂ ಪರಿಷತ್ ನೀಡುವ ಸೌಲಭ್ಯಗಳು ಸದುಪಯೋಗವಾಗಬೇಕೆಂದು ಹೇಳಿದರು. ತಹಸೀಲ್ದಾರ್ ವಿಜಯಕುಮಾರ ಕಡಕೋಳ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ ಮೂಲಕ ಅಲ್ಲಮನ ಕ್ಷೇತ್ರ ಮತ್ತಷ್ಟು ಬೆಳೆಯುವಂತಾಗಲಿ. ವಚನ ಸಾಹಿತ್ಯದ ಜತೆಗೆ ನಾಡಿನ ನೆಲ ಜಲದ ಕುರಿತು ಜಾಗೃತಿ ಮೂಡುವಂತಾಗಲಿ ಎಂದು ಆಶಿಸಿದರು. ಕಸಾಪ ಜಿಲ್ಲಾಧ್ಯಕ್ಷ ಶಿವಾನಂದ ಶೇಲ್ಲಿಕೇರಿ, ಪುರಸಭೆ ಅಧ್ಯಕ್ಷೆ ಶಿಲ್ಪಾ ರೋಡಕರ, ಮಾಜಿ ಅಧ್ಯಕ್ಷ ಬಸವರಾಜ ಬಾಳಿಕಾಯಿ, ನೌಕರರ ಸಂಘದ ತಾಲೂಕು ಅಧ್ಯಕ್ಷ ಬಸವರಾಜ ಹನಗಂಡಿ, ತಾಲೂಕು ಸಮಿತಿ ಅಧ್ಯಕ್ಷ ಭುಜಬಲಿ ಕೆಂಗಾಲಿ ಸೇರಿದಂತೆ ಹಲವರು ಕನ್ನಡ ಭಾಷೆ ಹಾಗೂ ಸಾಹಿತ್ಯದ ಕುರಿತು ಹಲವು ವಿಚಾರಗಳನ್ನು ಹಂಚಿಕೊಂಡರು. ಅಲ್ಲಮಪ್ರಭು ದೇವಸ್ಥಾನ ಅರ್ಚಕ ಬಸಪರಯ್ಯ ಬಾವಿ ಸಾನ್ನಿಧ್ಯ ವಹಿಸಿದ್ದರು. ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ, ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮದ ಮಾಜಿ ನಿರ್ದೇಶಕ ಪ್ರವೀಣ ನಾಡಗೌಡ, ಪುರಸಭೆ ಉಪಾಧ್ಯಕ್ಷೆ ನಸ್ರೀನ್‌ಬಾನು ನಗಾರ್ಜಿ, ಅನ್ನಪ್ರಸಾದ ಸಮಿತಿ ಅಧ್ಯಕ್ಷ ಬಸವರಾಜ ಕರಲಟ್ಟಿ, ಕಸಾಪ ತೇರದಾಳ ತಾಲೂಕು ಅಧ್ಯಕ್ಷ ಗಂಗಾಧರ ಮೋಪಗಾರ, ಕರವೇ ಅಧ್ಯಕ್ಷ ಮೈನುದ್ದೀನ ಮೊಕಾಸಿ, ಸಿದ್ದೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಶಂಕರ ಅಥಣಿ ಇನ್ನಿತರಿದ್ದರು.




## ರೋಗ ಬರುವ ಮನ್ನ ಎಚ್ಚರ ವಹಿಸಿ

**ಗೋಕಾಕ:** ರೋಗಗಳು ಬರುವ ಮನ್ನ ಎಚ್ಚರ ವಹಿಸಿದರೆ ಆಸ್ಪತ್ರೆ ಮತ್ತು ಮಾತ್ರೆಗಳಿಂದ ದೂರವಿರಬಹುದು ಎಂದು ನಗರದ ಹಿರಿಯ ವೈದ್ಯರಾದ ಹಿರಿಯ ನಾಗರಿಕರ ವಿಚಾರ ವೇದಿಕೆಯ ಅಧ್ಯಕ್ಷ ಡಾ;ಎ.ಎಂ. ಮುರಗೋಡ ತಿಳಿಸಿದರು.

ನಗರದ ನಿವೃತ್ತ ಸರ್ಕಾರಿ ನೌಕರರ ಸಂಘ , ಹಿರಿಯ ನಾಗರಿಕರ ವಿಚಾರ ವೇದಿಕೆ ಆಶ್ರಯದಲ್ಲಿ ತಾಲೂಕಾ ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಆವರಣದಲ್ಲಿಯ ಗಣಪತಿ ಮಂದಿರದಲ್ಲಿ ಆಯೋಜಿಸಿದ್ದ , ಹಿರಿಯ ನಾಗರಿಕರ ಉಚಿತ ಆರೋಗ್ಯ ತಪಾಸಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು. ಆರೋಗ್ಯವಾಗಿದ್ದರೆ, ಸುಖವಾಗಿ ಬಾಳಬಹುದು. ಇಲ್ಲವಾದರೆ ದುಡಿದ ಹಣವನ್ನು ಆಸ್ಪತ್ರೆಗೆ ಖರ್ಚುಮಾಡಬೇಕಾಗುತ್ತದೆ. ಆದ್ದರಿಂದ ರೋಗದ ಲಕ್ಷಣ ಕಾಣುವ ಮುನ್ನವೇ ಆಗ್ಗಾಗ್ಗೆ ಆರೋಗ್ಯ ತಪಾಸಣೆ ಮಾಡಿಸಿಕೊಂಡು ವೈದ್ಯರು ನೀಡುವ ಸಲಹೆ ಪಾಲಿಸಬೇಕು ಎಂದು ತಿಳಿಸಿದರು.

ಆರೋಗ್ಯ ಶಿಬಿರಗಳಿಂದ ಬಡವರಿಗೆ ಸಾಕಷ್ಟು ಅನುಕೂಲವಾಗುತ್ತದೆ. ಇಂತಹ ಶಿಬಿರಗಳು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಆಯೋಜಿಸಬೇಕು ಎಂದು ತಿಳಿಸಿದರು.

ಇಸಿಜಿ 30, ಚರ್ಮರೋಗ 60, ಕಿವಿ ತೊಂದರೆ 60, ಕಣ್ಣು ತಪಾಸಣೆ 20 , ಹೃದಯ ರೋಗ 34 ಜನರು ಹೀಗೆ ವಿವಿಧ ರೋಗಿಗಳ ಆರೋಗ್ಯ ತಪಾಸಣೆ ನಡೆಸಲಾಯಿತು.

ಈ ಕಾರ್ಯಕ್ರಮದಲ್ಲಿ ತಾಲೂಕಾ ಅರೋಗ್ಯ ವೈದ್ಯಾಧಿಕಾರಿ ಡಾ; ಮುತ್ತಣ್ಣ ಕೊಪ್ಪದ, ತಾಲೂಕಾ ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಯ ಮುಖ್ಯ ವೈದ್ಯಾಧಿಕಾರಿ ಡಾ;ರವೀಂದ್ರ ಅಂಟಿನ,ಡಾ;ಬಿ.ಎಸ್.ಮದಭಾವಿ ಸೇರಿದಂತೆ,ರೋಟರಿ ಕ್ಲಬ್, ಸಾರ್ವಜನಿಕ ಆಸ್ಪತ್ರೆಯ ನುರಿತ ವೈದ್ಯರು ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

## ಇಂದು ಛಾಯಾಚಿತ್ರ ಸ್ಪರ್ಧೆ ಆಯೋಜನೆ

**ಧಾರವಾಡ:** ರಾಜ್ಯ ಸರಕಾರದ ನಿರ್ದೇಶನದ ಹಿನ್ನಲೆಯಲ್ಲಿ ಸೆ.15 ರ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಹಿನ್ನಲೆಯಲ್ಲಿ ಧಾರವಾಡ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಸಮಾಜ ಕಲ್ಯಾಣ ಇಲಾಖೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಂಯುಕ್ತವಾಗಿ ಸೆ.09 ರಂದು ಡಿಸಿ ಕಚೇರಿ ಹತ್ತಿರದ ವಾರ್ತಾ ಇಲಾಖೆಯ ವಾರ್ತಾಭವನದಲ್ಲಿ ವಿದ್ಯಾರ್ಥಿಗಳಿಗೆ, ಛಾಯಾಗ್ರಾಹಕರಿಗೆ ಪ್ರಜಾಪ್ರಭುತ್ವ ಕುರಿತ ಛಾಯಾಚಿತ್ರ ಸ್ಪರ್ಧೆ ಮತ್ತು ಪ್ರದರ್ಶನವನ್ನು ಆಯೋಜಿಸಲಾಗಿದೆ.

ಸ್ಪರ್ಧೆಗೆ ಎಲ್ಲರಿಗೂ ಮುಕ್ತ ಅವಕಾಶವಿದ್ದು, ವಿದ್ಯಾರ್ಥಿಗಳಿಗೆ ಆದ್ಯತೆ ಇರುತ್ತದೆ. ಪ್ರಜಾಪ್ರಭುತ್ವ ಕುರಿತು ಛಾಯಾಚಿತ್ರಗಳ ಸ್ಪರ್ಧೆ ಮತ್ತು ಪ್ರದರ್ಶನದಲ್ಲಿ ಮತದಾನ, ಮತದಾನ ಪ್ರಚಾರ, ಮತಗಟ್ಟೆ, ಮತದಾನಕ್ಕೆ ಸಂಭಂದಿಸಿದ ಚಿತ್ರಗಳನ್ನು ಪ್ರದರ್ಶಿಸಬಹುದಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸುವ ಛಾಯಾಗ್ರಾಹಕರು 8,12 ಸೈಜಿನ ಫೋಟೋಗಳನ್ನು ಪ್ರದರ್ಶನಕ್ಕೆ ನೀಡಬಹುದು. ಒಬ್ಬ ಛಾಯಾಗ್ರಾಹಕ 2 ಫೋಟೋಗಳನ್ನು ಪ್ರದರ್ಶಿಸಬಹುದು.ಸ್ಪರ್ಧೆಗೆ ಕಳುಹಿಸುವ ಛಾಯಾಚಿತ್ರಗಳು ಸ್ವಂತದ್ದಾಗಿರಬೇಕು. ಛಾಯಾಚಿತ್ರಗಳ ಆಯ್ಕೆಯಲ್ಲಿ ತೀರ್ಪುಗಾರರ ತೀರ್ಮಾನವೆ ಅಂತಿಮವಾಗಿರುತ್ತದೆ.ಸ್ಪರ್ಧೆಯಲ್ಲಿ ಆಯ್ಕೆ ಆಗುವ ಛಾಯಾಚಿತ್ರಗಳನ್ನು ರಾಜ್ಯಮಟ್ಟದ ಸ್ಪರ್ಧೆಗಳಲ್ಲಿ ಪ್ರದರ್ಶಿಸಲಾಗುತ್ತದೆ. ಸೆ. 9 ರಂದು ಬೆಳಿಗ್ಗೆ 9:30 ರಿಂದ 11 ಗಂಟೆಯೊಳಗೆ ಆಸಕ್ತರು ತಮ್ಮ ಛಾಯಾಚಿತ್ರಗಳನ್ನು ಪ್ರದರ್ಶಿಸಬಹುದು. ನಂತರ ಹಿರಿಯ ಮತ್ತು ತಜ್ಞ ಛಾಯಾಗ್ರಾಹಕರು ಇರುವ ಆಯ್ಕೆ ಸಮಿತಿಯಿಂದ ಉತ್ತಮ ಛಾಯಾಚಿತ್ರಗಳನ್ನು ಆಯ್ಕೆ ಮಾಡಲಾಗುತ್ತದೆ. ಮಧ್ಯಾಹ್ನ 12 ಗಂಟೆಗೆ ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲರಿಗೂ ಸ್ಥಳದಲ್ಲಿಯೇ ಮುಖ್ಯ ಅತಿಥಿಗಳು ಪ್ರಮಾಣಪತ್ರ ವಿತರಿಸುತ್ತಾರೆ.

'ಆಸಕ್ತರು, ನಾಳೆ ಸೆ.08 ರ ಸಂಜೆ ಐದು ಗಂಟೆಯೊಳಗೆ ವರ್ತಾ ಇಲಾಖೆ ಕಚೇರಿಯಲ್ಲಿ ಸಂಜೆ 5. ಗಂಟೆಯೊಳಗೆ ಖುದ್ದಾಗಿ ನಂದು ಅಥವಾ ದೂರವಾಣಿ: 9538076619 ಅಥವಾ 81238 69108 ಗೆ ಮತ್ತು ಪೋಟೊಗ್ರಾಫರ್ ಸಂಘದ ಪ್ರಮುಖರಾದ ದತ್ತಪ್ರಸಾದ ವೆಂಕಟೇಶ್-9845128653 , ಕಿರಣ ಬಾಕಳೆ -94481 36285

ಪ್ರಭಯ್ಯ ಲಕ್ಕುಂಡಿಮಠ - 9986268406 ಅವರನ್ನು ಸಂಪರ್ಕಿಸಲು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕಿ ಪಿ.ಶುಭ ಹಾಗೂ ವಾರ್ತಾ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಸ್. ಎಂ.ಹಿರೇಮಠ ಅವರು ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರೈತ ಸಂಘಕ್ಕೆ ಮಹಿಳಾ ಪದಾಧಿಕಾರಿಗಳ ನೇಮಕ



**ಬೈಲಹೊಂಗಲ:** ಅಖಂಡ ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕಾ ಗ್ರಾಮೀಣ ಹಾಗೂ ನಗರ ಘಟಕಕ್ಕೆ ಮಹಿಳಾ ಪದಾಧಿಕಾರಿಗಳನ್ನು ಈಚೆಗೆ ನೇಮಕ ಮಾಡಲಾಯಿತು.

ಪಟ್ಟಣದ ಬೆಳಗಾವಿ ರಸ್ತೆಯಲ್ಲಿನ ರೈತ ಭವನದಲ್ಲಿ ಸಂಘಟಣೆಯ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ ಹುಂಬಿ ಇವರ ನೇತೃತ್ವದಲ್ಲಿ ಸದಸ್ಯರು ಸಭೆ ಸೇರಿ ಮಹಿಳಾ ಗ್ರಾಮೀಣ ಘಟಕಕ್ಕೆ ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು. ಶಾಂತವ್ವಾ ಯರಗಣ್ಣವರ (ಗೌರವಾಧ್ಯಕ್ಷೆ), ಸಾಬವ್ವ ಹುಡೇದ (ಅಧ್ಯಕ್ಷೆ), ಮೋದಿನಬಿ ಮುಲ್ಲಾ (ಉಪಾಧ್ಯಕ್ಷೆ), ರತ್ನವ್ವ ಹುಡೇದ(ಪ್ರಧಾನ ಕಾರ್ಯದರ್ಶಿ), ಶಾಂತವ್ವಾ ಸಾಲಿಮಠ(ಸಹ ಕಾರ್ಯದರ್ಶಿ), ಗಂಗವ್ವ ಕುರುಬಗಟ್ಟಿ (ಖಜಾಂಚಿ)ಯಾಗಿ ಆಯ್ಕೆಯಾಗಿದ್ದಾರೆ.

ನಗರ ಘಟಕಕ್ಕೆ- ಮಹಾದೇವಿ ಹುಡೇದ (ಅಧ್ಯಕ್ಷೆ), ಶಾರವ್ವಾ ಹುಡೇದ(ನಗರ ಉಪಾಧ್ಯಕ್ಷೆ), ಗಂಗವ್ವ ಭಟ್ಟಿ(ಪ್ರಧಾನ ಕಾರ್ಯದರ್ಶಿ), ಶಾಂತವ್ವಾ ಮೋಖಾಶಿ(ಸಹ ಕಾರ್ಯದರ್ಶಿ), ಶ್ರೀದೇವಿ ಭಟ್ಟಿ (ಖಜಾಂಚಿ) ಯಾಗಿ ಆಯ್ಕೆ ಮಾಡಲಾಗಿದೆ. ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜ ಹಣ್ಣಿಕೇರಿ, ಶಂಕರೆಪ್ಪ ಕಡಕೋಳ, ತಾಲೂಕಾಧ್ಯಕ್ಷ ವಿಠ್ಠಲ ಯಾಸನ್ನವರ, ಉಪಾಧ್ಯಕ್ಷ ಆನಂದಗೌಡಾ ಪಾಟೀಲ, ಕಾರ್ಯದರ್ಶಿ ಶಂಕರಯ್ಯ ಕುಲಕರ್ಣಿ, ನಗರ ಅಧ್ಯಕ್ಷ ಅಣ್ಣಪ್ಪ ಗುಮತಿ, ಉಪಾಧ್ಯಕ್ಷ ಶ್ರೀಶೈಲ ಬೋರಕನವರ, ಅರ್ಜುನ ಪಡೆಣ್ಣವರ, ಶಂಕರ ಸುಣಗಾರ, ಅಶೋಕ ಮತ್ತಿಕೊಪ್ಪ, ಅಪ್ಪಾಸಾಹೇಬ ಲಕ್ಕುಂಡಿ, ವಿರೇಶ ಮೆಕ್ಕೆ, ರಘು ಶೀಗೀಹಳ್ಳಿ, ರಾಜು ಸಂಗೊಳ್ಳಿ, ರುದ್ರಪ್ಪ ಹಾಲಗಿಮರ್ಡಿ, ವಿಠ್ಠಲ ಇಂಚಲ, ಚನ್ನಪ್ಪ ಮರಡಿಮನಿ, ಫಕ್ಕೀರಪ್ಪ ಬೋರಕನವರ, ಆನಂದ ಹುಂಬಿ, ಸೋಮಪ್ಪ ಜಮನೂರು, ದುಂಡಯ್ಯ ಕುಲಕರ್ಣಿ ಮುಂತಾದವರು ಉಪಸ್ಥಿತರಿದ್ದರು.

# ಕನ್ನಡ ಶಾಲೆಗಳಿಗೆ ಅನುದಾನಕ್ಕೆ ಸಿಎಂಗೆ ಮನವಿ

**ಬಸವನಬಾಗೇವಾಡಿ:** ರಾಜ್ಯದಲ್ಲಿ 1995 ರಿಂದ ಪ್ರಾರಂಭವಾದ ಕನ್ನಡ ಮಾಧ್ಯಮ ಶಾಲಾ-ಕಾಲೇಜುಗಳಿಗೆ ಎಲ್ಲಾ ಭಾಗ್ಯಗಳ ಜೊತೆ ವೇತನಾನುದಾನ ಭಾಗ್ಯವನ್ನು ನೀಡುವಂತೆ ವಿಜಯಪುರ ಜಿಲ್ಲಾ ಅನುದಾನ ರಹಿತ ಶಾಲಾ ಕಾಲೇಜುಗಳ ಆಡಳಿತ ಮಂಡಳಿಗಳ ಒಕ್ಕೂಟದ ಅಧ್ಯಕ್ಷ ಬಸವರಾಜ ಪೂಜಾರಿ ಅವರು ಆಲಮಟ್ಟಿ ಜಲಾಶಯಕ್ಕೆ ಬಾಗಿನ ಅರ್ಪಿಸಲು ಶನಿವಾರ ಆಗಮಿಸಿದ ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.



ಅವರು ಸಲ್ಲಿಸಿದ ಮನವಿಯಲ್ಲಿ ಹುಟ್ಟಿದ ಪ್ರತಿಯೊಂದು ಮಗುವಿಗೂ ಮಾತೃ ಭಾಷೆಯಲ್ಲಿ ಶಿಕ್ಷಣ ಕೊಡಬೇಕಾದದ್ದು ಸರ್ಕಾರದ ಜವಾಬ್ದಾರಿ. ಆದರೆ ಸರ್ಕಾರವೇ ರಾಜ್ಯದ ಎಲ್ಲಾ ಭಾಗಗಳಲ್ಲಿ ಶಾಲಾ-ಕಾಲೇಜುಗಳನ್ನು ತೆರೆದು ಶಿಕ್ಷಣ ನೀಡಲು ಸಾಧ್ಯವಾಗದ ಕಾರಣ ಖಾಸಗಿಯವರು ಮತ್ತು ಮಠ ಮಾನ್ಯಗಳು ಶಾಲಾ-ಕಾಲೇಜುಗಳನ್ನು ತೆರೆದು ಶಿಕ್ಷಣ ನೀಡುತ್ತಾ ಸರ್ಕಾರದ ಜವಾಬ್ದಾರಿಯನ್ನು ಕಡಿಮೆ ಮಾಡಿವೆ. ಸುಪ್ರಿಂ ಕೋರ್ಟ್‌ತೀರ್ಪಿನ ಪ್ರಕಾರ ಶಿಕ್ಷಣ ನೀಡುವ ಎಲ್ಲಾ ವಿದ್ಯಾಸಂಸ್ಥೆಗಳಿಗೆ ಅನುದಾನ ನೀಡಬೇಕಾಗಿರುವುದು ಸರ್ಕಾರದ ಕರ್ತವ್ಯ. ಈ ವಿಚಾರದಲ್ಲಿ ಮಲತಾಯಿ ಧೋರಣೆ ತಳೆದಿರುವುದು ಕನ್ನಡಿಗರ ದುರ್ದೈವ ! ಕರ್ನಾಟಕದಲ್ಲಿ ಸ್ವಾತಂತ್ರ್ಯ ಪೂರ್ವ ಮತ್ತು ನಂತರದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರದ ವತಿಯಿಂದ ವೇತಾನುನುದಾನವನ್ನು ನೀಡಲಾಗುತ್ತಿತ್ತು. ನಂತರ ಈ ಪ್ರಕ್ರಿಯೆ 1986 ಕ್ಕೆ ಸ್ಥಗಿತಗೊಂಡಿತು. 1999 ರಲ್ಲ ಕಾಂಗ್ರೆಸ್ ಸರ್ಕಾರವು 1987 ರಿಂದ 1992 ರವರೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾಸಂಸ್ಥೆಗಳಿಗೆ ವೇತಾನುದಾನವನ್ನು ನೀಡಿತು. ಆನಂತರ 2006 ರಲ್ಲಿ ಅಧಿಕಾರಕ್ಕೆ ಬಂದ ಸಮ್ಮಿಶ್ರ ಸರ್ಕಾರಗಳು 1987 ರಿಂದ 1995 ರವರೆಗೆ ಎಲ್ಲಾ ವರ್ಗದ ಶಿಕ್ಷಣ ಸಂಸ್ಥೆಗಳಿಗೆ ವೇತನಾನುದಾವನ್ನು ನೀಡಿತು. ಅಲ್ಲಿಂದ ಇಲ್ಲಿಯವರೆಗೆ ಒಂದೇ ಒಂದು ವರ್ಷವೂ ವಿಸ್ತರಣೆಯಾಗಲಿಲ್ಲ. 2010 ರಿಂದ ನಿರಂತರವಾಗಿ ಹೋರಾಟ ಮಾಡಿದರೂ ಪ್ರಯೋಜನವಾಗದೇ ಕನ್ನಡ ಶಾಲೆಗಳು ಅವನತಿಯತ್ತ ಸಾಗಿದವು.ನಂತರ 2019 ರಲ್ಲಿ ಶಿಕ್ಷಣಸಚಿವರು ಹಲವು ಸಭೆಗಳನ್ನು ನಡೆಸಿ, ಕನ್ನಡ ಶಾಲೆಗೆ ಅನುದಾನ ಕೊಡಲು ಮನಸ್ಸು ಮಾಡಿ ಇಲಾಖೆಯಿಂದಲೇ ಮಾಹಿತಿಯನ್ನು ಕ್ರೋಢೀಕರಿಸಿ ಐದೈದು ವರ್ಷಗಳಿಗೆ ಬ್ಲಾಕ್ ವಾರು (1995-2000, 2001-2005, 2006-2010, 2011-2015, 2016-2019) ಯೋಜನೆ ರೂಪಿಸಿ, ಬಡ್ಡೆಟ್ ನಲ್ಲಿ ಘೋಷಿಸುವುದಾಗಿ ವಿಧಾನ ಪರಿಷತ್ತಿನಲ್ಲಿ ಸದಸ್ಯರ ಪ್ರಶ್ನೆಗಳಿಗೆ ಭರವಸೆ ನೀಡಿದ್ದರು. ಆದರೂ ಸಮಸ್ಯೆ ಬಗೆಹರಿದಿಲ್ಲ ಎಂದು ತಿಳಿಸಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಭಾಗ್ಯಗಳನ್ನು ನೀಡಿರುವ ಕಾಂಗ್ರೆಸ್ ಸರ್ಕಾರ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿರುವಂತೆ 2012 ರ ತನಕ ಪ್ರಾರಂಭವಾದ ಶಾಲಾ ಕಾಲೇಜುಗಳನ್ನು ಅನುದಾನಕ್ಕೊಳಪಡಸಬೇಕು. ರಾಜ್ಯಾದಾದ್ಯಂತ 29 ವರ್ಷಗಳ ನ್ಯಾಯಯುತ ಬೇಡಿಕೆಯಾದ 1995 ರಿಂದ ಪ್ರಾರಂಭವಾದ ಕನ್ನಡ ಮಾಧ್ಯಮ ಶಾಲಾ ಕಾಲೇಜುಗಳಿಗೆ ವೇತನಾನುದಾನವನ್ನು ದೊರಕಿಸಿ ಕನ್ನಡ ಭಾಷೆಯ ಉಳಿವಿಗೆ ಒತ್ತು ನೀಡುವ ಮೂಲಕ ಈ ಶಾಲಾ ಕಾಲೇಜುಗಳಲ್ಲಿ ಕೆಲಸ ಮಾಡುವ ಸಾವಿರಾರು ಶಿಕ್ಷಕರ ಬದುಕಿಗೆ ಹಾಗೂ ವ್ಯಾಸಂಗ ಮಾಡುತ್ತಿರುವ ಲಕ್ಷಾಂತರ ಬಡ ಮಕ್ಕಳಿಗೆ ಆಸರೆಯಾಗಬೇಕೆಂದು ತಮ್ಮಲ್ಲಿ ಕೋರುತ್ತೇವೆ ಎಂದು ತಿಳಿಸಲಾಗಿದೆ.




## 'ನಮ್ಮ ಕ್ಲಿನಿಕ್' ಆರೋಗ್ಯ ಕೇಂದ್ರ ಉದ್ಘಾಟನೆ

**ಬೈಲಹೊಂಗಲ:** ಜಿಲ್ಲಾಡಳಿತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಆಯುಸ್ಮಾನ ಆರೋಗ್ಯ ಕೇಂದ್ರ, ಸಾರ್ವಜನಿಕ ಆಸ್ಪತ್ರೆ ಬೈಲಹೊಂಗಲ ಇವುಗಳ ಆಶ್ರಯದಲ್ಲಿ ಶನಿವಾರ ಪಟ್ಟಣದ ಹರಳಯ್ಯ ಕಾಲೋನಿಯಲ್ಲಿ ನಮ್ಮ ಕ್ಲಿನಿಕ್‌ನ್ನು ಶನಿವಾರ ಶಾಸಕ ಮಹಾಂತೇಶ ಕೌಜಲಗಿ ಉದ್ಘಾಟಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಆಯ್.ಪಿ.ಗಡಾದ, ತಹಶೀಲ್ದಾರ ಹಣಮಂತ ಶಿರಹಟ್ಟಿ, ಪುರಸಭೆ ಅಧ್ಯಕ್ಷ ವಿಜಯ ಬೋಳಣ್ಣವರ, ಉಪಾಧ್ಯಕ್ಷ ಬುಡ್ಡೇಸಾಬ್ ಶಿರಸಂಗಿ, ಸದಸ್ಯ ಅರ್ಜುನ ಕಲಕುಟಕರ, ಮುಖ್ಯಾಧಿಕಾರಿ ವಿರೇಶ ಹಸಬಿ, ತಾಲೂಕಾ ಆರೋಗ್ಯಾಧಿಕಾರಿ ಡಾ.ಸಂಜಯ ಸಿದ್ದಣ್ಣವರ, ಇಓ ಸಂಜೀವ ಜುನ್ನೂರು, ಮುಖ್ಯ ವೈಧ್ಯಾಧಿಕಾರಿ ಡಾ.ಪ್ರವೀಣ ಕುಲಕರ್ಣಿ, ಗದಿಗೆಪ್ಪ ಮಡಿವಾಳರ, ಕುತುಬುದ್ದೀನ ಮುಲ್ಲಾ ಮುಂತಾದವರು ಉಪಸ್ಥಿತರಿದ್ದರು.

### ಬ್ರಹ್ಮಶ್ರೀ ನಾರಾಯಣಗುರುಗಳ ಜಯಂತಿ । ಭಾವಚಿತ್ರಕ್ಕೆ ಪುಷ್ಪ ನಮನ

# ಜಗತ್ತಿಗೆ ಆದರ್ಶ ಪ್ರಾಯರಾದವರು ನಾರಾಯಣಗುರು: ಲೆಂಕೆನ್ನವರ





**ಬಾಗಲಕೋಟೆ:** ಬ್ರಹ್ಮಶ್ರೀ ನಾರಾಯಣಗುರುಗಳ ಚಿಂತನೆಗಳು ವಿಶ್ವಶಾಂತಿ ಮತ್ತು ಸಹಬಾಳ್ವೆಗೆ ಪೂರಕವಾಗಿದ್ದು, ಇಂದಿನ ಜಗತ್ತಿಗೆ ಆದರ್ಶಪ್ರಾಯವಾಗಿವೆ ಎಂದು ನಗರಸಭೆ ಅಧ್ಯಕ್ಷೆ ಸವಿತಾ ಲೆಂಕೆನ್ನವರ ಹೇಳಿದರು.

ಜಿಲ್ಲಾ ಪಂಚಾಯತ ಹಳೆಯ ಸಭಾಂಗಣದಲ್ಲಿ ರವಿವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ಬ್ರಹ್ಮಶ್ರೀ ನಾರಾಯಣ ಗುರುಗಳ ಜಯಂತಿ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಪುಷ್ಪ ಅರ್ಪಿಸಿ ಮಾತನಾಡಿದ ಅವರು ಸಂಸ್ಕೃತ ಭಾಷೆಯಲ್ಲಿ ಅದ್ವಿತೀಯ ಪಂಡಿತರಾಗಿದ್ದ ನಾರಾಯಣಗುರು ಕೇರಳ ಸಮಾಜದಲ್ಲಿ ಅಸ್ಪೃಶ್ಯತೆ ಪಿಡುಗಿಗೆ ತನ್ನದೇ ಆದ ನಿಲುವನ್ನು ಹೊಂದಿ ದೇಶ ಸೇವೆಯೇ ಈಶ ಸೇವೆ ಎಂದು ಭೋದಿಸಿದವರು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿ ಸಮಾಜದಲ್ಲಿರುವ ಅಸ್ಪೃಶ್ಯತೆ, ಜಾತಿ ಭೇದ, ಅಂಧಶ್ರದ್ಧೆ ಹಬ್ಬಿಕೊಂಡಿದ್ದ ಕಾಲದಲ್ಲಿ ಒಂದೇ ಜಾತಿ, ಒಂದೇ ಧರ್ಮ, ಒಂದೇ ದೇವರು ಮಾನವನಿಗಾಗಿ ಎಂಬ ಮಹಾಮಂತ್ರವನ್ನು ನೀಡಿದವರು ನಾರಾಯಣಗುರು. ಅವರ ದೃಷ್ಠಿಯಲ್ಲಿ ಮಾನವತ್ವವೇ ನಿಜವಾದ ಧರ್ಮ, ಪ್ರೀತಿಯೇ ನಿಜವಾದ ಆರಾಧನೆ ಎಂದು ಪ್ರತಿಪಾದಿಸಿದ್ದರು. ಶಿಕ್ಷಣವೇ ಶಕ್ತಿ ಎಲ್ಲರಿಗೂ ಶಿಕ್ಷಣ ಸಿಗಬೇಕು. ಸಮಾಜದಲ್ಲಿ ಸಮಾನತೆ ಬರಬೇಕು ಎಂದು ಹೋರಾಡಿದವರು ಎಂದರು.

ಸಾಮೂಹಿಕ ಪ್ರಗತಿ ಒಬ್ಬರ ಪ್ರಗತಿ ಎಲ್ಲರ ಪ್ರಗತಿಗೆ ದಾರಿ ಮಾಡಿಕೊಡಬೇಕು ಎಂಬುದು ಅವರ ಆಶಯವಾಗಿತ್ತು. ಜಾತಿ, ಭೇದ, ಅಸಮಾನತೆ ಹಾಗೂ ಅಜ್ಞಾನವನ್ನು ತೊರೆದು ಮಾನವೀಯತೆಗಳನ್ನು ಪಾಲಿಸುವುದು ನಮ್ಮ ಕರ್ತವ್ಯವಾಗಿದೆ. ಸಮಾಜದ ದುರ್ಬಲ ವರ್ಗಗಳನ್ನು ಮೇಲೆತ್ತುವುದು ನಮ್ಮ ಹೊಣೆಗಾರಿಕೆಯಾಗಿದೆ. ಅವರು ಹಾಕಿಕೊಟ್ಟ ಆದರ್ಶಗಳನು ನಮ್ಮ ಜೀವನದಲ್ಲಿ ಒಳವಡಿಸಿಕೊಳ್ಳಬೇಕಿದೆ ಎಂದರು.

ಆಹಾರ ಇಲಾಖೆಯ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ ಮಾತನಾಡಿ ಈಡಿಗ ಸಮುದಾಯ ಸಣ್ಣದಾಗಿದ್ದರೂ ವಿವಿಧ ಕ್ಷೇತ್ರಕ್ಕೆ ಉತ್ತಮ ಕೊಡುಗೆ ನೀಡಿದೆ. ಇದಕ್ಕೆ ಉದಾಹರಣೆ ಎಂಬಂತೆ ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ, ಸದ್ಯದ ಶಿಕ್ಷಣ ಮಂತ್ರಿ ಮಧು ಬಂಗಾರಪ್ಪ, ಹೆಸರಾಂತ ಚಿತ್ರನಟ ಡಾ.ರಾಜಕುಮಾರ, ಶಿವರಾಜಕುಮಾರ, ಪುನಿತ್ ರಾಜಕುಮಾರ ಹಾಗೂ ಉದ್ಯಮಿ ಹರಿ ಖೋಡೆ ಅವರು ಕೊಡುಗೆ ನೀಡಿದ್ದನ್ನು ಕಾಣಬಹುದಾಗಿದೆ ಎಂದರು. ಉಪನ್ಯಾಸಕರಾಗಿ ಆಗಮಿಸಿದ್ದ ಡಾ.ಎಂ.ಜಿ.ಕಿತ್ತಲಿ ಮಾತನಾಡಿ 1856ರಲ್ಲಿ ಕೇರಳದ ತಿರುವನಂತಪುರದ ಚಂಪಜಂತಿ ಎಂಬ ಪುಟ್ಟ ಹಳ್ಳಿಯಲ್ಲಿ ಜನಿಸಿದ ನಾರಾಯಣ ಗುರುಗಳು ಧರ್ಮ, ಜಾತಿ, ಸಂಪ್ರದಾಯ, ಉಡುಗೆ ತೊಡುಗೆ ಏನೇ ಇರಲಿ ಎಲ್ಲರೂ ಮನುಷ್ಯ ಜೀವಿಗಳೇ ಆಗಿದ್ದಾರೆ ಎಂದವರು. ಸಮಾಜದಲ್ಲಿದ್ದ ಜಾತಿ ಭೇದದ ಗೋಡೆಯನ್ನು ಒಡೆದು ಎಲ್ಲರೂ ಭಾತೃತ್ವ ಮತ್ತು ಸಮಾನತೆಯ ಪರಿಕಲ್ಪಣೆಯನ್ನು ಬಿತ್ತಿದ್ದರು. ಅವರ ಜೀವನ ಹೋರಾಟ ಆದರ್ಶ ಪ್ರಾಯವಾಗಿತ್ತು ಎಂದರು. ಕಾರ್ಯಕ್ರಮದಲ್ಲಿ ಸಮುದಾಯದ ಮುಖಂಡರಾದ ಮಹಾಂತೇಶ ಈಳಗೇರ, ಅಶೋಕ ಕರಡಿ ಸೇರಿದಂತೆ ಇತರರು ಉಪಸ್ಥಿತರಿದ್ದರು. ಶಂಕರಲಿಂಗ ದೇಸಾಯಿ ಕಾರ್ಯಕ್ರಮ ನಿರೂಪಿಸಿದರು.

## ಭಾವೈಕ್ಯತೆಯಿಂದ ಈದ್ ಮಿಲಾದ್ ಆಚರಣೆ

**ಕೊಪ್ಪಳ:** ತಾಲೂಕಿನ ಗಿಣಿಗೇರಿ ಗ್ರಾಮದಲ್ಲಿ ಜಾಮಿಯಾ ಮಸ್ಜಿದ್ ಕಮಿಟಿ ವತಿಯಿಂದ ಶೋಷಣೆ ಮುಕ್ತ ಸಮಾಜದ ಪ್ರತಿಪಾದಕ, ಮಹಾನ್ ಮಾನವತಾವಾದಿ, ಲೋಕ ಪ್ರವಾದಿ ಹಜರತ್ ಮೊಹಮ್ಮದ್ ಪೈಗಂಬರ್ ರವರ ಜಯಂತೋತ್ಸವವನ್ನು ಭಾವೈಕ್ಯತೆಯಿಂದ ಶಾಂತಿ ಸೌಹಾರ್ದಕ್ಕೆ ಮಾದರಿಯಾಗುವಂತೆ ಅದ್ದೂರಿಯಾಗಿ ಆಚರಿಸಲಾಯಿತು

ಪೊಲೀಸ್ ಇಲಾಖೆ ಸೇರಿದಂತೆ, ಊರಿನ ಗುರುಹಿರಿಯರು, ಯುವ ಮಿತ್ರರು ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು ಇದೆ ವೇಳೆ ಮಂಜುನಾಥ ಸ್ಪೋರ್ಟ್ ಕ್ಲಬ್ ಸಂಘದ ವತಿಯಿಂದ ಮುಸ್ಲಿಂ ಬಾಂಧವರಿಗೆ ಸಿಹಿ, ಹಣ್ಣು, ಹಂಪಲು ಹಂಚಿ,ಕೊಪ್ಪಳ ಜಿಲ್ಲೆಯ ಗಿಣಿಗೇರಿ ಗ್ರಾಮದಲ್ಲಿ ಸೌಹಾರ್ದತೆ ಮೆರೆದಿದ್ದಾರೆ

ಈ ಸಂದರ್ಭದಲ್ಲಿ ಸುರೇಶ ಮೂರಮನಿ, ಶಿವು ಹೂಗಾರ್, ಮಹೇಶ್ ಪೂಜಾರ, ಜಗದೀಶ್ ಗೊಟಹನುಮವ್ವನವರ, ರಾಜು ಕೊಲ್ಕರ್, ಯಮನೂರ್, ಶ್ರೀಕಾಂತ್ ಪೂಜಾರಿ, ರಾಜು ಗೌಳಿ, ಸೋಮು ಬಾವಿ, ಜಗದೀಶ್, ಹನುಮಂತ್,ವರುಣ್ ಆರ್ ಹಲಿಗೆರಿ, ಸೇರಿದಂತೆ ಅನೇಕರು ಮಂಜುನಾಥ್ ಸ್ಪೋರ್ಟ್ಸ್ ಕ್ಲಬ್ ಸಂಘದ ಅಧ್ಯಕ್ಷರು ಉಪಾಧ್ಯಕ್ಷರು ಸರ್ವ ಸದಸ್ಯರು ಗಿಣಿಗೇರ ಊರಿನ ಗುರು ಹಿರಿಯರು ಉಪಸ್ಥಿತರಿದ್ದರು





## ಗೊಬ್ಬರದ ಲಾರಿ ಪಲ್ಟಿ: ಚಾಲಕ ಸಾವು

**ರಾಮದುರ್ಗ:** ಹುಬ್ಬಳ್ಳಿಯಿಂದ ರಾಮದುರ್ಗ ಮಾರ್ಗವಾಗಿ ಜಮಖಂಡಿಗೆ ರಸಾಯನಿಕ ಗೊಬ್ಬರ ಸಾಗಿಸುತ್ತಿದ್ದ ಲಾರಿ ಪಲ್ಟಿಯಾಗಿ ಸ್ಥಳದಲ್ಲಿಯೇ ಚಾಲಕ ಮೃತಪಟ್ಟ ಘಟನೆ ಪಟ್ಟಣದ ಸಮೀಪ ಶಿವನಮೂರ್ತಿ ದೇವಸ್ಥಾನ ಹತ್ತಿರದ ಮುಳ್ಳೂರ ಗುಡ್ಡದ ರಸ್ತೆಯಲ್ಲಿ ಗುರುವಾರ ತಡರಾತ್ರಿ ನಡೆದಿದೆ.

ಲಾರಿ ಚಾಲಕ ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲೂಕಿನ ಬುಡಕುಂಟಿ ಗ್ರಾಮದ ನಿವಾಸಿ, ಶರಣಪ್ಪಗೌಡ ಭೀಮನಗೌಡ ಹರಳಲ್ಲಿ (40) ಮೃತ ದುರ್ದೈವಿಯಾಗಿದ್ದು, ಹುಬ್ಬಳ್ಳಿಯ ನವಲೂರು ರೇಲ್ವೆ ಸ್ಟೇಷನ್‌ನಿಂದ ಡಿಎಪಿ ಗೊಬ್ಬರವನ್ನು ಜಮಖಂಡಿ ಕಡೆಗೆ ಸಾಗಿಸುತ್ತಿದ್ದ ಸಂದರ್ಭದಲ್ಲಿ ಶಿವನ ಮೂರ್ತಿಯ ಹತ್ತಿರ ಗುಡ್ಡದ ತಿರುವು ರಸ್ತೆಯಲ್ಲಿ ಚಾಲಕನ ನಿಯಂತ್ರಣ ತಪ್ಪಿ ವಾಹನ ಪಲ್ಟಿಯಾಗಿ ಲಾರಿಯಲ್ಲಿದ್ದ ಗೊಬ್ಬರದ ಚೀಲಗಳು ನೆಲಕ್ಕೆ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ.

ಘಟನಾ ಸ್ಥಳಕ್ಕೆ ರಾಮದುರ್ಗ ಪಿಎಸ್‌ಐ ಸವಿತಾ ಮುನ್ಯಾಳ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಘಟನೆ ಕುರಿತು ಮೃತನ ಸಹೋದರ ನಾಗರಾಜು ರಾಮದುರ್ಗ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

# ಮಹನೀಯರನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯ




**ಧಾರವಾಡ:** ಸಮಾಜದ ಹಿತಕ್ಕಾಗಿ ತನು-ಮನ-ಧನದಿಂದ ಶ್ರಮಿಸಿದ ಮಹನೀಯರನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಉಪ್ಪಿನ ಬೆಟಗೇರಿ ಮೂರುಸಾವಿರ ಮಠದ ಶ್ರೀ ಕುಮಾರಸ್ವಾಮೀಜಿ ಹೇಳಿದರು.

ರವಿವಾರ ನಗರದ ಕೆಸಿಸಿ ಬ್ಯಾಂಕಿನ ಪ್ರಧಾನ ಕಚೇರಿಯಲ್ಲಿ ಆಯೋಜಿಸಿದ್ದ ಕೆಸಿಸಿ ಬ್ಯಾಂಕ್ ನೌಕರರ ಪತ್ತಿನ ಸಹಕಾರಿ ಸಂಘದ 63 ನೇ ವಾರ್ಷಿಕ ಮಹಾ ಸಭೆಯ ಸಾನಿಧ್ಯವಹಿಸಿ ಅವರು ಆಶೀರ್ವಚನ ನೀಡಿದರು.

ತಮ್ಮ ಪರಿವಾರ ಮಾತ್ರವಲ್ಲದೇ ಇಡೀ ಸಮಾಜ ಸಮೃದ್ಧವಾಗಿರಬೇಕು ಎಂಬ ಆಶಯದಿಂದ ಉತ್ತರ ಕರ್ನಾಟಕ ಭಾಗದಲ್ಲಿನ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಪರಿಸ್ಥಿತಿ ಸುಧಾರಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾದ ಹಿರಿಯರು ಅನೇಕ ಪ್ರಸಾದ ನಿಲಯ, ಹಣಕಾಸು, ಶೈಕ್ಷಣಿಕ ಸಂಘ-ಸಂಸ್ಥೆಗಳನ್ನು ಹುಟ್ಟುಹಾಕಿದರು.

ಲಿಂ. ಮೃತ್ಯುಂಜಯ ಅಪ್ಪಗಳು, ಲಿಂ.ಹಾನಗಲ್ಲ ಕುಮಾರ ಸ್ವಾಮಿಗಳು, ಶಿರಸಂಗಿ ಲಿಂಗರಾಜರು, ದಿವಾನ ಬಹದ್ದೂರ ಶಾಂತವೀರಪ್ಪ ಮೆಣಸಿನಕಾಯಿ, ರಾವ ಬಹದ್ದೂರ ಆರ್.ಸಿ ಅರಟಾಳ ಇನ್ನಿತರರು ಸಮಾಜವನ್ನು ದೈವದ ಸ್ವರೂಪ ಎಂದು ಭಾವಿಸಿದರು. ಆ ಕಾರಣಕ್ಕಾಗಿ ಶತಮಾನದ ಹಿಂದೆಯೇ ಹಲವಾರು ಸಂಘ-ಸಂಸ್ಥೆಗಳನ್ನು ಕಟ್ಟಿ ಬೆಳೆಸಿ 'ಸಮಾಜ ದೇವೋಭವ' ಎಂಬ ಉದಾತ್ತ ಧ್ಯೇಯವನ್ನು ಸಾಕಾರಗೊಳಿಸಿದರು. ಆ ಎಲ್ಲ ಪ್ರಾತಃಸ್ಮರಣೀಯರ ಶ್ರಮದ ಫಲವನ್ನು ಇಂದು ನಾವು ಅನುಭವಿಸುತ್ತಿದ್ದೇವೆ.

ಅವರ ಪರಿಶ್ರಮ ಮತ್ತು ಉಪಕಾರವನ್ನು ನಾವು ನಿತ್ಯ ನೆನೆಯಬೇಕು. ಆದರೆ, ಅಂತಹ ಮಹನೀಯರ ಬಗ್ಗೆ ಕೆಲವರು ಲಘುವಾಗಿ ಮಾತನಾಡುತ್ತಿರುವುದು ನೋವಿನ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು. .

ಮುಖ್ಯ ಅತಿಥಿಯಾಗಿದ್ದ ಕೆಸಿಸಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಸುನೀತಾ ಸಿದ್ರಾಮ ಮಾತನಾಡಿ, ಬ್ಯಾಂಕಿನ ಸಂಕಷ್ಟದ ಸಮಯದಲ್ಲಿಯೂ ನೌಕರರು ತಮ್ಮ ಕರ್ತವ್ಯ ನಿಭಾಯಿಸಿದ್ದರಿಂದ ಪ್ರಸ್ತುತ ಆರ್ಥಿಕವಾಗಿ ಸಧೃಡವಾಗಿದೆ. ನೌಕರರ ಪರಿಶ್ರಮದಿಂದ ಬ್ಯಾಂಕ್ ಸತತ ಲಾಭದತ್ತ ಮುನ್ನಡೆದಿದ್ದು, ಜನರ ಪ್ರೀತಿ-ವಿಶ್ವಾಸ ಗಳಿಸಿದೆ ಎಂದರು. ಸಂಘದ ಅಧ್ಯಕ್ಷ ಶಿವಾನಂದ ಹೂಗಾರ ಅಧ್ಯಕ್ಷತೆವಹಿಸಿದ್ದರು. ಕೆಸಿಸಿ ಬ್ಯಾಂಕಿನ ಉಪಾಧ್ಯಕ್ಷ ನಿಂಗನಗೌಡ ಮರಿಗೌಡ್ರ, ನಿರ್ದೇಶಕ ಸಿದ್ದಪ್ಪ ಸಪೂರಿ, ಸಂಘದ ಆಡಳಿತ ಮಂಡಳಿ ಸದಸ್ಯರಾದ ವಿ.ಎಸ್. ಪಾಟೀಲ, ಎಸ್.ಬಿ.ತಳವಾರ, ಎಸ್.ಐ.ಕಮ್ಮಾರ, ಗದಿಗೆಪ್ಪ ಫಕ್ಕೀರಗೌಡರ, ಆನಂದ ಕುಂದಗೋಳ, ಸುರೇಶ ಅಂಬಿಗೇರ,ಎಂ.ಬಿ.ಜೀವಾಪೂರ, ನೀಲಮ್ಮ ಗಚ್ಚಿನಕಟ್ಟಿ, ಮಂಜುಳಾ ವೀರೇಶಮಠ, ಸಿ.ಡಿ.ಮಲ್ಲಾಪುರ ಸ್ವಾಗತಿಸಿ, ವಂದಿಸಿದರು. ಮಹಾರಾಜಗೌಡ ಪಾಟೀಲ ನಿರೂಪಿಸಿದರು.


## ಕಂಕಣವಾಡಿಗೆ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ

**ಮಹಾಲಿಂಗಪುರ:** ಸಮೀಪದ ರನ್ನಬೆಳಗಲಿ ನಿವಾಸಿ, ನಾಗರಾಳ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆ ತೋಟ ನಂ.1ರ ಶಿಕ್ಷಕ ರಮೇಶ ಕಂಕಣವಾಡಿ ಅವರಿಗೆ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಕೊಡಮಾಡುವ ಜಿಲ್ಲಾಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಲಭಿಸಿದೆ.



ಗ್ರಾಮೀಣ ಪ್ರದೇಶದಲ್ಲಿ 17 ವರ್ಷ ಸೇವೆ, ಡಿಜಿಟಲ್ ಮಾದರಿಯ ನಲಿಕಲಿ ಕೊಠಡಿ ನಿರ್ವಹಣೆ ಮತ್ತು ಉತ್ತಮ ಕಲಿಕೆ, 1000 ಕ್ಕಿಂತ ಹೆಚ್ಚಿನ ಪುಟಗಳ ಇ-ಲರ್ನಿಂಗ್ ಮಟೀರಿಯಲ್ ತಯಾರಿಸಿ ರಾಜ್ಯದ ನೂರಾರು ಶಾಲೆಗಳಿಗೆ ಸರಬರಾಜು, ನಲಿಕಲಿ ಕೊಠಡಿಯಲ್ಲಿ ವಿಭಿನ್ನ ಹಾಗೂ ವಿಶಿಷ್ಟ ಕಲಿಕೋಪಕರಣ ತಯಾರಿಕೆಯಿಂದ ಮಕ್ಕಳ ಕಲಿಕೆಯಲ್ಲಿ ಬದಲಾವಣೆ, ಸ್ವಂತ ಖರ್ಚಿನಲ್ಲಿ ನಲಿಕಲಿ ಕೊಠಡಿ ನಿರ್ವಹಣೆ(ಟಿಎಲ್‌ಎಂ), ಸ್ವಂತ ಖರ್ಚಿನಲ್ಲಿ ಶಾಲೆಗೆ ಸಂಪೂರ್ಣ ಸುಣ್ಣಬಣ್ಣ ಹೂದೋಟ ನಿರ್ಮಾಣ, ಇ-ಕಂಟೆಂಟ್ ಸಂವೇದನೆ ಪಾಠಗಳ ವಿಡಿಯೋ ಚಿತ್ರೀಕರಣದಲ್ಲಿ ಭಾಗಿ, ಶಿಕ್ಷಕರ ಸಹಪಠ್ಯ ಚಟುವಟಿಕೆ ತಾಲೂಕಾ ಮಟ್ಟದಲ್ಲಿ ಪ್ರಥಮ, ಜಿಲ್ಲಾ ಮಟ್ಟದಲ್ಲಿ ದ್ವಿತೀಯ, ಸ್ಥಾನ, ಟಿಎಲ್‌ಎಂ ಮೇಳದಲ್ಲಿ ಪ್ರಥಮ ಸ್ಥಾನ, ಸರಕಾರಿ ನೌಕರರ ಕ್ರೀಡಾಕೂಟದಲ್ಲಿ ವೇಟ್ ಲಿಪ್ಟಿಂಗ್ ಸ್ಪರ್ಧೆಯಲ್ಲಿ 3 ಬಾರಿ ಪ್ರಥಮ ಹಾಗೂ ರಾಜ್ಯಮಟ್ಟಕ್ಕೆ ಆಯ್ಕೆ, ಹೃದಯದ ಹೂಬಾಣಗಳು ಹಾಗೂ ಮೌನದೊಳಗಿನ ಆಲಾಪ ಎಂಬ ಎರಡು ಕವನ ಸಂಕಲನಗಳು ಪ್ರಕಟ, ರಾಜ್ಯ ಮಟ್ಟದ ಶೈಕ್ಷಣಿಕ ವಿಚಾರಗೋಷ್ಠಿ, ಕವಿಗೋಷ್ಠಿ ಹಾಗೂ ಕಾವ್ಯಕಮ್ಮಟಗಳಲ್ಲಿ ಭಾಗಿ, ದಸರಾ ಹಾಗೂ ಬೇಸಿಗೆ ರಜೆಯಲ್ಲಿಯೂ ಶಾಲೆಯಲ್ಲಿ ಪಾಠೋಪಕರಣ ತಯಾರಿಕೆ, ನಲಿಕಲಿ ಇಎನ್‌ಕೆ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಣೆ, .ಇವರ ಶಾಲೆಯ ನಲಿಕಲಿ ಕೊಠಡಿ ವೀಕ್ಷಣೆಗೆ ರಾಜ್ಯದ ನಾನಾ ಜಿಲ್ಲೆಗಳಿಂದ ಹಲವು ಶಿಕ್ಷಕರ ತಂಡಗಳು ಬೇಟಿ, ಎಫ್‌ಎಲ್‌ಎನ್ ಮಕ್ಕಳಿಗಾಗಿ 4 ಪುಸ್ತಕಗಳ ತಯಾರಿ ಯತ್ನ, ಜಾನಪದ ಸಾಹಿತ್ಯ ಪರಿಷತ್ತುಗಳಲ್ಲಿ ಪದಾಧಿಕಾರಿಯಾಗಿ ಮಕ್ಕಳಿಗಾಗಿ ಬೆಳದಿಂಗಳು, ತಿಂಗಳು ಬೆಳಕು ಕಾರ್ಯಕ್ರಮಗಳ ಆಯೋಜನೆ, ಪರಿಷತ್ತಿನ ವತಿಯಿಂದ ಮಕ್ಕಳಿಗಾಗಿ ಶಾಲಾ ಹಾಗೂ ಕ್ಲಸ್ಟರ್ ಮಟ್ಟದಲ್ಲಿ ಸ್ಪರ್ಧೆಗಳ ಆಯೋಜನೆ ಈ ಎಲ್ಲ ಸೇವೆ ಗುರುತಿಸಿ ಪ್ರಶಸ್ತಿ ನೀಡಲಾಗಿದೆ.

## ಬನಹಟ್ಟಿ ಹಟಗಾರ ಸೊಸೈಟಿಗೆ 2.06 ಕೋಟಿ ಲಾಭ



**ರಬಕವಿ-ಬನಹಟ್ಟಿ:** ಜಿಲ್ಲೆಯಲ್ಲಿಯೇ ನೇಕಾರರಿಗೆ ಸಂಜೀವಿನಿಯಾಗಿರುವ ಬನಹಟ್ಟಿ ಹಟಗಾರ ಪತ್ತಿನ ಸಹಕಾರಿ ಸಂಘವು ಪ್ರಸಕ್ತ ವರ್ಷ 2.06 ಕೋಟಿ ರೂ.ಗಳಷ್ಟು ಲಾಭದೊಂದಿಗೆ 32ನೇ ವರ್ಷಕ್ಕೆ ದಾಪುಗಾಲಿಟ್ಟಿರುವದು ಹೆಮ್ಮೆಯೆನಿಸಿದೆಯೆಂದು ಸಂಘದ ಅಧ್ಯಕ್ಷ ಸುರೇಶ ಕೋಲಾರ ತಿಳಿಸಿದರು.

ನಗರದ ಭದ್ರನ್ನವರ ಕಲ್ಯಾಣ ಮಂಟಪದಲ್ಲಿ ನಡೆದ 31 ವಾರ್ಷಿಕ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸಾಮಾಜಿಕ ಶ್ರೇಯಸ್ಸು ಹಾಗು ಅಭಿವೃದ್ಧಿಗೆ ಪಾತ್ರವಾಗಿ ನೇಕಾರ ಸಮುದಾಯದ ಅಭ್ಯುದಯಕ್ಕಾಗಿ ಶ್ರಮಿಸುವಲ್ಲಿ ಸಹಕಾರಿ ಸಂಘ ಮುಂಚೂಣಿ ಪಾತ್ರ ವಹಿಸಿ ಜವಳಿ ಕ್ಷೇತ್ರದ ಆರ್ಥಿಕ ಸ್ತಂಭವಾಗಿ ಬೆಳೆಯುತ್ತಿರುವದು ಗಮನಾರ್ಹವೆಂದರು.

ಶೇರುದಾರರಿಗೆ ತಲಾ ಶೇ.16 ರಷ್ಟು ಲಾಂಭಾಂಶ ಒದಗಿಸುವದಾಗಿ ತಿಳಿಸಿದರಲ್ಲದೆ ಗ್ರಾಹಕರಿಗೆ ನೇರ ಆರ್ಥಿಕ ಸಬಲೀಕರಣಕ್ಕೆ ಸಂಘ ಕಾರಣವಾಗಿ, ಎ ಸರ್ಟಿಫಿಕೇಟ್‌ನೊಂದಿಗೆ ಜಿಲ್ಲೆಯಲ್ಲಿ ಮಹತ್ವದ ಸಹಕಾರಿ ಸಂಘವಾಗಿ ಬೆಳವಣಿಗೆ ಕಂಡಿದೆಯೆಂದರು.

ಇದೇ ಸಂದರ್ಭ ಬಿಡಿಸಿಸಿ ಬ್ಯಾಂಕ್‌ನಿಂದ ಜಿಲ್ಲೆಯಲ್ಲಿ ಮೊದಲ ಸ್ಥಾನವಾಗಿ ಉತ್ತಮ ಸಹಕಾರಿ ಬ್ಯಾಂಕ್ ಪ್ರಶಸ್ತಿಗೆ ಭಾಜನರಾದ ಶ್ರೀಕಾಡಸಿದ್ಧೇಶ್ವರ ಪಟ್ಟಣ ಸಹಕಾರಿ ಬ್ಯಾಂಕ್‌ನ ನಿರ್ದೇಶಕ ಮಂಡಳಿಯನ್ನು ಸನ್ಮಾನಿಸಲಾಯಿತು.

ವೇದಿಕೆ ಮೇಲೆ ಬಸವರಾಜ ಭದ್ರನ್ನವರ, ಬಿ.ಎಂ. ಜಾಡಗೌಡ. ಶ್ರೀಶೈಲ ಬೀಳಗಿ, ರಾಮಣ್ಣ ಭದ್ರನ್ನವರ, ಶಂಕರ ಸೊರಗಾಂವಿ, ಶ್ರೀಶೈಲ ದಭಾಡಿ, ಭಿಮಶಿ ಕುಲಗೋಡ, ಪ್ರಭು ಉಮದಿ, ದಾನಪ್ಪ ಹುಲಜತ್ತಿ, ವಿರುಪಾಕ್ಷಪ್ಪ ಕೊಕಟನೂರ, ಚನವೀರಪ್ಪ ಬಾಣಕಾರ, ದೇವೇಂದ್ರ ಶೀಲವಂತ, ಈರಣ್ಣ ಹೊನವಾಡ, ಅಶೋಕ ಮಾಲಾಪೂರ, ಚಂದ್ರಶೇಖರ ಬಡ್ಡೂರ, ರಾಜಶೇಖರ ಜಾಲಿಗಿಡದ, ರವೀಂದ್ರ ಬಾಡಗಿ, ಮಧುಕೇಶ್ವರ ಬೆಳಗಲಿ, ಹೇಮಲತಾ ಪಟ್ಟಣ, ಶೋಭಾ ಪಟ್ಟಣ, ಸಂಜಯ ಜವಳಗಿ, ರಾಜು ಕೊಲಾರ, ರಾಜಶೇಖರ ಮಂಡಿ, ಉದಯ ಜಾಡಗೌಡ, ಚೇತನ ಕಳ್ಳಿಗುದ್ದಿ, ಪ್ರಮೋದ ಶೀಲವಂತ, ಗಣೇಶ ಕದ್ದಿಮನಿ ಸೇರಿದಂತೆ ಅನೇಕರಿದ್ದರು.

## ಮೇಕಲಮರಡಿ: ಸೆ.10ರಿಂದ ವಾರದ ಸಂತೆ

**ನೇಸರಗಿ:** ಸಮೀಪದ ಮೇಕಲಮರಡಿ ಗ್ರಾಮದಲ್ಲಿ ಸಾರ್ವಜನಿಕರಿಗೆ ಅನುಕೂಲ ಆಗುವ ಸಲುವಾಗಿ ಬೇರೆ ಗ್ರಾಮಗಳಿಗೆ ಹೋಗಿ ಸಂತೆಯನ್ನು ತೆಗೆದುಕೊಳ್ಳುವ ಪರಿಸ್ಥಿತಿ ಇದ್ದ ಕಾರಣ ಹಲವು ದಿನಗಳಿಂದ ಸಾರ್ವಜನಿಕರಿಂದ ಬೇಡಿಕೆ ಇತ್ತು, ಆದ್ದರಿಂದ ಗ್ರಾಮ ಪಂಚಾಯತಿಯ ಸರ್ವ ಸದಸ್ಯರು ಹಾಗೂ ಸಿಬ್ಬಂದಿ ವರ್ಗ ಈ ಸಂತೆ ವಿಷಯವಾಗಿ ತೀರ್ಮಾನ ಮಾಡಿ ದಿನಾಂಕ 10.09.2025 ರಂದು ಮೇಕಲಮರಡಿ ಗ್ರಾಮದಲ್ಲಿ ಸಂತೆ ಮಾಡಲು ಗ್ರಾಮ ಪಂಚಾಯತ ತೀರ್ಮಾನಿಸಿದ್ದು ಆದ್ದರಿಂದ ದಿನಾಂಕ 10.09.2025 ರಿಂದ ಪ್ರತಿ ಬುಧವಾರದಂದು ಶ್ರೀ ಬಸವೇಶ್ವರ ಗುಡಿ ಓಣಿಯಲ್ಲಿ ಪ್ರಾರಂಭ ಮಾಡಲು ತೀರ್ಮಾನ ಮಾಡಿದ್ದು, ಆದ ಕಾರಣ ಸುತ್ತಮುತ್ತಲಿನ ಗ್ರಾಮಸ್ಥರು ಹಾಗೂ ವ್ಯಾಪಾರಸ್ಥರು ಸದರಿ ಸಂತೆಗೆ ಬಂದು ತಮ್ಮ ವ್ಯಾಪಾರ, ವಹಿವಾಟು ಮಾಡಿ ಸಹಕಾರ ನೀಡಬೇಕಾಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


## ಇಂದು ಇಂಧನ ಸಚಿವರ ಜಿಲ್ಲಾ ಪ್ರವಾಸ

**ಧಾರವಾಡ:** ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಇಂಧನ ಸಚಿವರಾದ ಕೆ.ಜೆ. ಚಾರ್ಜ್ ಅವರು ಸೆಪ್ಟೆಂಬರ 09 ರಂದು ಧಾರವಾಡ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಸೆಪ್ಟೆಂಬರ 09 ರಂದು ಬೆಳಿಗ್ಗೆ 10 ಗಂಟೆಗೆ ಹುಬ್ಬಳ್ಳಿ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಗೆ ಭೇಟಿ ನೀಡುವರು. ನಂತರ ಬೆಳಿಗ್ಗೆ 11:30 ಗಂಟೆಗೆ ಹುಬ್ಬಳ್ಳಿ ಗೋಪನಕೊಪ್ಪ (ಹುಣಸೇಕೆರೆ ಹತ್ತಿರ) ದಲ್ಲಿ ವಿದ್ಯುತ್ ಸರಬರಾಜು ನಿಗಮ ಕಂಪನಿ ಹೊಸದಾಗಿ ನಿರ್ಮಿಸಿರುವ ಕಚೇರಿ ಕಟ್ಟಡದ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಮಧ್ಯಾಹ್ನ 2:30 ಗಂಟೆಗೆ ಹುಬ್ಬಳ್ಳಿ ಗೋಪನಕೊಪ್ಪದ ವಿದ್ಯುತ್ ಸರಬರಾಜು ನಿಗಮ ಕಂಪನಿ ನೂತನ ಕಚೇರಿಯ ಸಭಾಂಗಣದಲ್ಲಿ ಧಾರವಾಡ ಜಿಲ್ಲೆಯ ಎಲ್ಲ ಚುನಾಯಿತ ಜನ ಪ್ರತಿನಿಧಿಗಳೊಂದಿಗೆ ಇಂಧನ ಇಲಾಖೆಗೆ ಸಂಬಂಧಪಟ್ಟ ಪ್ರಗತಿ ಪರಿಶೀಲನಾ ಸಭೆ ಜರುಗಿಸುವರು ಎಂದು ಸಚಿವರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಗುರುಬಸವ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಾಜಿಯಲ್ಲಿ ಪದವಿ ಪ್ರಧಾನ ಸಮಾರಂಭ

## ಸಮಯದ ಸದುಪಯೋಗವೇ ಯಶಸ್ವಿಗೆ ಕಾರಣ




**ಮುಧೋಳ:** ವಿಧ್ಯಾರ್ಥಿ ಜೀವನದಲ್ಲಿ ಉನ್ನತ ಗುರಿ ಸಾಧಿಸುವ ಉತ್ಸಾಹ ಹೊಂದಬೇಕು. ದೇಶದಲ್ಲಿನ ಅವಕಾಶಗಳು ಸಾಕಷ್ಟಿವೆ, ನಾವು ನಮ್ಮ ದೇಶಕ್ಕೆ ಸೇವೆ, ಅದರ ಪ್ರಗತಿಗೆ ಕೊಡುಗೆ ನೀಡಿದರೆ ಅದೇ ನಮ್ಮ ನಿಜವಾದ ಸಾಧನೆ ಎಂದು ವ್ಹಿಆರ್‌ಎಲ್. ಸಮೂಹ ಸಂಸ್ಥೆ ಕಾರ್ಯಾಧ್ಯಕ್ಷ ಡಾ. ವಿಜಯ ಸಂಕೇಶ್ವರ ಹೇಳಿದರು.

ಬಾಗಲಕೋಟೆ ಬಿವಿವಿ. ಸಂಘದ ಸ್ಥಳೀಯ ಬೀಳೂರು ಗುರುಬಸವ ಮಹಾಸ್ವಾಮಿಜಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಾಜಿಯಲ್ಲಿ 5ನೇ ಪದವಿ ಪ್ರಧಾನ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು, ಗುರಿ ಸಾಧನೆಗಾಗಿ ವಾಮಮಾರ್ಗ ಅನುಸರಿಸದೇ, ಶಿಸ್ತು ನಿಷ್ಠೆ ಮತ್ತು ತ್ಯಾಗಮಯ ಜೀವನವೇ ಯಶಸ್ಸಿನ ನಿಜವಾದ ಮಂತ್ರ. ಜೀವನದ ಪ್ರತಿಯೊಂದು ಕ್ಷಣವೂ ಅಮೂಲ್ಯ, ಸಮಯದ ಸದುಪಯೋಗವೇ ಯಶಸ್ಸಿಗೆ ಕಾರಣ ಎಂದು ವಿಧ್ಯಾರ್ಥಿಗಳಿಗೆ ಪ್ರೇರಣಾದಾಯಕ ಸಂದೇಶವನ್ನು ಸಂಕೇಶ್ವರ ನೀಡಿದರು.

ಸಂಘದ ಕಾರ್ಯಾಧ್ಯಕ್ಷ ಡಾ. ವೀರಣ್ಣ ಚರಂತಿಮಠ ಅಧ್ಯಕ್ಷತೆ ವಹಿಸಿ ಮಾತನಾಡಿ, ಈ ಭಾಗದ ಗ್ರಾಮೀಣ ವಿಧ್ಯಾರ್ಥಿಗಳಿಗೆ ಅನುಕೂಲ ಆಗಲೆಂದು ಇಂಜನಿಯರಿಂಗ್ ಕಾಲೇಜಿನ ಅವಶ್ಯಕತೆ ಪರಿಗಣಿಸಿ 2013 ರಲ್ಲಿ ಆರಂಭಗೊಂಡ ನಮ್ಮ ಮಹಾವಿದ್ಯಾಲಯ ಅತ್ಯಂತ ಶಿಸ್ತಿನಿಂದ ಉತ್ತಮ ಇಂಜನಿಯರಿಂಗ್ ವಿಧ್ಯಾರ್ಥಿಗಳನ್ನು ತಯಾರು ಮಾಡುತ್ತಾರೆ. ಮತ್ತು ಅವರು ಇಂದು ದೇಶದ ಪ್ರತಿಷ್ಠಿತ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವದು. ಹೆಮ್ಮೆಯ ವಿಷಯ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಂಘದ ಕಾರ್ಯದರ್ಶಿ ಮಹೇಶ ಅಥಣಿ, ಗೌ.ಕಾ. ಮಹಾಂತೇಶ ಶೆಟ್ಟರ ಎಲ್ಲ ಸದಸ್ಯರು ಕಾಲೇಜಿನ ವಿವಿಧ ವಿಭಾಗದ ಮುಖ್ಯಸ್ಥರು ಮತ್ತು ವಿಧ್ಯಾರ್ಥಿಗಳು ಇತರರಿದ್ದರು.

# ಯುವ ಜನಾಂಗ ವಚನಗಳ ಅಧ್ಯಯನ ಮಾಡಲಿ

**ಬೈಲಹೊಂಗಲ:** 12 ನೇ ಶತಮಾನದಲ್ಲಿ ಮಾನವ ಉದ್ಧಾರಕ್ಕೆ ಶ್ರಮಿಸಿದ ಬಸವಾದಿ ಶರಣರ ಆಶಯಗಳನ್ನು ಸಮಾಜದಲ್ಲಿ ಬಿತ್ತರಿಸಲು 20 ನೇ ಶತಮಾನದಲ್ಲಿ ಅವಿರತವಾಗಿ ವೀರಶೈವ ಧರ್ಮದ ಕಹಳೆ ಉದುತ್ತಾ ಜನ ಜಾಗೃತಿಗೈದ ಲಿಂ. ಹಾನಗಲ್ ಕುಮಾರ ಶಿವಯೋಗಿಗಳ ಪಾತ್ರ ಅನನ್ಯವಾಗಿದೆ ಎಂದು ಗದಗ-ಡಂಬಳದ ತೋಂಟದಾರ್ಯ ಸಂಸ್ಥಾನಮಠದ ಡಾ. ತೋಂಟದ ಸಿದ್ಧರಾಮ ಸ್ವಾಮೀಜಿ ನುಡಿದರು.

ಅವರು ಪಟ್ಟಣದ ಶ್ರೀ ಶಿವಬಸವ ಕಲ್ಯಾಣ ಮಂಟಪದಲ್ಲಿ ನಡೆದ ಲಿಂ.ಹಾನಗಲ್ ಕುಮಾರ ಸ್ವಾಮೀಜಿಯವರ 158 ನೇ ಜಯಂತಿ ಮಹೋತ್ಸವ ಹಾಗೂ ಬೆಳಗಾವಿ ರುದ್ರಾಕ್ಷಿಮಠದ ಕಾಯಕಯೋಗಿ ಲಿಂ.ಡಾ.ಶಿವಬಸವ ಸ್ವಾಮೀಜಿ ಅವರ 31 ನೇ ಪುಣ್ಯಸ್ಮರಣೋತ್ಸವ ನಿಮಿತ್ಯ ಜೀವನ ದರ್ಶಣ ಪ್ರವಚನ ಮುಕ್ತಾಯ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿ, ಶಿವಯೋಗ ಮಂದಿರದ ಹರಿಕಾರರಾದ ಲಿಂ. ಹಾನಗಲ್ ಕುಮಾರ ಶ್ರೀಗಳ ಸಾಧನೆಗಳನ್ನು ಪ್ರಸ್ತುತ ಸಮಾಜಕ್ಕೆ ಬಿತ್ತರಿಸುವ ಪ್ರಯತ್ನದಲ್ಲಿ ಮಾಜಿ ಸಚಿವ ಶಿವಾನಂದ ಕೌಜಲಗಿ ಅವರ ಕುಟುಂಬದ ಸೇವೆ-ಶ್ರಮ ಅಗಾಧವಾಗಿದೆ ಎಂದರು.

ಶೇಗುಣಿಸಿ ವಿರಕ್ತಮಠದ ಡಾ. ಮಹಾಂತಪ್ರಭು ಸ್ವಾಮೀಜಿ ಸಾನಿಧ್ಯ ವಹಿಸಿ ಪ್ರವಚನದಲ್ಲಿ ಮಾತನಾಡಿ, ಪ್ರತಿಯೊಬ್ಬರ ಬದುಕು ಹಸನಾಗಲು ಜ್ಞಾನದ ಬೆಳಕು ನೀಡಿ ಉನ್ನತೀಕರಿಸಿದ




ಯೋಗಿಗಳನ್ನು ಎಂದೂ ಮರೆಯಬಾರದು. ಬದುಕಿನ ಯಶಸ್ಸಿಗೆ ಅಧ್ಯಾತ್ಮದ ಅಂಶ ಅತೀ ಅವಶ್ಯವಾಗಿದ್ದು ಈ ನಿಟ್ಟಿನಲ್ಲಿ ಯುವ ಜನಾಂಗ ವಚನ ಸಾಹಿತ್ಯ, ಶರಣ ಪರಂಪರೆಯನ್ನು ಅಲ್ಲಗಳೆಯಬಾರದೆಂದರು.

ಬೈಲಹೊಂಗಲ ರುದ್ರಾಕ್ಷಿಮಠದ ಬಸವಲಿಂಗ ಶ್ರೀಗಳು, ದೊಡವಾಡದ ಜಡಿಸಿದ್ದೇಶ್ವರ ಶಿವಾಚಾರ್ಯ ಶ್ರೀಗಳು, ಗಾಳೇಶ್ವರ ಮಠದ ಚಿದಾನಂದ ಶ್ರೀಗಳು, ಹಂದಿಗುಂದ ಗಿರಿಮಠದ ಆಡಿಯ ಶಿವಾನಂದ ಸ್ವಾಮೀಜಿ, ನಿಚ್ಚಣಕಿಯ ಪಂಚಾಕ್ಷರ ಶ್ರೀಗಳು, ಶೇಗುಣಿಸಿಯ ಡಾ.ಮಹಾಂತಪ್ರಭು ಶ್ರೀಗಳು, ಜಗೇರಿಯ ಗುರುಸಿದ್ದೇಶ್ವರ ಶ್ರೀಗಳು, ಗುಳೇದಗುಡ್ಡದ ಒಪ್ಪತ್ತೇಶ್ವರ ಮಠದ ಒಪ್ಪತ್ತೇಶ್ವರ ಶ್ರೀಗಳು, ಅರಳಿಕಟ್ಟಿಯ ತೋಂಟದಾರ್ಯ ವಿರಕ್ತಮಠದ ಶಿವಮೂರ್ತಿ ಸ್ವಾಮೀಜಿ, ಕಾರಂಜಿ ಮಠದ ಗುರುಸಿದ್ಧ ಶ್ರೀಗಳು, ರಾಜ್ಯ ಧಾರ್ಮಿಕ ದತ್ತಿ ಇಲಾಖೆಯ ನಿರ್ದೇಶಕ ಡಾ. ಮಹಾಂತೇಶ ಶಾಸ್ತ್ರೀ ಆರಾದ್ರಿಮಠ, ಹಿಡಕಲ್‌ದ ಪ್ರಭು ಅಡವಿಸಿದ್ದೇಶ್ವರ ಶ್ರೀಗಳು, ವೇ.ಮೂ.ವಿಶ್ವನಾಥ ಹಿರೇಮಠ ಮುಂತಾದವರು ವೇದಿಕೆ ಮೇಲಿದ್ದರು.

ಮಾಜಿ ಸಚಿವ ಶಿವಾನಂದ ಕೌಜಲಗಿ, ಶಾಸಕ ಮಹಾಂತೇಶ ಕೌಜಲಗಿ, ಸುಶೀಲಮ್ಮ ಕೌಜಲಗಿ, ಕೆಎಲ್‌ಇ ಉಪಾಧ್ಯಕ್ಷ ಬಸವರಾಜ ತಟವಾಟಿ, ನ್ಯಾಯವಾದಿ ಬಿ.ಎಸ್.ಕಿವಡಸಣ್ಣವರ, ವಿಲಾಸ ವಾಲಿ, ಗಂಗಾಧರ ಚಚಡಿ, ಬಾಬಣ್ಣ ಪೋತದಾರ, ವಕೀಲ ಸಿದ್ದಣ್ಣ ಗದಗ, ಶ್ರೀಶೈಲ ಖೋದಾನಪೂರ, ಯುವ ಮುಖಂಡ ಬಸವರಾಜ ಕೌಜಲಗಿ, ರಾಜ್ಯ ಸರಕಾರದ ಗ್ಯಾರಂಟಿ ಯೋಜನೆಗಳ ತಾಲೂಕಾ ಅನುಷ್ಠಾನಗಳ ಸಮೀತಿ ಅಧ್ಯಕ್ಷ ಡಾ.ಮಹಾಂತೇಶ ಕಳ್ಳಿಬಡ್ಡಿ, ಡಾ.ಎ.ಎನ್.ಬಾಳಿ, ಮಡಿವಾಳಪ್ಪ ಭಟ್ಟಿ, ವೀರುಪಾಕ್ಷ ಕೌಜಲಗಿ, ಶಂಕರಣ್ಣ ಬಾಳಿ, ಮಹಾಂತೇಶ ಅಕ್ಕಿ, ಪ್ರೇಮಾ ಅಂಗಡಿ, ಗಿರೀಜಾ ಕೌಜಲಗಿ, ಸುರೇಖಾ ಕೌಜಲಗಿ, ಉಷಾ ಬೆಲ್ಲದ, ಶಿವಲಿಂಗ ಪರಂಡಿ, ಶ್ರೀಧರ ಶೆಟ್ಟರ, ಈರಣ್ಣ ಶೆಟ್ಟರ ಮುಂತಾದವರು ಉಪಸ್ಥಿತರಿದ್ದರು.

ವಿವಿಧ ಮಠಾಧೀಶರನ್ನು, ವಿವಿಧ ಕ್ಷೇತ್ರದ ಸಾಧಕರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಸುಮಾರು ಮೂರು ದಿನಗಳ ಕಾಲ ಶೇಗುಣಿಸಿಯ ವಿರಕ್ತಮಠದ ಡಾ.ಮಹಾಂತಪ್ರಭು ಶ್ರೀಗಳಿಂದ ಜೀವನ ದರ್ಶನ ಪ್ರವಚನ ಜರುಗಿತು.

ಮಹೇಶ ಬೆಲ್ಲದ ಸ್ವಾಗತಿಸಿದರು. ಶರಣೆ ಶೋಭಾ ಛಬ್ಬಿ ನಿರೂಪಿಸಿದರು. ಶಿವಕುಮಾರ ಹಂಪಣ್ಣವರ ವಂದಿಸಿದರು. ಅನ್ನ ಪ್ರಸಾದ ಏರ್ಪಡಿಸಲಾಗಿತ್ತು.

## ಪ್ಯಾಪ್ ಸ್ಮಿಯರ್ ಉಚಿತ ಶಿಬಿರ

**ಗೋಕಾಕ:** ಭಾರತೀಯ ವೈದ್ಯಕೀಯ ಸಂಘ, ಮಹಿಳಾ ವೈದ್ಯರ ಘಟಕ ಹಾಗೂ ಸರಕಾರಿ ತಾಲೂಕು ಆಸ್ಪತ್ರೆ ಇವುಗಳ ಸಂಯುಕ್ತ ಆಶ್ರಯದಲ್ಲಿ ಶಿಕ್ಷಕರ ದಿನಾಚರಣೆ ಅಂಗವಾಗಿ ಸೆಪ್ಟೆಂಬರ್ ತಿಂಗಳಲ್ಲಿ ಪ್ರತಿ ಗುರುವಾರದಂದು ತಾಲೂಕಿನ ವಿವಿಧ ಮಹಿಳಾ ಆರೋಗ್ಯ ಹಾಗೂ ಸ್ತ್ರೀರೋಗ ತಜ್ಞರ ಆಸ್ಪತ್ರೆಗಳಲ್ಲಿ ವಿವಾಹಿತ ಮಹಿಳಾ ಶಿಕ್ಷಕಿಯರಿಗಾಗಿ ಪ್ಯಾಪ್ ಸ್ಮಿಯರ್ ಉಚಿತ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಹಿಳಾ ವೈದ್ಯರ ಘಟಕ ಅಧ್ಯಕ್ಷೆ ಡಾ.ಜ್ಯೋತಿ ವಿ ಶಿಂಧೋಳಿಮಠ ಪ್ರಕಟನೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 9886644313ಗೆ ಸಂಪರ್ಕಿಸುವಂತೆ ಕೋರಿದ್ದಾರೆ.

## ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರಧಾನ



**ರಾಯಬಾಗ:** ತಾಲೂಕಿನ ಸುಕ್ಷೇತ್ರ ದಿಗ್ಗೆವಾಡಿಯ ಪ್ರತಿಷ್ಠಿತ ಮಹಾಕಾಳಿ ಶಿಕ್ಷಣ ಸಂಸ್ಥೆಯ ದಿಗ್ಗೆವಾಡಿ ಅನುದಾನಿತ ಪ್ರೌಢ ಶಾಲೆಯ ಮುಖ್ಯ ಗುರುಗಳಾದ ಡಾ. ವಿ. ಬಿ. ಚೌಗಲೆ ಅವರು ಪ್ರಸಕ್ತ ಸಾಲಿನ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಸ್ವೀಕರಿಸಿದರು.

ಶಾಲಾ ಶಿಕ್ಷಣ ಇಲಾಖೆ, ಚಿಕ್ಕೋಡಿ ಉಪನಿರ್ದೇಶಕರು,ಚಿಕ್ಕೋಡಿ ಇವರು ಶೈಕ್ಷಣಿಕ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕರ ಪ್ರಶಸ್ತಿಗೆ ಪ್ರೌಢ ವಿಭಾಗದಲ್ಲಿ ಒಟ್ಟು 8 ಜನ ಶಿಕ್ಷಕರನ್ನು ಆಯ್ಕೆ ಮಾಡಿದ್ದರು. ಇದರಲ್ಲಿ ರಾಯಬಾಗ ತಾಲೂಕಿನ ದಿಗ್ಗೆವಾಡಿಯ ಡಾ. ವಿ. ಬಿ. ಚೌಗಲೆ ಅವರು ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾಗಿದ್ದು ಗಮನಾರ್ಹ.

ಚಿಕ್ಕೋಡಿ ಪಟ್ಟಣದಲ್ಲಿ ನಡೆದ ಶಿಕ್ಷಕರ ದಿನೋತ್ಸವ ಸಮಾರಂಭದಲ್ಲಿ ದಿವ್ಯ ಸಾನಿಧ್ಯ ವಹಿಸಿದ್ದ ಸ್ಥಳೀಯ ಸಂಪಾದನಾ ಚರಮೂರ್ತಿ ಮಠದ ಪೂಜ್ಯ ಮ.ನಿ ಪ್ರ.ಶ್ರೀ ಸಂಪಾದನಾ ಸ್ವಾಮೀಜಿ,ವಿಧಾನ ಪರಿಷತ್ ಸದಸ್ಯರಾದ ಪ್ರಕಾಶ ಹುಕ್ಕೇರಿ,ಚಿಕ್ಕೋಡಿ ಸದಲಗಾ ಕ್ಷೇತ್ರದ ಶಾಸಕರಾದ ಗಣೇಶ ಹುಕ್ಕೇರಿ, ಹಾಗೂ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀ ಸೀತಾರಾಮ್ ಆರ್ ಎಸ್ ಅವರು ಪ್ರಶಸ್ತಿ ಪುರಸ್ಕೃತ ಡಾ. ವಿ ಬಿ ಚೌಗಲೆ ಅವರಿಗೆ ಶಾಲು ಹೊದಿಸಿ ಪ್ರಮಾಣ ಪತ್ರ ನೀಡಿ ಸತ್ಕರಿಸಿ ಗೌರವಿಸಿದರು. ಬಳಿಕ ಪ್ರಶಸ್ತಿ ಪುರಸ್ಕೃತರಾದ ವಿ.ಬಿ.ಚೌಗಲೆ ಮಾತನಾಡಿ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಜನ್ಮದಿನದ ಅಂಗವಾಗಿ ಶುಕ್ರವಾರ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ ಪ್ರಶಸ್ತಿ ಪಡೆದಿದ್ದು ಖುಷಿಯಾಗಿದೆ. ಸಾಧನೆಗೆ ಮಹಾಕಾಳಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ವಿವೇಕರಾವ ಪಾಟೀಲ ಅವರಿಗೆ ಅಭಿನಂದಿಸುತ್ತೇನೆ ಎಂದರು.

# ಬ್ರಹ್ಮಶ್ರೀ ನಾರಾಯಣಗುರು ಜಯಂತಿ ಆಚರಣೆ

**ಕಾರವಾರ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಭಾನುವಾರ ನಡೆದ ಬ್ರಹ್ಮಶ್ರೀ ನಾರಾಯಣಗುರು ಜಯಂತಿ ಕಾರ್ಯಕ್ರಮವನ್ನು, ನಾರಾಯಣ ಗುರುಗಳ ಭಾವ ಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಜ್ಯೋತಿ ಬೆಳಗಿಸುವ ಮೂಲಕ ತಹಶೀಲ್ದಾರ್ ನಿಶ್ಚಲ್ ನರೋನ್ಹಾ ಉದ್ಘಾಟಿಸಿದರು.

ನಾರಾಯಣ ಗುರುಗಳ ಕುರಿತು ಉಪನ್ಯಾಸ ನೀಡಿದ ಕನ್ನಡ ಸಾಹಿತ್ಯ ಪರಿಷತ್ ತಾಲೂಕಾಧ್ಯಕ್ಷ ರಾಮಾ ನಾಯ್ಕ ಮಾತನಾಡಿ, ಭರತ ಖಂಡ ಕಂಡಂತ ಅಪ್ರಥಮ ಸಮಾಜ ಪರಿವರ್ತಕ, ಸಮಾಜ ಸುಧಾರಕ, ಧಾರ್ಮಿಕ ಚಿಂತಕರಾದ ನಾರಾಯಣ ಗುರುಗಳು, ಒಂದೇ ಜಾತಿ ಒಂದೇ ಧರ್ಮಕ್ಕೆ ಸಿಮೀತರಾದವರಲ್ಲ ಇಡೀ ಜಗತ್ತಿನ ಮಾನವ ಕುಲಕ್ಕೆ ಗುರುಗಳು. ಸಮಾಜದಲ್ಲಿ ಬೇರೂರಿದ್ದ ಅಸ್ಪೃಶ್ಯತೆ ಮತ್ತು ಜಾತಿ ವ್ಯವಸ್ಥೆಯನ್ನು ಹೋಗಲಾಡಿಸಲು ಶ್ರಮಿಸಿದವರು. ಅವರು ಪ್ರತಿಪಾದಿಸಿದ ತತ್ವವೆಂದರೆ ಜಗತ್ತಿನಲ್ಲಿರುವುದು, "ಒಂದೇ ಜಾತಿ, ಒಂದೇ ಮತ, ಹಾಗೂ ಒಂದೇ ದೇವರು. ದೇವಾಲಯಗಳಲ್ಲಿ ತುಳಿತಕ್ಕೆ ಒಳಗಾದ ವರ್ಗದವರಿಗೆ ಪ್ರವೇಶ ಸಿಗದೇಹೋದಾಗ ರಕ್ತಕ್ರಾಂತಿ ಮಾಡದೇ ಜನರಿಗೆ ದೇವಾಲಯಗಳನ್ನು ನಿರ್ಮಿಸುತ್ತಾರೆ. ಹಿಂದುಳಿದ ವರ್ಗದವರನ್ನು ಉದ್ಯೋಗ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಮೆಲೆತ್ತುವ ಕಾರ್ಯದಲ್ಲಿ



ತೊಡಗಿದ್ದರು. ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿದ ಅವರು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿದ್ದಾರೆ. ನಾರಾಯಣ ಗುರುಗಳ ತತ್ವ ಸಿದ್ಧಾಂತ ಆದರ್ಶಗಳು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಂಡು ಪಾಲಿಸಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ನಾಮದಾರಿ ಸಮಾಜದ ಉಪಾಧ್ಯಕ್ಷ ಸುನೀಲ್ ಸೋನಿ ಮಾತನಾಡಿ, "ಒಂದೇ ಜಾತಿ, ಒಂದೇ ಮತ, ಹಾಗೂ ಒಂದೇ ದೇವರು," ಎಂಬುವುದು ನಾರಾಯಣ ಗುರುಗಳ ತತ್ವವಾಗಿತ್ತು. ಹಿಂದುಳಿದ ವರ್ಗದವರಿಗೆ ದೇವಾಲಯಗಳಲ್ಲಿ ಪ್ರವೇಶಕ್ಕೆ ನಿರಾಕರಿಸಿದ ಸಮಯದಲ್ಲಿ ದೇವಾಲಯಗಳನ್ನು ನಿರ್ಮಿಸಿದವರು.ಅವರ ತತ್ವ ದರ್ಶದಂತೆ ಎಲ್ಲಾ ಹಿಂದುಳಿದ ವರ್ಗದವರು ನಾವೆಲ್ಲಾ ಒಂದೇ ಎಂಬ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಕಚೇರಿಯ ಸಾಮಾಜಿಕ ಪಿಂಚಣಿ ವಿಭಾಗದ ಸಹಾಯಕ ನಿರ್ದೇಶಕ ಪ್ರಶಾಂತ್, ಜಿಲ್ಲಾ ಮಟ್ಟದ ವಿವಿಧ ಅಧಿಕಾರಿಗಳು, ವಿವಿಧ ಸಂಘಟನೆಗಳ ಮುಖಂಡರು ಮತ್ತಿತರರು ಇದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಮಂಗಲಾ ವೆಂ. ನಾಯ್ಕ ಸ್ವಾಗತಿಸಿದರು, ಶಿಕ್ಷಕಿ ವನಿತಾ ಶೇಟ್ ನಿರೂಪಿಸಿ, ವಂದಿಸಿದರು.



## ಸರ್ವಪಲ್ಲಿ ಡಾ.ರಾಧಾಕೃಷ್ಣನ ಜನ್ಮದಿನಚರಣೆ

**ಜಮಖಂಡಿ:** ನಗರದ ಹಳೆ ತಹಶೀಲ್ದಾರ ಆವರಣದಲ್ಲಿ ಜಿಲ್ಲಾ ಪಂಚಾಯತ, ಶಾಲಾ ಶಿಕ್ಷಣ ಇಲಾಖೆ, ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ತಾಲೂಕಾಡಳಿತ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳ ಕಛೇರಿ, ಶಿಕ್ಷಕರ ಸಂಘಟನೆಗಳು, ತಾಲೂಕಾ ಸರಕಾರಿ ನೌಕರರ ಸಂಘ ಮತ್ತು ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ಬೆಂಗಳೂರ ಸಹಯೋಗದಲ್ಲಿ ಸರ್ವಪಲ್ಲಿ ಡಾ.ರಾಧಾಕೃಷ್ಣನರ ಜನ್ಮ ದಿನಾಚರಣೆ ಮತ್ತು ಶಿಕ್ಷಕರ ದಿನೋತ್ಸವ ಮೆರವಣಿಗೆಗೆ ಶಾಸಕ ಜಗದೀಶ ಗುಡಗುಂಟಿ ಚಾಲನೆ ನೀಡಿದರು.

ಹಳೆ ತಹಶೀಲ್ದಾರ ಕಛೇರಿ ಆವರಣದಿಂದ ಆರಂಭಗೊಂಡ ಸರ್ವಪಲ್ಲಿ ಡಾ.ರಾಧಾಕೃಷ್ಣನರ ಭಾವಚಿತ್ರ ಮೆರವಣಿಗೆ ನಗರದ ಗವಳಿಗಲ್ಲಿ, ಹನುಮಾನ ಚೌಕ, ಪೋಸ್ಟಚೌಕ, ಥೇಟರ ರಸ್ತೆ, ಅಶೋಕ ವೃತ್ತದಿಂದ ಡಾ.ರಾಜಕುಮಾರ ಮಾರ್ಗವಾಗಿ ವೇದಿಕೆಗೆ ತಲುಪಿತು.

ಮೆರವಣಿಗೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕ ಬಸನ್ನವರ, ತಹಶೀಲ್ದಾರ ಅನೀಲ ಬಡಿಗೇರ, ನಗರಸಭೆ ಅಧ್ಯಕ್ಷ ಈಶ್ವರ ವಾಳೆನ್ನವರ ಪ್ರಾಥಮಿಕ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಬಸವರಾಜ ಬಾಗೆನ್ನವರ, ಕ್ಷೇತ್ರ ಸಮನ್ವಯಾಧಿಕಾರಿ ಕೆ.ಎಂ.ಕೋಲೂರ, ತಾಲೂಕಾ ದೈಹಿಕ ಶಿಕ್ಷಣ ಪರೀವಿಕ್ಷಕ ಪಂಚಾಕ್ಷರಿ ನಂದೇಶ, ಅಕ್ಷರ ದಾಸೋಹ ಯೋಜನೆ ಸಹಾಯಕ ನಿರ್ದೇಶಕ ಸಿ.ಎಸ್.ಕಲ್ಯಾಣಿ, ನಿವೃತ್ತ ಉಪನ್ಯಾಸಕ ಸಿ.ಎಂ.ನ್ಯಾಮಗೌಡ, ಪಿ.ಬಿ.ಅಜ್ಜನವರ, ಸಿ.ಜಿ. ಕಡಕೋಳ, ನರಸಿಂಹ ಕಲ್ಲೋಳ್ಳಿ, ಲಕ್ಷ್ಮಣ ಬಡಿಗೇರ, ಸಂತೋಷ ತಳಕೇರಿ, ಭೂಷಣ ಪತ್ತಾರ, ಎಸ್.ಎಸ್. ಭೋಸಲೆ, ಮಹೇಶ ಜೋಶಿ, ಎಂ.ಎನ್.ಹುಂಡೇಕಾರ, ಎ.ಜಿ.ಕರಡಿ, ಎಂ.ಎಸ್.ಬಡಿಗೇರ, ಜಗದೀಶ ಮೇತ್ರಿ, ಪಿ.ಎಸ್.ಕಟ್ಟಿಮನಿ ಸಹಿತ ಹಲವರು ಇದ್ದರು.

## ಶಿಕ್ಷಕರು ನಿತ್ಯ ಅಧ್ಯಯನ ಶೀಲರಾಗಿ

**ಮೋಳೆ:** ಶಿಕ್ಷಕರು ನಿರಂತರ ಅಧ್ಯಯನ ಶೀಲರಾದಾಗ ಮಾತ್ರ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಒದಗಿಸಲು ಸಾಧ್ಯ ಎಂದು ಗೀತಾಶ್ರಮ, ಸದಲಗಾದ ಪರಮ ಪೂಜ್ಯ ಡಾ.ಶ್ರದ್ಧಾನಂದ ಸ್ವಾಮೀಜಿ ಆಶೀರ್ವಚನ ನೀಡಿದರು.

ಕಾಗವಾಡ ಶಿವಾನಂದ ಮಹಾವಿದ್ಯಾಲಯದಲ್ಲಿ ಐಕ್ಯೂಎಸಿ ಪ್ರಾಯೋಜಿತ ಮತ್ತು ಎನ್‌ಎಸ್‌ಎಸ್ ಘಟಕದ ವತಿಯಿಂದ ಆಯೋಜಿಸಿದಶಿಕ್ಷಕರ ದಿನಾಚರಣೆಯಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಅವರು ಎಲ್ಲ ವಿಷಯಗಳ ಪಠ್ಯಕ್ರಮ ಸಮಯಕ್ಕೆ ತಕ್ಕಂತೆ ಬದಲಾಗುತ್ತಿವೆ. ಉಪನ್ಯಾಸಕರು ಭೋಧನೆಯಲ್ಲಿ ಹೊಸತನ ಅಳವಡಿಸಿಕೊಂಡು ನಿರಂತರ ಅಧ್ಯಯನದ ಮೂಲಕ ಪರಿಪೂರ್ಣತೆ ಪಡೆದು ಪಾಠ ಮಾಡಬೇಕಾದ ಅಗತ್ಯತೆ ಇದೆ ಎಂದರು.

ಆಡಳಿತ ಮಂಡಳಿಯ ಕಾರ್ಯದರ್ಶಿ ಪ್ರೊ.ಬಿ.ಎ.ಪಾಟೀಲ ಮಾತನಾಡಿ ಡಾ.ಸರ್ವಪಲ್ಲಿ ರಾಧಾಕೃಷನ್ ಅವರು ಒಬ್ಬ ಶ್ರೇಷ್ಠ ಶಿಕ್ಷಕ ಅವರ ಜನ್ಮ ಜಯಂತಿಯನ್ನು ರಾಷ್ಟ್ರಾದ್ಯಂತ ಶಿಕ್ಷಕರ ದಿನಾಚರಣೆಯಾಗಿ ಆಚರಿಸಲಾಗುತ್ತಿದೆ. ಪ್ರತಿಯೊಬ್ಬ ವಿದ್ಯಾರ್ಥಿಯು ಶಿಕ್ಷಕರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಸಾಗಬೇಕು ಎಂದರು.

ಪ್ರಾ. ಡಾ.ಎಸ್.ಪಿ.ತಳವಾರ ಮಾತನಾಡಿ ಶಿಕ್ಷಕನ ಒಂದು ತಪ್ಪು ಇಡೀ ಸಮಾಜದ ವಿನಾಶಕ್ಕೆ ಕಾರಣವಾಗಬಹುದು ಆದರೆ ಪ್ರತಿ ಶಿಕ್ಷಕನು ಹಾಗೆ ಮಾಡದೇ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗಾಗಿ ಹಗಲಿರುಳು ಶ್ರಮಿಸುತ್ತಾನೆ ಎಂದರು.

ಈ ಸಂದರ್ಭದಲ್ಲಿ ನೀಡಿದರು. ಪ್ರಾರಂಭದಲ್ಲಿ ಕು. ಅನನ್ಯಾ ಕುಲಕರ್ಣಿ ಸ್ವಾಗತ ಗೀತೆ ಹಾಡಿದರು. ಕು. ಋಷಿಕೇಶ ಕಾಂಬಳೆ ಸ್ವಾಗತಿಸಿದರು. ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಕು. ರೋಹಣ ಪಡನಾಡ ನಿರೂಪಿಸಿದರು. ಕು. ಲತಾ ಸುತಾರ ವಂದಿಸಿದರು. ವೇದಿಕೆಯ ಮೇಲೆ ಮಹಾವಿದ್ಯಾಲಯದ ಆಡಳಿತಾಧಿಕಾರಿಗಳಾದ ಪ್ರೊ.ವಿ.ಎಸ್.ತುಗಶೆಟ್ಟಿ ವಿದ್ಯಾರ್ಥಿ ಕಲ್ಯಾಣಾಧಿಕಾರಿಗಳಾದ ಪ್ರೊ. ಜೆ.ಕೆ.ಪಾಟೀಲ, ಕಲಾ ವಿಭಾಗದ ಸಂಯೋಜಕರಾದ ಡಾ.ಆರ್.ಎಸ್.ಕಲ್ಲೋಳಿಕರ ವಾಣಿಜ್ಯ ವಿಭಾಗದ ಸಂಯೋಜಕರಾದ ಪ್ರೊ.ವಿ.ಬಿ.ಬುರ್ಲೆ, ವಿಜ್ಞಾನ ವಿಭಾಗದ ಸಂಯೋಜಕರಾದ ಪ್ರೊ. ಎಸ್.ಎ.ಇನಾಮದಾರ, ಎನ್‌ಎಸ್‌ಎಸ್ ಪ್ರೋ ರಮೇಶ ನಾಗರಡ್ಡಿ, ಅಧಿಕಾರಿಗಳಾದ ಡಾ. ಚಂದ್ರಶೇಖರ ವೈ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಅಪಾರ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.



### ವಿದ್ಯಾರ್ಥಿ ಮಾರ್ಗದರ್ಶನ ಉಪನ್ಯಾಸ ಕಾರ್ಯಕ್ರಮ

## ಗುರು ಭಕ್ತಿ ಸನ್ಮಾರ್ಗಕ್ಕೆ ಕರೆದುಕೊಂಡೊಯ್ಯುತ್ತದೆ



**ಮೂಡಲಗಿ:** ತಂದೆ ತಾಯಿ & ಗುರು ಭಕ್ತಿ ವಿದ್ಯಾರ್ಥಿಗಳನ್ನು ಸನ್ಮಾರ್ಗಕ್ಕೆ ಕರೆದುಕೊಂಡು ಹೋಗುತ್ತದೆ ವಿದ್ಯಾರ್ಥಿಗಳು ತಂದೆ ತಾಯಿಗಳ ನೋವು, ಕಷ್ಟ, ಶ್ರಮ ಅರ್ಥೈಸಿಕೊಂಡು ಗುರುಗಳ ಸನ್ಮಾರ್ಗದಲ್ಲಿ ನಡೆದಾಗ ಜೀವನ ಎಂಬ ಬದುಕಿಗೆ ಒಂದು ಅರ್ಥ ಒದಗಿಸಲು ಸಾಧ್ಯವಿದೆ ಎಂದು ಹುನಕುಪ್ಪಿ ಸರಕಾರಿ ಪ್ರೌಢ ಶಾಲೆಯ ಮುಖ್ಯೋಪಾದ್ಯಾಯ ಚಂದ್ರಕಾಂತ ಬಿ. ಪೂಜೇರಿ ಅಭಿಪ್ರಾಯಪಟ್ಟರು.

ಪಟ್ಟಣದ ಆರ್.ಡಿ.ಎಸ್. ಕಲಾ, ವಾಣಿಜ್ಯ, ವಿಜ್ಞಾನ ಹಾಗೂ ಸಮಾಜಕಾರ್ಯ ಪದವಿ ಮಹಾವಿದ್ಯಾಲಯದಲ್ಲಿ ಆಯ್.ಕ್ಯೂ.ಎ.ಸಿ. & ಎನ್. ಎಸ್.ಎಸ್. ಘಟಕಗಳಡಿಯಲ್ಲಿ ಹಮ್ಮಿಕೊಂಡಿರುವ ವಿದ್ಯಾರ್ಥಿ ಮಾರ್ಗದರ್ಶನ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು. ಬದುಕು ನಾವು ಅಂದುಕೊಂಡಷ್ಟು ಸುಲಭವಾಗಿಲ್ಲ ಇಂದಿನ ದಿನದಲ್ಲಿ ಎಷ್ಟೇ ಪ್ರಯತ್ನಿಸಿದರೂ ನೌಕರಿ ಎಂಬ ಕನಸ್ಸುಗಳನ್ನು ಸಾಕಾರಗೊಳಿಸಿಕೊಳ್ಳಲು ಆಗುತ್ತಿಲ್ಲ ಪ್ರಯತ್ನ ನಿರಂತರವಾಗಿದ್ದರೆ ಮಾತ್ರ ನಮ್ಮ ಜೀವನದ ಗುರಿಯನ್ನು ಮುಟ್ಟಲು ಸಾಧ್ಯವಿದೆ ಎಂದರು. ಕಾಲೇಜು ಉಪನ್ಯಾಸಕ & ಘಟಕಾಧಿಕಾರಿ ಮಲ್ಲಪ್ಪ ಪಾಟೀಲ ಮಾತನಾಡಿ ಪದವಿ ನಂತರ ಹಲವಾರು ಕೋರ್ಸಗಳು ತೆರದಬಾಗಿಲು ನಮ್ಮ ಬಳಿ ಇವೆ ಪದವಿ ನಂತರ ಅವುಗಳ ಸದುಪಯೋಗ ಪಡೆದುಕೊಂಡು ತಮ್ಮ ನಿಜವಾದ ಬದುಕನ್ನು ರೂಪಿಸಿಕೊಳ್ಳುವುದು ನಮ್ಮ ಕೈಯಲ್ಲಿ ಇದೆ. ಸರಿಯಾದ ಮಾರ್ಗದಲ್ಲಿ ನಡೆದುಕೊಂಡು ನಮ್ಮ ಗುರಿ ತಲುಪಲು ಪ್ರಯತ್ನಿಸಬೇಕೆಂದು ಹೇಳಿದರು. ಕಾಲೇಜು ಪ್ರಾಚಾರ್ಯ ಸತೀಶ ಗೋಟೂರೆ ಅಧ್ಯಕ್ಷತೆ ವಹಿಸಿಕೊಂಡು ಮಾತನಾಡಿದರು.

ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಶಿವಾನಂದ ಸತ್ತಿಗೇರಿ, ರಾಜು ಪತ್ತಾರ, ಸುನೀಲ ಸತ್ತಿ, ರಾಘವೇಂದ್ರ ಮುಕ್ಕುಂದ ಎಂ.ಎಸ್.ಒಡೇಯರ ಅಶ್ವಿನಿ ಗುರುವ ಅಕ್ಷತಾ ಹೊಸಮನಿ ಸವಿತಾ ಮಳಲಿ ನಂದಾ ತಳವಾರ ಸಾಧನಾ ಖಂಡ್ರಟ್ಟಿ ಸವಿತಾ ವೆಂಕಟಾಪೂರ ಹಾಜರಿದ್ದರು. ವಿದ್ಯಾರ್ಥಿನಿ ವಿದ್ಯಾಶ್ರೀ ವಡೇರ ನಿರೂಪಿಸಿದರು ರೀಸಿಕಾ ಬೆನ್ನಳ್ಳಿ ಸ್ವಾಗತಿಸಿದರು ಮಹಾನಂದಾ ಮುತ್ನಾಳ ವಂದಿಸಿದರು.

# ಬ್ಯಾಂಕುಗಳು ಜನರ ಅಭಿವೃದ್ಧಿಗೆ ಪೂರಕವಾಗಬೇಕು: ಸಚಿವ ಪಾಟೀಲ

**ಬಸವನಬಾಗೇವಾಡಿ:** ಬ್ಯಾಂಕುಗಳು ಕೇವಲ ಠೇವಣಿ ಸ್ವೀಕಾರ ಮಾಡಿಕೊಳ್ಳದೇ ಆರ್.ಬಿ.ಐ ನಿಯಮಾನುಸಾರ ಸಾಲದ ಅನುಗುಣವಾಗಿ ಬಡ್ಡಿ ನಿಗದಿ ಪಡಿಸಿ ಜನರಿಗೆ ಸಾಲ ಕೊಡುವ ಮೂಲಕ ಅವರ ಅಭಿವೃದ್ಧಿಗೆ ಪೂರಕವಾಗಿ ಬ್ಯಾಂಕುಗಳು ಕಾರ್ಯನಿರ್ವಹಿಸುವಂತಾಗಬೇಕೆಂದು ಜವಳಿ, ಸಕ್ಕರೆ, ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಹೇಳಿದರು.

ಪಟ್ಟಣದ ವಿಜಂಯಪುರ ರಸ್ತೆಯಲ್ಲಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪತ್ತಿನ ಸಹಕಾರಿ ಕಾಂಪ್ಲೇಕ್ಸನಲ್ಲಿ ಶನಿವಾರ ದಿ ಜಮಖಂಡಿ ಅರ್ಬನ್ ಕೋ-ಆಪ್ ಬ್ಯಾಂಕಿನ 15 ನೇ ಶಾಖೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೆಲ ಬ್ಯಾಂಕುಗಳು ವಿಪರೀರ ಬಡ್ಡಿ ಆಕರಣೆ ಮಾಡುವದರಿಂದ ಸಾಲ ಪಡೆದುಕೊಂಡ ಜನರು ಬಡ್ಡಿಯಲ್ಲಿಯೇ ಸತ್ತುಹೋಗಬೇಕಾಗುವದನ್ನು ನೋಡುತ್ತೇವೆ. ಬ್ಯಾಂಕುಗಳಲ್ಲಿ ಪತ್ತಿನ ಸಹಕಾರಿ ಬ್ಯಾಂಕು, ಅರ್ಬನ್ ಬ್ಯಾಂಕು, ಸೌಹಾರ್ದ ಬ್ಯಾಂಕು ಸೇರಿದಂತೆ ವಿವಿಧ ರೀತಿಯ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತವೆ. ಇದರಲ್ಲಿ ಪತ್ತಿನ ಅರ್ಬನ್ ಬ್ಯಾಂಕುಗಳು ಆರ್.ಬಿ.ಐ ನಿರ್ದೇಶನದಂತೆ ಬಡ್ಡಿ ಆಕರಣೆ ಮಾಡುತ್ತವೆ. ಈ ದಿಶೆಯಲ್ಲಿ ದಿ ಜಮಖಂಡಿ ಅರ್ಬನ್ ಕೋ-ಆಪ್ ಬ್ಯಾಂಕಿನ 15 ನೇ ಶಾಖೆಯು ಬಸವನಬಾಗೇವಾಡಿಯಲ್ಲಿ ಉದ್ಘಾಟನೆಯಾಗುತ್ತಿರುವದು ಸಂತಸದಾಯಕ ಸಂಗತಿ. ಈ ಬ್ಯಾಂಕಿನ ಎಲ್ಲ ಸಿಬ್ಬಂದಿ ಎಲ್ಲರ ಸಹಕಾರದೊಂದಿಗೆ ಉತ್ತಮವಾಗಿ ಕಾರ್ಯನಿರ್ವಹಿಸುವಂತಾಗಬೇಕು. ಬಸವನಬಾಗೇವಾಡಿಯಲ್ಲಿ ಸಾಲಗಾರರ ಕೊರತೆ ಇಲ್ಲ. ಸಾಲ ನೀಡುವವರ ಕೊರತೆಯಿದೆ. ಸಾಲ ಪಡೆದ ಗ್ರಾಹಕರು ಸಕಾಲಿಕವಾಗಿ ಬ್ಯಾಂಕಿಗೆ ಮರುಪಾವತಿ ಮಾಡುವ ಮೂಲಕ ಬ್ಯಾಂಕಿನ ಅಭಿವೃದ್ಧಿ ಸಹಕಾರ ನೀಡಬೇಕು ಎಂದರು.



ವಿಶ್ವಗುರು ಬಸವೇಶ್ವರ ಜನ್ಮತಾಣವಾದ ಬಸವನಬಾಗೇವಾಡಿಗೆ ಬರುವ ಎಲ್ಲರಿಗೂ ಒಳ್ಳೆಯ ಆಶೀರ್ವಾದ ಬಸವಣ್ಣನವರು ನೀಡುತ್ತಾರೆ. ಇಂತಹ ತಾಣದಲ್ಲಿ ಜಮಖಂಡಿಯ ಪ್ರತಿಷ್ಠಿತ ಬ್ಯಾಂಕಾಗಿರುವ ದಿ ಜಮಖಂಡಿ ಅರ್ಬನ್ ಕೋ-ಆಪ್ ಬ್ಯಾಂಕಿನ ಶಾಖೆ ಆರಂಭವಾಗುತ್ತಿರುವದು ಸ್ವಾಗಾತಾರ್ಹ. ನಮ್ಮ ವಿಜಯಪುರದ ಸಿದ್ದೇಶ್ವರ ಬ್ಯಾಂಕಿಗೆ ಸ್ವಲ್ಪ ಕಪ್ಪುಚುಕ್ಕೆ ಬಂದಿದೆ. ಆದರೆ ದಿ ಜಮಖಂಡಿ ಅರ್ಬನ್ ಕೋ-ಆಪ್ ಬ್ಯಾಂಕು ಯಾವುದೇ ಕಪ್ಪುಚುಕ್ಕೆ ಆಗಿಲ್ಲ. ಈ ಬ್ಯಾಂಕಿನ ಸದುಪಯೋಗವನ್ನು ಜನರು ಪಡೆದುಕೊಳ್ಳಬೇಕೆಂದರು.

ಅಧ್ಯಕ್ಷತೆ ವಹಿಸಿದ್ದ ದಿ ಜಮಖಂಡಿ ಅರ್ಬನ್ ಕೋ-ಆಪ್ ಬ್ಯಾಂಕಿನ ಅಧ್ಯಕ್ಷ ರಾಹುಲ ಸೂರ್ಯಕಾಂತ ಕಲೂತಿ ಮಾತನಾಡಿ, 1940 ರಲ್ಲಿ ದಿ ಜಮಖಂಡಿ ಸ್ಟೇಟ್ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕನ್ನು ಅಪ್ಪಾರಾವ್ ಶಿಂಧೆ ಆರಂಭಿಸಿದರು. ನಂತರ 1959 ರಲ್ಲಿ ಕರ್ನಾಟಕ ಕೊ ಆಪರೇಟಿವ್ ಸೊಸೈಟಿ ಕಾಯ್ದೆ ಬಂದ ನಂತರ ದಿ ಜಮಖಂಡಿ ಅರ್ಬನ್ ಕೋ-ಆಪ್ ಬ್ಯಾಂಕು ಎಂದು ಹೆಸರು ಬದಲಾವಣೆ ಮಾಡಲಾಯಿತು. ಈ ಬ್ಯಾಂಕು ಪ್ರಸ್ತುತ ಒಟ್ಟು ರೂ.380 ಕೋಟಿ ಠೇವಣಿ ಹೊಂದಿದೆ. ಗ್ರಾಹಕರಿಗೆ ರೂ.248 ಕೋಟಿ ಸಾಲ ನೀಡಿದೆ. ಶೇರು ಬಂಡವಾಳ ರೂ.10 ಕೋಟಿ ಹಾಗೂ ಸ್ವಂತ ಬಂಡವಾಳ ರೂ.35 ಕೋಟಿ ಹೊಂದಿದೆ. ಬ್ಯಾಂಕಿಗೆ 26,700 ಶೇರುದಾರರು ಇದ್ದಾರೆ.ಬ್ಯಾಂಕಿನ ಪ್ರಧಾನ ಕಚೇರಿ ಜಮಖಂಡಿಯಲ್ಲಿದೆ. ಜಮಖಂಡಿಯಲ್ಲಿ ಮೂರು ಶಾಖೆ ಹೊಂದಿದೆ. ಬನಹಟ್ಟಿ, ಗಲಗಲಿ,ರಬಕವಿ, ಮುಧೋಳ, ಲೋಕಾಪುರ, ತೊದಲಬಾಗಿ, ಅಥಣಿ, ಮುನವಳ್ಳಿಮ ವಿಜಯಪುರ, ಯಾದವಾಡ, ಬಾಗಲಕೋಟೆಗಳಲ್ಲಿ ಬ್ಯಾಂಕಿನ ಶಾಖೆಗಳು ಕಾರ್ಯನಿರ್ವಹಿಸುತ್ತವೆ. ಬ್ಯಾಂಕಿನ 15 ಶಾಖೆಯು ಬಸವನಬಾಗೇವಾಡಿಯಲ್ಲಿ ಆರಂಭವಾಗುತ್ತಿದೆ. ಬ್ಯಾಂಕಿನಲ್ಲಿ ಠೇವಣಿಗಳ ಮೇಲೆ ಆಕರ್ಷಕ ಬಡ್ಡಿ ದರ ನೀಡುವ ಜೊತೆಗೆ ವಿಶೇಷ ಠೇವು ಯೋಜನೆಗಳಿವೆ. ಸಾಲವನ್ನು ಪರಿಷ್ಕೃತ ಬಡ್ಡಿ ದರದಲ್ಲಿ ನೀಡಲಾಗುತ್ತಿದೆ. ಬ್ಯಾಂಕಿನ ಪ್ರಯೋಜನವನ್ನು ಈ ತಾಲೂಕಿನ ಜನರು ಪಡೆದುಕೊಳ್ಳಬೇಕೆಂದರು. ಸಾನಿಧ್ಯ ವಹಿಸಿದ್ದ ವಿರಕ್ತಮಠದ ಸಿದ್ದಲಿಂಗ ಸ್ವಾಮೀಜಿ ಮಾತಾನಾಡಿ, ಬ್ಯಾಂಕು ಉತ್ತೋತರವಾಗಿ ಬೆಳೆಯುವಂತಾಗಲೆಂದು ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಸಹಕಾರ ಮಹಾಮಂಡಳ ನಿರ್ದೇಶಕ ಈರಣ್ಣ ಪಟ್ಟಣಶೆಟ್ಟಿ, ರಾಜ್ಯ ವಿಮಾ ಮಹಾಮಂಡಳ ಅಧ್ಯಕ್ಷ ಶಿವನಗೌಡ ಬಿರಾದಾರ, ಸ್ಥಳೀಯ ಬಸವೇಶ್ವರ ಅರ್ಬನ್ ಅಧ್ಯಕ್ಷ ಲೋಕನಾಥ ಅಗರವಾಲ, ಹಿರಿಯ ನ್ಯಾಯವಾದಿ ಬಿ.ಕೆ.ಕಲ್ಲೂರ,ಪುರಸಭೆ ಅಧ್ಯಕ್ಷೆ ಜಗದೇವಿ ಗುಂಡಳ್ಳಿ, ಬ್ಯಾಂಕಿನ ಉಪಾಧ್ಯಕ್ಷ ಮಾಮುನರಶೀದ ಪಾರ್ಥನಳ್ಳಿ, ನಿರ್ದೇಶಕರಾದ ಗುರುಲಿಂಗಪ್ಪ ನ್ಯಾಮಗೌಡ, ವಿರುಪಾಕ್ಷಯ್ಯ ಕಂಬಿ, ಧರೆಪ್ಪ ತೇಲಿ, ಕಿರಣ ಪಿಸಾಳ, ಪ್ರಭುಲಿಂಗ ಜನವಾಡ, ನಂದೆಪ್ಪ ತಳವಾರ, ವೈಶಾಲಿ ಗೊಂದಿ, ಶಾಖಾ ಸಲಹಾ ಸಮಿತಿಯ ಸದಸ್ಯರಾದ ಸಿದ್ರಾಮಪ್ಪ ಕಿಣಗಿ, ಜಗದೀಶ ಕೊಟ್ರಶೆಟ್ಟಿ, ಸಿದ್ದನಗೌಡ ಪಾಟೀಲ, ಡಾ.ಮಹಾಂತೇಶ ಜಾಲಗೇರಿ, ಸಂಗಪ್ಪ ವಾಡೇದ, ಗುರುಲಿಂಗಪ್ಪ ಬಸರಕೋಡ, ಸ್ಥಳೀಯ ಶಾಖೆಯ ವ್ಯವಸ್ಥಾಪಕ ಆರ್.ಬಿ.ಬುದ್ನಿ ಇತರರು ಇದ್ದರು.

## ಅತ್ಯಾಚಾರ ಆರೋಪಿಗೆ ಶಿಕ್ಷೆ

**ಕಾರವಾರ:** ಮಹಿಳೆಯನ್ನು ಅತ್ಯಾಚಾರ ಮಾಡಿ, ಕೊಲೆ ಮಾಡಲು ಯತ್ನಿಸಿ, ಜೀವ ಬೆದರಿಕೆ ಹಾಕಿದ ಆರೋಪಿಗೆ ಶಿರಸಿ ನಗರದ 1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಕಿರಣ ಕಿಣಿ ಅವರು 10 ವರ್ಷಗಳ ಸದಾ ಕಾರಾಗೃಹ ಶಿಕ್ಷೆ ಮತ್ತು 15000 ದಂಡ ವಿಧಿಸಿ, ಆರೋಪಿತನು ನೊಂದ ಮಹಿಳೆಗೆ 25000 ಪರಿಹಾರ ರೂಪದಲ್ಲಿ ನೀಡುವಂತೆ ಶಿಕ್ಷೆ ವಿಧಿಸಿ ಹಾಗೂ ನಿಂದಿತೆಯು ಜಿಲ್ಲಾ ಉಚಿತ ಕಾನೂನು ಸೇವಾ ಪ್ರಾಧಿಕಾರದಿಂದ ಪರಿಹಾರ ಪಡೆಯಬಹುದೆಂದು ತೀರ್ಪು ನೀಡಿದ್ದಾರೆ.

**ಪ್ರಕರಣದ ಹಿನ್ನಲೆ:** ಪ್ರಕರಣದಲ್ಲಿ ಆಪಾದಿತನಾದ ನಾಗೇಶ @ ನಾಗರಾಜ ನಾರಾಯಣ ಸಿದ್ದಿ ಈತನು ನೊಂದಿತ ಮಹಿಳೆಯ ದೂರದ ಸಂಬಂಧಿಯಾಗಿದ್ದು, ಈತನ ತಾಯಿಗೆ ಕ್ಯಾನ್ಸರ್ ರೋಗಕ್ಕೆ ಆರೈಕೆ ಮಾಡಿಕೊಂಡಿದ್ದ ನೊಂದಿತೆಗೆ ನನ್ನ ತಾಯಿ ನಿಮ್ಮನ್ನು ನೋಡಬೇಕಂತೆ ಕರೆದುಕೊಂಡು ಬರಲು ಹೇಳಿ ಕಳುಹಿಸಿರುತ್ತಾರೆ ಅಂತಾ ಕರೆದುಕೊಂಡು ಹೋಗಿ, ನೀನು ನಾನು ಹೇಳಿದಂತೆ ಕೇಳಿದರೆ ಮಾತ್ರ ನಿನಗೆ ಮನೆಗೆ ಕರೆದುಕೊಂಡು ಹೋಗುತ್ತೇನೆ ಇಲ್ಲವಾದರೆ ಇಲ್ಲಿಯೇ ಕೊಂದು ಹಾಕುತ್ತೇನೆ ಅಂತಾ ಧಮಕಿ ಹಾಕಿ ಅತ್ಯಾಚಾರ ಮಾಡಿ, ಕುತ್ತಿಗೆಯನ್ನು ಹಿಸುಕಿ ಕೊಲೆ ಮಾಡಲು ಪ್ರಯತ್ನಿಸಿ, ಆಕೆ ಅಲ್ಲಿಂದ ತಪ್ಪಿಸಿಕೊಂಡು ಮನೆಯ ಕಡೆಗೆ ಹೋಗುತ್ತಿರುವಾಗ, ಹಿಂಬಾಲಿಸಿಕೊಂಡು ಬಂದು ವಿಷಯ ಯಾರಿಗಾದರೂ ಹೇಳಿದಲ್ಲಿ ಮತ್ತು ಪೊಲೀಸ್ ಠಾಣೆಗೆ ಹೋದಲ್ಲಿ ನಿನ್ನನ್ನು ಮತ್ತು ನಿನ್ನ ಮನೆಯ ಜನರನ್ನು ಕೊಂದು ಹಾಕುತ್ತೇನೆ ಅಂತಾ ಜೀವದ ಬೆದರಿಕೆ ಹಾಕಿದ ಬಗ್ಗೆ ಆರೋಪಿತನ ವಿರುದ್ಧ ಭಾ.ದ.ಸಂ ಕಲಂ. 323,354(ಬಿ),307,376,504,506 ಭಾದಸಂ. ರ ಅಡಿಯಲ್ಲಿ ದೋಷಾರೋಪಣಾ ಪತ್ರ ಸಲ್ಲಿಕೆಯಾಗಿತ್ತು.

ಅಂದಿನ ತನಿಖಾಧಿಕಾರಿಯಾದ ಸುರೇಶ ಎಚ್ ಯಳ್ಳೂರ ಪೊಲೀಸ್ ನಿರೀಕ್ಷಕರು, ಯಲ್ಲಾಪುರ ಪೊಲೀಸ್ ಠಾಣೆ, ಯಲ್ಲಾಪುರ ಇವರು ತನಿಖೆಯನ್ನು ಕೈಗೊಂಡು ದೋಷಾರೋಪಣಾ ಪತ್ರವನ್ನು ಸಲ್ಲಿಸಿದ್ದು, ಸರ್ಕಾರದ ಪರವಾಗಿ ಪಬ್ಲಿಕ್ ಪ್ರೊಸಿಕ್ಯೂಟರ್ ರಾಜೇಶ್.ಎಂ.ಮಳಗಿಕರ್ ವಾದ ಮಂಡಿಸಿದ್ದರು.

## ಸೆ. 11, 12ರಂದು ಪ್ರವೇಶಾತಿ ಪ್ರಕ್ರಿಯೆ: ಹಾಜರಾಗಲು ಸೂಚನೆ

**ಕೊಪ್ಪಳ:** ಕೊಪ್ಪಳ ವಿಶ್ವವಿದ್ಯಾಲಯದಲ್ಲಿ 2025-26ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಸ್ನಾತಕೋತ್ತರ ವಿಭಾಗಗಳ ಪ್ರವೇಶಾತಿ ಪ್ರಕ್ರಿಯೆಯನ್ನು ಸೆಪ್ಟೆಂಬರ್ 11 ಮತ್ತು 12 ರಂದು ತಳಕಲ್ ಸರ್ಕಾರಿ ತಾಂತ್ರಿಕ ಮಹಾವಿದ್ಯಾಲಯದಲ್ಲಿರುವ ಕೊಪ್ಪಳ ವಿ.ವಿ.ಯ ಸ್ನಾತಕೋತ್ತರ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದ್ದು, ಅರ್ಜಿಗಳನ್ನು ಸಲ್ಲಿಸಿದ ವಿದ್ಯಾರ್ಥಿಗಳು ತಮ್ಮ ಮೂಲ ದಾಖಲಾತಿಗಳೊಂದಿಗೆ ಹಾಜರಾಗಬೇಕು.

ಅರ್ಜಿದಾರರು ಸಂಬಂಧಪಟ್ಟ ಮೂಲ ದಾಖಲಾತಿಗಳನ್ನು ಪರಿಶೀಲನೆ ಪ್ರಕ್ರಿಯೆಗೆ ಬೇಕಾಗುವ ದಾಖಲೆಗಳನ್ನು ವಿಭಾಗದ ಮುಖ್ಯಸ್ಥರುಗಳಿಗೆ ಅಥವಾ ಸಂಯೋಜನಾಧಿಕಾರಿಗಳಿಗೆ ಸಲ್ಲಿಸಬೇಕು ಮತ್ತು ವಿದ್ಯಾರ್ಥಿಗಳು ತಮಗೆ ಬೇಕಾಗುವ ಮಹಾವಿದ್ಯಾಲಯಗಳಿಗೆ ಪ್ರವೇಶಾತಿಯನ್ನು ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದ್ದು, ಅಭ್ಯರ್ಥಿಗಳು ಯುಯುಸಿಎಂಎಸ್ ನಲ್ಲಿ ಸಲ್ಲಿಸಿದ ಅರ್ಜಿಯ ಒಂದು ನಕಲು ಪ್ರತಿ, ಎಲ್ಲಾ ಅಂಕಪಟ್ಟಿಗಳು ಮತ್ತು ಮೀಸಲಾತಿ ಪ್ರಮಾಣ ಪತ್ರಗಳು (ಒರಿಜಿನಲ್ & ಒಂದು ಸೆಟ್ ಜೆರಾಕ್ಸ್), ಪ್ರವೇಶಾತಿಗೆ ಸಂಬಂಧಿಸಿದ ಪೂರ್ಣ ಶುಲ್ಕದೊಂದಿಗೆ ಹಾಜರಾಗಿ ಪ್ರವೇಶ ಪಡೆದುಕೊಳ್ಳಬೇಕೆಂದು ಕೊಪ್ಪಳ ವಿಶ್ವವಿದ್ಯಾಲಯದ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬೆಳೆ ನಾಶ: ರೈತರ ಜಮೀನುಗಳಿಗೆ ಬಿಜೆಪಿ ನಿಯೋಗ ಭೇಟಿ



**ಬೆಳಗಾವಿ.** ಜಿಲ್ಲೆಯ ಸವದತ್ತಿ ತಾಲೂಕಿನಲ್ಲಿ ಅತಿವೃಷ್ಟಿಯಿಂದ ರೈತರು ಬೆಳೆದ ಹೆಸರು ಸಂಪೂರ್ಣವಾಗಿ ನಾಶವಾಗಿವೆ,ರೈತರು ಸಂಕಷ್ಟದಲ್ಲಿದ್ದಾರೆ ರೈತರೊಂದಿಗೆ ಹಾನಿಗೊಳಗಾದ ಬೆಳೆಗಳನ್ನು ಬಿಜೆಪಿ ಜಿಲ್ಲಾಧ್ಯಕ್ಷ ಸುಭಾಷ್ ಪಾಟೀಲ ವೀಕ್ಷಿಸಿದರು. ಈ ಸಂದರ್ಭದಲ್ಲಿ ರೈತರು ಮಾತನಾಡಿ ಇಲ್ಲಿಯವರೆಗೆ ಅಧಿಕಾರಿಗಳು ಶಾಸಕರು, ಸಚಿವರು ರೈತರ ಕಷ್ಟಗಳನ್ನು ಕೇಳಿಲ್ಲ ಕಾಂಗ್ರೆಸ್ ಎಂದು ಸರ್ಕಾರದ ವಿರುದ್ಧ ಹಿಡಿ ಶಾಪ ಹಾಕಿದರು. ಈ ಸಂದರ್ಭದಲ್ಲಿ ಬಿಜೆಪಿ ಸವದತ್ತಿ ಮಂಡಲ ಅಧ್ಯಕ್ಷರಾದ ವಿರೂಪಾಕ್ಷ ಮಾಮನಿ ಹಾಗೂ ಪ್ರಮುಖರು ಉಪಸ್ಥಿತರಿದ್ದರು

## ಅರಭಾವಿಯಲ್ಲಿ ಶಿಕ್ಷಕರ ದಿನಾಚರಣೆ

**ಮೂಡಲಗಿ:** ಸಮೀಪದ ಅರಭಾವಿಯ ಕಿತ್ತೂರ ರಾಣಿ ಚನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕದ ವತಿಯಿಂದ ಶನಿವಾರ ಡಾ. ಸರ್ವಪಲ್ಲಿ ರಾಧಾಕೃಷ್ಣ ರವರ ಜನ್ಮ ದಿನದ ಅಂಗವಾಗಿ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಿರಾಚತೋಮ ಪ್ರಭಾರಿ ಡೀನ್ ಡಾ. ವಿಲಾಸ ಗಸ್ತಿ ವಹಿಸಿ ಡಾ. ಸರ್ವಪಲ್ಲಿ ರಾಧಾಕೃಷ್ಣ ರವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಶಿಕ್ಷಕರ ದಿನಾಚರಣೆಗೆ ಕುರಿತು ಮಾತನಾಡುತ್ತ ಜೀವನದಲ್ಲಿ ತಂದೆ ತಾಯಿ ಅಷ್ಟೇ ಮಹತ್ವವನ್ನು ಶಿಕ್ಷಕರು ಕೂಡಾ ಹೊಂದಿರುತ್ತಾರೆ. ಹರ ಮುನಿದರು ಗುರು ಕಾಯುವನು ಎಂಬ ನಾನುಡಿಯನ್ನು ವ್ಯಕ್ತ ಪಡಿಸಿದರು. ಈ ಕಾರ್ಯಕ್ರಮದ ಪ್ರಾರ್ಥನಾ ಗೀತೆಯನ್ನು ಸುಶ್ಮಿತಾ ಹಾಗೂ ಸಂಗಡಿಗರು ಹಾಡಿದರು. ವಿದ್ಯಾರ್ಥಿಗಳಾದ ಮಾರುತಿ ಕುಂಬಾರ ಶಿಕ್ಷಕರ ದಿನಾಚರಣೆ ಕುರಿತು ಮಾತನಾಡಿದರು.ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮದ ಅಧಿಕಾರಿ ಡಾ. ರಾಘವೇಂದ್ರ ಕೆ.ಎಸ್. ಉಪಸ್ಥಿತರಿದ್ದರು ಮತ್ತು ವಿದ್ಯಾರ್ಥಿಗಳು ಹಾಗೂ ಶಿಕ್ಷಕ ಶಿಕ್ಷಕೇತರ ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.



## ಜನರಲ್ಲಿ ನೇತ್ರ-ದೇಹದಾನದ ಜಾಗೃತಿ ಮೂಡಿಸಿ



**ಜಮಖಂಡಿ:** ಜನರಲ್ಲಿ ನೇತ್ರದಾನ ಮತ್ತು ದೇಹದಾನದ ಜಾಗೃತಿ ಕಡಿಮೆಯಿದ್ದು, ಜಾಥಾಗಳ ಮೂಲಕ ಜನರಲ್ಲಿ ಜಾಗೃತಿ, ಅರಿವು ಮೂಡಿಸಬೇಕಾಗಿದೆ ಎಂದು ಭಾರತೀಯ ವೈದ್ಯಕೀಯ ಸಂಸ್ಥೆ ತಾಲೂಕಾಧ್ಯಕ್ಷ ಡಾ.ಹೆಚ್.ಜಿ.ದಡ್ಡಿ ಹೇಳಿದರು.

ನಗರದ ಬಸವಭವನ ಆವರಣದಲ್ಲಿ ಶನಿವಾರ ನಗರದ ಕುಂಚನೂರ ರಸ್ತೆಯಲ್ಲಿರುವ ಎಂ.ಎಂ.ಜೋಶಿ ನೇತ್ರ ವಿಜ್ಞಾನ ಸಂಸ್ಥೆ ಸಹಯೋಗದಲ್ಲಿ ತಾಲೂಕಿನ ವಿವಿಧ 12 ಕಾಲೇಜುಗಳ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ನೇತ್ರದಾನ ಜಾಗೃತಿ ಜಾಥಾಗೆ ಚಾಲನೆ ನೀಡಿ ಮಾತನಾಡಿದರು.

ಪ್ರತಿಯೊಬ್ಬರಲ್ಲಿ ದೃಷ್ಟಿದೋಷ ಇರಬಹುದು, ಆದರೇ ನಿರ್ಲಕ್ಷ ಮಾಡದೇ ಚಿಕಿತ್ಸೆ ಪಡೆದುಕೊಳ್ಳಬೇಕು. ನೇತ್ರದಾನ ಮಹತ್ವದಾಗಿದ್ದು, ಓರ್ವ ಮೃತ ವ್ಯಕ್ತಿ ನೇತ್ರದಾನದಿಂದ ಇಬ್ಬರಿಗೆ ದೃಷ್ಟಿ ಲಭ್ಯವಾಗತ್ತದೆ. ಮಣ್ಣಲ್ಲಿ ಮಣ್ಣು ಮಾಡುವ ಬದಲಾಗಿ ನೇತ್ರದಾನ ಮಾಡಬೇಕೆಂದರು.

ಮುತ್ತಿನಕಂತಿ ಹಿರೇಮಠದ ಶಿವಲಿಂಗ ಪಂಡಿತಾರಾಧ್ಯ ಶಿವಾಚಾರ್ಯರು ಮಾತನಾಡಿ, ಮನುಷ್ಯನಿಗೆ ಕಣ್ಣು ಪ್ರಮುಖ ಆಗಿದೆ. ಮೃತ ನಂತರ ನಾವು ನೇತ್ರ ದಾನ ಮಾಡುವ ಮೂಲಕ ಇನ್ನೊಬ್ಬರ ಜೀವನಕ್ಕೆ ಬೆಳಕು ಆಗಬೇಕು. ಭವಿಷ್ಯದಲ್ಲಿ ನೇತ್ರದಾನಕ್ಕಿಂತ ಯಾವುದೇ ಶ್ರೇಷ್ಠ ದಾನವಿಲ್ಲ ಎಂದರು.

ಇದೇ ಸಂದರ್ಭದಲ್ಲಿ ತಹಶೀಲ್ದಾರ ಅನೀಲ ಬಡಿಗೇರ, ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕ ಬಸನ್ನವರ, ಡಾ. ದೀಪಾ ಮುಗಳಿ ಎ.ಜಿ.ಎಂ. ಕಾಲೇಜಿನ ಪ್ರಾಚಾರ್ಯ ಬಡಿಗೇರ, ಎಂ.ಎಂ.ಜೋಶಿ ಆಸ್ಪತ್ರೆ, ಎ.ಜಿಎಂ. ಕಾಲೇಜು, ಸರಕಾರಿ ಪದವಿಪೂರ್ವ ಕಾಲೇಜು ಜಮಖಂಡಿ, ಜೀವನ ಆರೋಗ್ಯ ಪ್ಯಾರಾ ಮೆಡಿಕಲ್ ಜಮಖಂಡಿ, ಹುನ್ನೂರ ಪದವಿಪೂರ್ವ ಕಾಲೇಜು ಸಹಿತ 12 ಕಾಲೇಜಿನ ಪ್ರಾಚಾರ್ಯರು, ವಿದ್ಯಾರ್ಥಿಗಳು ಇದ್ದರು.

## ದೇಶದ ಪ್ರಗತಿಗೆ ಎಲ್‌ಐಸಿ ಕೊಡುಗೆ ಅಪಾರ: ಗುರುಸಿದ್ಧೇಶ್ವರಶ್ರೀ




**ರಬಕವಿ-ಬನಹಟ್ಟಿ: ಮನುಷ್ಯನ ಸರ್ವಾಂಗೀಣ ಅಭಿವೃದ್ಧಿಗೆ ಜೀವವಿಮೆ ಪೂರಕವಾಗಿದೆ.** ಜೀವವಿಮೆಯಿಂದ ಉಳಿತಾಯ ಪ್ರವೃತ್ತಿ ಹೆಚ್ಚುತ್ತಿದೆ. ದೇಶದ ಆರ್ಥಿಕ ಪ್ರಗತಿಯಲ್ಲೂ ಜೀವವಿಮೆ ಸಂಸ್ಥೆಯ ಕೊಡುಗೆ ಅನನ್ಯವಾಗಿದೆಯೆಂದು ಗುರುದೇವ ಶ್ರೀಬ್ರಹ್ಮಾನಂದ ಆಶ್ರಮದ ಗುರುಸಿದ್ದೇಶ್ವರಶ್ರೀ ನುಡಿದರು.

ರಬಕವಿಯ ಭಾರತೀಯ ಜೀವವಿಮಾ ಸಂಸ್ಥೆಯ ಸೆಟ್‌ಲೈಟ್ ಕಚೇರಿಯಲ್ಲಿ ನಡೆದ ವಿಮಾ ಸಪ್ತಾಹ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ದೇಶದ ಆರ್ಥಿಕತೆಯ ಬೆಳವಣಿಗೆಗೆ ಕೊಡುಗೆ ನೀಡಿದೆ ಎಂದರು. ಸಪ್ತಾಹದ ಅಂಗವಾಗಿ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ವಿನೋದ ಸಾಹಿತಿ ಯಶವಂತ ವಾಜಂತ್ರಿ, ನಿವೃತ್ತ ನೌಕರರ ಸಂಘದ ಅಧ್ಯಕ್ಷ ಮೃತ್ಯುಂಜಯ ರಾಮದುರ್ಗ ಮುಖ್ಯ ಅತಿಥಿಗಳಾಗಿದ್ದರು. ಶಾಖಾಧಿಕಾರಿ ಪ್ರಕಾಶ ಕಾಂಬಳೆ ಅಧ್ಯಕ್ಷತೆ ವಹಿಸಿದ್ದರು. ಅಭಿವೃದ್ಧಿ ಅಧಿಕಾರಿ ಡಿ.ಬಾಪುಗೌಡ ಪ್ರಸ್ತಾವಿಕ ಮಾತುಗಳಾಡಿದರು. ಮಲ್ಲಿಕಾರ್ಜುನ ಕುಚನೂರ ನಿರ್ವಹಿಸಿದರು. ಅಶೋಕ ವಸ್ತ್ರದ ವಂದಿಸಿದರು. ರಾಜೇಂದ್ರ ಹುನ್ನೂರ, ರಾಜು ಕಾಳೆ, ಸಿದ್ದಪ್ಪ ಮೇಣಿ, ಈರಣ್ಣಾ ಹಲಗತ್ತಿ, ಸತೀಶ ಮೋಟಗಿ, ಶಿವಾನಂದ ಕೆಂಚಪ್ಪನವರ, ಮುರಿಗೆಪ್ಪ ಭಿಲವಡಿ, ಸಂತೋಷ ಬಿಲವಡಿ, ಸುರೇಖಾ ಗಾಯಕವಾಡ, ಜ್ಯೋತಿ ಹ್ಯಾವಿನ, ಶೈಲಾ ಹುಲ್ಲೂರ, ಪುಷ್ಪಾ ಕಡಕೋಳ, ಅನಸೂಯಾ ಉಮರಾಣಿ, ಪ್ರಕಾಶ ಯರಗಟ್ಟಿ ಮೊದಲಾದವರಿದ್ದರು.

# ಶಿಕ್ಷಕ ಮತ್ತು ವಿದ್ಯಾರ್ಥಿಗಳ ನಡುವಿನ ಸ್ನೇಹ ಸಂಬಂಧ ಅನೋನ್ಯವಾಗಿರಲಿ: ಯಾದವ

**ಬಸವನಬಾಗೇವಾಡಿ:** ಶಿಕ್ಷಕ ಮತ್ತು ವಿದ್ಯಾರ್ಥಿಗಳ ನಡುವಿನ ಸ್ನೇಹ ಸಂಬಂಧಗಳು ಯಾಂತ್ರಿಕರಣ ಗೊಳ್ಳುತ್ತಿರುವ ಕಾಲಘಟ್ಟದಲ್ಲಿ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ತುಂಬಾ ಅರ್ಥಪೂರ್ಣವಾಗಿದೆ ಹಾಗೂ ಮಹತ್ವವನ್ನು ಪಡೆದುಕೊಳ್ಳುವಂಥದ್ದಾಗಿದೆ ಎಂದು ಎಂ ಕೆ ಯಾದವ ಹೇಳಿದರು.

ಪಟ್ಟಣದ ಬಿ.ಎಲ್.ಡಿ.ಇ ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಸಭಾಂಗಣದಲ್ಲಿ ಡಾ. ಸರ್ವಪಲ್ಲಿ ರಾಧಾಕೃಷ್ಣನ ಅವರ ಜನ್ಮದಿನದಂಗವಾಗಿ ಶುಕ್ರವಾರ ಶಿಕ್ಷಕರ ದಿನಾಚರಣೆಯ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ತಂದೆ-ತಾಯಿ, ಗುರುಗಳನ್ನು ಗೌರವಿಸಿ ಪ್ರಾಮಾಣಿಕತೆಯಿಂದ ಕಲಿತದ್ದೇ ಆದರೆ ತಮ್ಮ ಜೀವನದಲ್ಲಿ ಬಹುಬೇಗನೆ ಯಶಸ್ವಿಯಾಗುವಲ್ಲಿ ಯಾವ ಸಂದೇಹವಿಲ್ಲ.. ಪ್ರತಿಯೊಬ್ಬರು ಘನತೆ ಗೌರವದ ಬದುಕನ್ನು ಸಾಗಿಸಬೇಕಾದರೆ ಕಲಿಕೆಯನ್ನು ಒಂದು ತಪಸ್ಸಿನಂತೆ ಸ್ವೀಕರಿಸಬೇಕು. ಪ್ರತಿಯೊಬ್ಬ ಶಿಕ್ಷಕನು ತನ್ನ ವಿದ್ಯಾರ್ಥಿಯಿಂದ ಬಯಸುವಂಥದ್ದು ಕೇವಲ ಉತ್ತಮ ಅಂಕಗಳ, ಒಳ್ಳೆಯ ವ್ಯಕ್ತಿತ್ವ ಮಾತ್ರ ಎಂದು ಅವರು ಅಭಿಪ್ರಾಯಪಟ್ಟರು




ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಎ.ವ್ಹಿ. ಸೂರ್ಯವಂಶಿ ಮಾತನಾಡಿ, ಪ್ರತಿಯೊಬ್ಬ ವಿದ್ಯಾರ್ಥಿಯು ತಮ್ಮ ಜೀವನದಲ್ಲಿ ಸಮಯಕ್ಕೆ ಮಹತ್ವ ಕೊಟ್ಟು ಕಲಿತರೆ ಸಮಾಜದಲ್ಲಿ ಘನತೆ ಗೌರವದ ಜೀವನ ಸಾಗಿಸಲು ಸಾಧ್ಯವೆಂದರು.

ಪ್ರಾಚಾರ್ಯ ಡಾ.ಎ ವ್ಹಿ. ಸೂರ್ಯವಂಶಿ ಅವರಿಂದ ಕೇಕ್ ಕತ್ತರಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ವಿದ್ಯಾರ್ಥಿಗಳು ಶಿಕ್ಷಕರಿಗಾಗಿ ಲಗೋರಿ, ಸಂಗೀತ ಕುರ್ಚಿ, ಕ್ರಿಕೆಟ್ ಕಪ್, ಪಿರಮಿಡ್, ಕಣ್ಣು ಕಟ್ಟಿ ವಸ್ತು ಗುರುತಿಸುವಿಕೆ, ಲಾಜಿಕ್ ಪ್ರಶ್ನಾವಳಿ ಹಲವಾರು ಆಟಗಳನ್ನು ಏರ್ಪಡಿಸಿ ಶಿಕ್ಷಕರಲ್ಲಿ ಮನರಂಜನೆಯನ್ನು ಉಂಟು ಮಾಡಿದರು. ಕಾರ್ಯಕ್ರಮದಲ್ಲಿ ಡಾ. ಶ್ರೀನಿವಾಸ ಎ. ಟಿ, ಡಾ. ಬಿ. ಎಮ್. ಸಾಲವಾಡಗಿ, ಡಾ. ವಾಯ್. ಬಿ. ನಾಯಕ, ಡಾ. ಶ್ರೀರಾಮ ಬಿಜಾಪುರ, ಎಸ್. ಕೆ .ಚಿಕ್ಕನರ್ತಿ, ಸಿ. ಪಿ. ಧಡೇಕರ, ಡಾ .ಎಸ್. ಬಿ. ಜನಗೊಂಡ, ಎಸ್. ಜೆ, ಸೂರ್ಯವಂಶಿ. ಪಿ.ಎಸ್. ನಾಟಿಕರ, ಜಯರಾಮ್ ರೆಡ್ಡಿ, ವಿ.ಎನ್. ರಜಪೂತ, ಆರ್. ಎಂ. ಮುಜಾವರ, ಐಶ್ವರ್ಯ ಹಕ್ಕೆ ಇತರರು ಇದ್ದರು.



## ಶಾಸಕ ಸಿ.ಎಸ್. ನಾಡಗೌಡಗೆ ಸನ್ಮಾನ

**ಮುದ್ದೇಬಿಹಾಳ:** ಪಟ್ಟಣದ ಮಹಾಂತೇಶ ನಗರದಲ್ಲಿರುವ ಶ್ರೀ ಮಹಾಗಣಪತಿ ದೇವಸ್ಥಾನದ ವಾರ್ಷಿಕೋತ್ಸವದ ಸಂದರ್ಭದಲ್ಲಿ ಶಾಸಕ ಸಿ.ಎಸ್. ನಾಡಗೌಡ ಅವರು ಮಹಾಗಣಪತಿಯ ದರ್ಶನ ಪಡೆದರು. ಈ ಸಮಯದಲ್ಲಿ ಮಹಾಗಣಪತಿ ದೇವಸ್ಥಾನದ ಸಮೀತಿಯ ವತಿಯಿಂದ ಅವರಿಗೆ ಶಾಲುಹೊದಿಸಿ ಸನ್ಮಾನಿಸಿ ಗೌರವಸಿಲಾಯಿತು.

## ಮಾದೇವ ದಡ್ಡಿಮನಿ ಅವರಿಗೆ ಉತ್ತಮ ಶಿಕ್ಷಕ ಪ್ರಶಸ್ತಿ



**ಹಳ್ಳೂರ:** ಶಿಕ್ಷಕರ ದಿನಾಚರಣೆ ನಿಮಿತ್ಯ ಕರ್ನಾಟಕ ರಾಜ್ಯ ಪ್ರೌಡ ಶಾಲಾ ಶಿಕ್ಷಕರ ಸಂಘ ಮೂಡಲಗಿ ತಾಲೂಕಾ ಮಟ್ಟದ ವತಿಯಿಂದ ಕೊಡಮಾಡುವ ಬ ಕು ಮ ಪ್ರೌಢಶಾಲೆ ಹಳ್ಳೂರ ಪ್ರೌಡ ಶಾಲೆಯಲ್ಲಿ ಕನ್ನಡ ಭಾಷೆ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಮಹಾದೇವ ತುಕ್ಕಪ್ಪ ದಡ್ಡಿಮನಿ ಇವರಿಗೆ 2025ನೇ ಸಾಲಿನ ತಾಲೂಕ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾಗಿರುತ್ತಾರೆ. ಅವರಿಗೆ ಬ.ಕು.ಮ ಪ್ರೌಡ ಶಾಲೆಯ ಗುರುಗಳು ವಿದ್ಯಾರ್ಥಿಗಳು, ಹಳ್ಳೂರ, ಕಪ್ಪಲಗುದ್ದಿ ಗ್ರಾಮಸ್ಥರು ಅಭಿನಂದನೆಗಳು ಸಲ್ಲಿಸಿದ್ದಾರೆ.

# ವಿದ್ಯಾರ್ಥಿಗಳ ಸಾಧನೆಯ ಹಿಂದೆ ಶಿಕ್ಷಕರ ತ್ಯಾಗ ಅಡಗಿದೆ

**ರಾಯಬಾಗ:** ನಮ್ಮ ಸಂಸ್ಕೃತಿಯಲ್ಲಿ ಗುರುವನ್ನು ದೇವರಿಗಿಂತಲೂ ಉನ್ನತಸ್ಥಾನದಲ್ಲಿ ಇರಿಸಲಾಗಿದೆ. "ಗುರು ಬ್ರಹ್ಮಾ, ಗುರು ವಿಷ್ಣು, ಗುರು ದೇವೋ ಮಹೇಶ್ವರಃ" ಎಂಬ ಶ್ಲೋಕವು ಶಿಕ್ಷಕರ ಮಹತ್ವವನ್ನು ಸಾರುತ್ತದೆ.

ಇಂದು ನಮ್ಮ ಸಮಾಜದಲ್ಲಿ ನಡೆಯುತ್ತಿರುವ ಅಭಿವೃದ್ಧಿ, ನಮ್ಮ ವಿದ್ಯಾರ್ಥಿಗಳ ಸಾಧನೆ ? ಇವೆಲ್ಲದರ ಹಿಂದೆ ಶಿಕ್ಷಕರ ತ್ಯಾಗ, ಪರಿಶ್ರಮ ಮತ್ತು ಶ್ರದ್ಧೆ ಅಡಗಿದೆ. ಒಬ್ಬ ಶಿಕ್ಷಕ ಮಾತ್ರ ವಿದ್ಯಾರ್ಥಿಯ ಬದುಕನ್ನು ಮಾರ್ಪಡಿಸಬಲ್ಲ ಶಕ್ತಿ ಹೊಂದಿರುತ್ತಾನೆ ಎಂದು ಶಾಸಕ ಡಿ ಎಂ ಐಹೊಳೆ ಹೇಳಿದರು.

ಪಟ್ಟಣದ ಮಹಾವೀರ ಭವನದಲ್ಲಿ ಶನಿವಾರ ನಡೆದ ಶಿಕ್ಷಕರ ದಿನಾಚರಣೆಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣವರ ಮಾತನಾಡಿ,ಇಂದು ಪ್ರತಿಯೊಬ್ಬ ವಿದ್ಯಾರ್ಥಿಯ ಜೀವನದಲ್ಲಿ ಒಬ್ಬ ಗುರುನ ಶ್ರದ್ಧೆ, ಶ್ರಮ ಮತ್ತು ತ್ಯಾಗ ಅಡಗಿದೆ. ಸಮಾಜದಲ್ಲಿ ನಾವು ಕಾಣುತ್ತಿರುವ ವಿಜ್ಞಾನಿಗಳಿಂದ ಹಿಡಿದು ರೈತರ ಮಕ್ಕಳು ಸಾಧಿಸುತ್ತಿರುವ



ಯಶಸ್ಸಿನ ಹಿಂದೆಯೂ ಗುರುಗಳ ಶಕ್ತಿ ಕೆಲಸ ಮಾಡುತ್ತಿದೆ.ಹೀಗಾಗಿ ನಾನು ಗುರುಗಳಿಗೆ ಬಹಳ ಗೌರವ ಕೊಡುತ್ತೇನೆ ಎಂದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಸೀತಾರಾಮು ಆರ್ ಎಸ್, ಸಿದ್ಧಾರೂಢ ಮಠದ ಆತ್ಮಾನಂದ ಸ್ವಾಮೀಜಿ,ತಹಶೀಲ್ದಾರ್ ಸುರೇಶ ಮುಂಜೆ, ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜಪ್ಪ ಆರ್ ಶಿಕ್ಷಕರನ್ನು ಉದ್ದೇಶಿಸಿ ಮಾತನಾಡಿದರು.

ಚಿಕ್ಕೋಡಿ ಡಯಟ್ ನ ಪ್ರಾಚಾರ್ಯ ಸಂಜು ಹುಲ್ಲೊಳ್ಳಿ, ಮಧ್ಯಾಹ್ನ ಬಿಸಿಯೂಟ ಯೋಜನೆಯ ಸಹಾಯಕ ನಿರ್ದೇಶಕ ಕುಮಾರ ಮಾದರ,ಪಟ್ಟಣ ಪಂಚಾಯಿತಿ ಅಧ್ಯಕ್ಷ ಅಶೋಕ ಅಂಗಡಿ,ತಾ ಪಂ ಇ ಓ ಡಾ.ಸುರೇಶ ಕದ್ದು, ಮುಖ್ಯಾಧಿಕಾರಿ ಸಂಜೀವ ಮಾಂಗ,ಬಸವರಾಜ ಕಾಂಬಳೆ,ಜಿನೇಂದ್ರ ನಿಲಜಗಿ, ಬಿ ಲ್ ಘಂಟಿ, ವಿಷ್ಣು ಅರಗೆ, ದೈಹಿಕ ಪರಿವೀಕ್ಷಕ ಮಹಾವೀರ ಜೀರಗಿಹಾಳ, ಪ್ರಶಾಂತ ಶಾರಬಿದ್ರೆ, ವಿಠ್ಠಲ ತೇರದಾಳೆ ಸೇರಿದಂತೆ ತಾಲ್ಲೂಕಿನ ಎಲ್ಲ ಶಾಲೆಗಳ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕರು ಇದ್ದರು.

# ಮಹಾಗಣಪತಿ ದೇವಸ್ಥಾನದ 14ನೇ ವಾರ್ಷಿಕೋತ್ಸವ

**ಮುದ್ದೇಬಿಹಾಳ:** ಪ್ರತೀ ವರ್ಷ ಸಾಗಿಬಂದಂತೆ ಈ ವರ್ಷವೂ ಪಟ್ಟಣದ ಮಹಾಂತೇಶ ನಗರದಲ್ಲಿರುವ ಶ್ರೀ ಗಣಪತಿ ದೇವಸ್ಥಾನದ 14 ನೇ ವರ್ಷದ ವಾರ್ಷಿಕೋತ್ಸವ ಶನಿವಾರರಂದು ಅತೀ ವಿಜೃಂಭಣೆಯಿಂದ ಜರುಗಿತು.

ಕಸಾಪ ಅಧ್ಯಕ್ಷರಾದ ಕಾಮರಾಜ ಬಿರಾದಾರ ಅವರು ಮಾತನಾಡಿ ಪ್ರತೀ ವರ್ಷ ಶ್ರೀ ಗಣೇಶ ಉತ್ಸವ ಸಮಯದಲ್ಲಿ ಈ ನಗರದಲ್ಲಿ ಗಣೇಶನ ಪ್ರತಿಷ್ಠಾಪನೆ ಮಾಡಲಾಗುತ್ತಿತ್ತು ಊರಿನಲ್ಲಿ ಗಣಪತಿ ದೇವಸ್ಥಾನ ಇಲ್ಲದ್ದರಿಂದ ಪಟ್ಟಣದಲ್ಲಿ ಎಲ್ಲ ಯುವಕ ಮಂಡಳಿಯವರು ಸೇರಿ ಇದೇ ಸ್ಥಳದಲ್ಲಿ ಗಣಪತಿಯ ದೇವಸ್ಥಾನ ಪ್ರತಿಷ್ಠಾಪನೆ ಮಾಡಿರುವದು ಅತ್ಯಂತ ಹೆಮ್ಮೆಯ ಸಂಗತಿಯಾಗಿದ್ದು ಇದಕ್ಕೆ ಕೈ ಜೋಡಿಸಿ ಬೆನ್ನೆಲುಬಾಗಿ ನಿಂತ ವ್ಯಕ್ತಿಗಳನ್ನು ಸ್ಮರಿಸುವ ಮೂಲಕ ಪ್ರತಿ ವರ್ಷ ಈ ಉತ್ಸವವನ್ನು ಅದ್ದೂರಿಯಾಗಿ ಮಾಡುತ್ತಾ ಸಾಗಿಬಂದಿರುವ ಎಲ್ಲ ಕಮೀಟಿ ಬಳಗಕ್ಕೆ ಅಭಿನಂದನೆಗಳನ್ನು ಸಲ್ಲಿಸಿದರು. ಸದಸ್ಯರಾದ ನೇತಾಜಿ ನಲವಡೆ ಅವರು ಮಾತನಾಡಿದರು.

ಅಂದು ಬೆಳಿಗ್ಗೆ 6 ಘಂಟೆಗೆ ಮಹಾಗಣಪತಿ ದೇವಸ್ಥಾನದಲ್ಲಿ ಶ್ರೀ ಲಕ್ಷ್ಮೀ ವೆಂಕಟೇಶ್ವರ ಭಜನಾ ಮಂಡಳಿಯವರಿಂದ ವಿಷ್ಣು ಸಹಸ್ರನಾಮ



ಜರುಗಿತಲ್ಲದೇ ನಂತರ ಗಂಗಸ್ಥಳದೊಂದಿಗೆ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠಕ್ಕೆ ತೆರಳಿ ಕಳಸಾರೋಹಣ ಜರುಗಿ ನಂತರ ಶ್ರೀ ಗಣಪತಿಯ ಮಹಾ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಕೂಡ್ರಿಸಿ ಪ್ರಮುಖ ಬೀದಿಗಳಲ್ಲಿ ಹಾಯ್ದು ಪುನಃ ಶ್ರೀ ಮಹಾಗಣಪತಿಯ ದೇವಸ್ಥಾನಕ್ಕೆ ಬಂದು ತಲುಪಿತು. ನಂತರ ಶ್ರೀ ಗಣೇಶ ಮಹಾಮೂರ್ತಿಗೆ ಮಹಾಭಿಷೇಕ, ಪುಷ್ಪಾರ್ಚನೆ, ಅಲಂಕಾರ, ವೇ॥ ಗುರುರಾಜ ರಾಜಪುರೋಹಿತಆಚಾರ್ಯ ಹಾಗೂ ಆನಂದ ಆಚಾರ್ಯ ಅವರ ನೇತೃತ್ವದಲ್ಲಿ ಹೋಮ ಹವನ ಕಾರ್ಯಕ್ರಮ ಜರುಗಿದವು.

ಸಾಯಂಕಾಲ 5 ಘಂಟೆಗೆ ಸುಮಂಗಲೆಯರ ಉಡಿತುಂಬುವ ಕಾರ್ಯಕ್ರಮ ನಡೆಯಿತಲ್ಲದೇ ವಿವಿದ ಗಣ್ಯರಿಗೆ ಸನ್ಮಾನ ಕಾರ್ಯಕ್ರಮ ಜರುಗಿತು. ರಾತ್ರಿ ಸ್ಥಳೀಯ ಕಲಾವಿದರಿಂದ ಹಾಗೂ ಮಕ್ಕಳಿಂದ ವಿವಿಧ ರಸಮಂಜರಿ ಕಾರ್ಯಕ್ರಮ ಜರುಗಿದವು. ಈ ಕಾರ್ಯಕ್ರಮದಲ್ಲಿ ಮಹಾಗಣಪತಿ ದೇವಸ್ಥಾನದ ಸಮೀತಿಯ ಅಧ್ಯಕ್ಷರಾದ ಮಾರುತಿ ನಲವಡೆ, ಉಪಾಧ್ಯಕ್ಷರಾದ ಬಸವರಾಜ ಮುರಾಳ, ಪ್ರ.ಕಾರ್ಯದರ್ಶಿ ರಾಜೇಂದ್ರಗೌಡ ರಾಯಗೊಂಡ, ಸಹ ಕಾರ್ಯದರ್ಶಿ ಶಿವಾಜಿ ಬಿಜಾಪೂರ, ಖಜಾಂಚಿ ಆನಂದ ಕಾಮಟೆ, ಸಂ. ಕಾರ್ಯದರ್ಶಿ ರಾಘವೇಂದ್ರ ಕುಲಕರ್ಣಿ, ಸದಸ್ಯರಾದ ಸಂಗನಗೌಡ ಪಾಟೀಲ, ನೇತಾಜಿ ನಲವಡೆ, ಮುತ್ತು ರಾಯಗೊಂಡ, ರಾಜು ಪಾಟೀಲ(ಕವಡಿಮಟ್ಟಿ), ಅಶೋಕ ತಾರನಾಳ, ವಿಜಯಕುಮಾರ ವಡವಡಗಿ, ಬಸವರಾಜ ಸಜ್ಜನ, ಪಾಂಡುರಂಗ ಪದಕಿ, ಸಚೀನ್ ಸಾಳುಂಕೆ, ವಿರುಪಾಕ್ಷಿ ಪತ್ತಾರ, ಪುರಸಭಾ ಅಧ್ಯಕ್ಷ ಮಹಿಬೂಬ ಗೊಳಸಂಗಿ ಸದಸ್ಯರಾದ ಯಲ್ಲಪ್ಪ ನಾಯಕಮಕ್ಕಳ, ಗೋಪಿ ಮಡಿವಾಳರ, ಸುರೇಶ ನಾಡಗೌಡ(ಬಸರಕೋಡ) ಚಿನ್ನು ನಾಡಗೌಡ ಮೊದಲಾದವರು ಉಪಸ್ಥಿತರಿದ್ದರು.

## ಕಿರು ಕಥೆ ಸಲ್ಲಿಸಲು ಸೆ.18 ಕೊನೆಯ ದಿನ

**ಗದಗ:** ಅಕ್ಟೋಬರ್ 7 ರಂದು ಶ್ರೀ ಮಹರ್ಷಿ ವಾಲ್ಮೀಕಿಯವರ ಜಯಂತಿ ದಿನಾಚರಣೆಯ ಹಿನ್ನೆಲೆಯಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ಆದೇಶದಂತೆ ಶ್ರೀ ಮಹರ್ಷಿ ವಾಲ್ಮೀಕಿಯವರ " ಜೀವನ ಮತ್ತು ಸಾಧನೆ " ಕುರಿತು ಕಥಾ ಸಂಕಲನ ಬಿಡುಗಡೆ ಮಾಡಬೇಕಾಗಿದೆ. ಆಸಕ್ತರು ಶ್ರೀ ಮಹರ್ಷಿ ವಾಲ್ಮೀಕಿರವರ ಜೀವನ ಮತ್ತು ಸಾಧನೆ ಕುರಿತು 2 ಪುಟಗಳಿಗೆ ಮೀರದಂತೆ ಕಿರು ಕಥೆಗಳನ್ನು ರಚಿಸಿ ಸೆಪ್ಟೆಂಬರ್ 18 ರೊಳಗಾಗಿ ಉಪನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಗದಗ ರೂ.ನಂ.107 ಇಲ್ಲಿಗೆ ಕಳುಹಿಸಿಕೊಡಬೇಕೆಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಾರ್ವಜನಿಕರ ಗಮನಕ್ಕೆ

**ಗದಗ:** ಸಾರ್ವಜನಿಕರಿಗೆ ತಿಳಿಸುವುನೆಂದರೆ ರಿ.ಸ.ನಂ. 493/1+493/2+494/1 ಆಸ್ತಿಯನ್ನು ಪುರಸಭೆ ಮಾಲ್ಕಿ ಆಸ್ತಿಯನ್ನು ರೋಣ ತಾಲೂಕ ನೇಕಾರ ಕುರುವಿನಶೆಟ್ಟಿ ಸಂಘ( ರಿ) ರೋಣ ಇವರಿಗೆ ಸಮುದಾಯ ಭವನದ ಕಟ್ಟಡ ನಿರ್ಮಾಣಕ್ಕಾಗಿ ಮಂಜೂರು ಮಾಡಲು ತೀರ್ಮಾನಿಸಿರುತ್ತದೆ. ಈ ಕುರಿತು ಯಾವುದೇ ತಕರಾರು ಆಕ್ಷೇಪಣೆ ಇದ್ದಲ್ಲಿ 30 (ಮೂವತ್ತು) ದಿವಸಗಳಲ್ಲಿ ಲೇಖಿ ಮೂಲಕ ಸಲ್ಲಿಸಬೇಕು ತಪ್ಪಿದಲ್ಲಿ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲ ಎಂದು ತಿಳಿದು ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ರೋಣ ಪುರಸಭೆ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

## ಆಕ್ಷೇಪಣೆ ಸಲ್ಲಿಕೆಗೆ ಅವಕಾಶ

**ಗದಗ:** ಸಾರ್ವಜನಿಕರಿಗೆ ತಿಳಿಸುವುನೆಂದರೆ ರಿ.ಸ.ನಂ. 680/2ಬ/1 ಟಿ.ಎಂ.ಸಿ ನಂ.3329/ಎ/1 ಆಸ್ತಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ರೋಣ ಇವರಿಗೆ ವಸತಿ ನಿಲಯ ಕಟ್ಟಡಕ್ಕಾಗಿ ಮಂಜೂರು ಮಾಡಲು ತೀರ್ಮಾನಿಸಿರುತ್ತದೆ. ಈ ಕುರಿತು ಯಾವುದೇ ತಕರಾರು ಆಕ್ಷೇಪಣೆ ಇದ್ದಲ್ಲಿ 30 (ಮೂವತ್ತು) ದಿವಸಗಳಲ್ಲಿ ಲೇಖಿ ಮೂಲಕ ಸಲ್ಲಿಸಬೇಕು ತಪ್ಪಿದಲ್ಲಿ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲ ಎಂದು ತಿಳಿದು ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ರೋಣ ಪುರಸಭೆ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

# ಲಕ್ಷ ದೀಪೋತ್ಸದ ಸಿದ್ಧತೆಗೆ ಚಾಲನೆ

**ಜಮಖಂಡಿ:** ಭಾರತದಲ್ಲಿ ಹಲವಾರು ಪುರಾತನ ಮಂದಿರಗಳು, ದೇವಸ್ಥಾನಗಳು ಹಾಳುಬಿದ್ದಿದ್ದು ಸುತ್ತಮುತ್ತಲಿನ ಜನರು ಅವುಗಳನ್ನು ಜೀರ್ಣೋದ್ಧಾರ ಮಾಡುವ ಮೂಲಕ ಪೂಜಾ ಕೈಂಕರ್ಯ ಮುಂದುವರೆಸಿಕೊಂಡು ಹೋಗಬೇಕು ಎಂದು ಮುತ್ತಿನಕಂತಿ ಹಿರೇಮಠದ ಶಿವಲಿಂಗ ಶಿವಾಚಾರ್ಯರು ಹೇಳಿದರು.

ತಾಲೂಕಿನ ಕಲ್ಹಳ್ಳಿ ಗ್ರಾಮದಲ್ಲಿ 14ನೇ ಶತಮಾನದಲ್ಲಿ ನಿರ್ಮಾಣಗೊಂಡಿರುವ ಶ್ರೀವೀರಭದ್ರದೇವರ ಮತ್ತು ಶ್ರೀ ಕಾಳಿಕಾದೇವಿಯ ಲಕ್ಷ ದೀಪೋತ್ಸವದ ಪೂರ್ವ ಸಿದ್ದತೆ ಸಭೆಯಲ್ಲಿ ಪ್ರಚಾರ ಸಾಮಗ್ರಿಗಳನ್ನು ಬಿಡುಗಡೆಗೊಳಿಸಿ ಮಾತನಾಡಿದರು.

ಲೋಕ ಕಲ್ಯಾಣಕ್ಕಾಗಿ ತಾಲೂಕಿನ ಕಲ್ಹಳ್ಳಿ ಗ್ರಾಮದಲ್ಲಿ ಪ್ರಥಮ ಬಾರಿಗೆ ಲಕ್ಷ ದೀಪೋತ್ಸವ ಆಯೋಜಿಸಿದ್ದು ಗ್ರಾಮದ ಎಲ್ಲ ಸಮಾಜದವರು ಜೊತೆಗೂಡಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು. ತಾಲೂಕಿನ ಕಲ್ಹಳ್ಳಿ ಗ್ರಾಮದಲ್ಲಿ 14ನೇ ಶತಮಾನದಲ್ಲಿ ನಿರ್ಮಾಣಗೊಂಡಿರುವ ಶ್ರೀವೀರಭದ್ರದೇವರ ಮತ್ತು ಶ್ರೀಕಾಳಿಕಾದೇವಿ ವಿಗ್ರಹಗಳು ಒಂದೇ ದೇವಸ್ಥಾನದ ಗರ್ಭಗುಡಿಯಲ್ಲಿ ಸ್ಥಾಪಿತಗೊಂಡಿವೆ. ಅಪರೂಪದ ದೈವ ಸಂಗಮಕ್ಕೆ ಸಾಕ್ಷಿಯಾಗಿರುವ ಹಿನ್ನಲೆಯಲ್ಲಿ ದೇವಸ್ಥಾನದ ಜಾತ್ರಾ ಮಹೋತ್ಸವ ಕಮೀಟಿ ಪ್ರಪ್ರಥಮ ಬಾರಿಗೆ ಲಕ್ಷ ದೀಪೋತ್ಸವ ಆಚರಣೆಗಾಗಿ ಸಕಲ ಸಿದ್ದತೆಯಲ್ಲಿ ತೊಡಗಿಕೊಂಡಿದ್ದು ಪ್ರತಿಯೊಬ್ಬರು ತನು-ಮನ-ಧನದಿಂದ ಸಹಕಾರ ನೀಡಬೇಕೆಂದರು.

ಇದೇ ಸಂದರ್ಭದಲ್ಲಿ ರಾಜಶೇಖರ ಅಕ್ಕಿ, ರುದ್ರಯ್ಯ ಕರಡಿ, ಶಾಂತೇಶ ಕರಡಿ, ತಿಪ್ಪಣ್ಣ ಉಪ್ಪಲದಿನ್ನಿ, ಸಂಗಪ್ಪ ಉಪ್ಪಲದಿನ್ನಿ, ರಾಚಪ್ಪ ಬಡಿಗೇರ, ಶಿವಪ್ಪ ದ್ಯಾಮನ್ನವರ, ಸಂಜಯ ಕಂಕಣವಾಡಿ, ಅಣ್ಣಪ್ಪ ನಂದಿ ಶ್ರೀ ವೀರಭದ್ರ ಸೇವಾ ಸಮಿತಿಯವರು, ವಿವಿಧ ಸಮಾಜದ ಹಿರಿಯರು ಇದ್ದರು.





## ಶಿಕ್ಷಕರ ಮಾರ್ಗದರ್ಶನದಲ್ಲಿ ಭವಿಷ್ಯವನ್ನು ರೂಪಿಸಿಕೊಳ್ಳಿ: ಸಂಸದೆ ಪ್ರಿಯಾಂಕಾ ಜಾರಕಿಹೊಳಿ

**ಗೋಕಾಕ:** ಮಕ್ಕಳಿಗೆ ಶಿಕ್ಷಣ ನೀಡಿ ಉತ್ತಮ ಪ್ರಜೆಗಳನ್ನಾಗಿ ರೂಪಿಸಿ ದೇಶವನ್ನು ಮುನ್ನಡೆಸುವ ಶಕ್ತಿ ಶಿಕ್ಷಕರಲ್ಲಿದೆ ಎಂದು ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಹೇಳಿದರು.

ಅವರು, ಶುಕ್ರವಾರದಂದು ಸಂಜೆ ನಗರದ ಕೆಎಲ್‌ಇ ಆಂಗ್ಲ ಮಾಧ್ಯಮ ಶಾಲೆಯ ಆವರಣದಲ್ಲಿ ಗುರುಸ್ಮೃತಿ ಸಂಸ್ಥೆಯವರು ಡಾ.ಸರ್ವೆಪಲ್ಲಿ ರಾಧಾಕೃಷ್ಣನ್ ಜಯಂತೋತ್ಸವದ ನಿಮಿತ್ಯ ಹಮ್ಮಿಕೊಂಡ ಗುರುವಂದನಾ ಹಾಗೂ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ವಿದ್ಯಾರ್ಥಿಗಳು ಶಿಕ್ಷಕರ ಮಾರ್ಗದರ್ಶನದಲ್ಲಿ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಿ. ಯುವ ಪೀಳಿಗೆ ದುಷ್ಚಗಳಿಂದ ದೂರವಿದ್ದು ಸಮಾಜ ಮುಖಿ ಕಾರ್ಯಗಳಲ್ಲಿ ತಮ್ಮನ್ನು ತೋಡಗಿಸಿಕೊಳ್ಳಿ. ಶಿಕ್ಷಣದಿಂದ ಬದಲಾವಣೆ ಸಾಧ್ಯ. ಶಿಕ್ಷಕರು ನೀಡುವ ಸಂಸ್ಕಾರದಿಂದ ಒಳ್ಳೆಯ ನಾಗರಿಕರಾಗಿ ದೇಶವನ್ನು ಬಲಿಷ್ಠಗೊಳಿಸಬೇಕೆಂದು ಹೇಳಿದರು. ವಿಧಾನ ಪರಿಷತ ಸದಸ್ಯ ಹನಮಂತ ನಿರಾಣಿ ಪ್ರಶಸ್ತಿ ಪ್ರಧಾನ ಮಾಡಿ ಮಾತನಾಡುತ್ತ, ಪರಿಪೂರ್ಣ ವ್ಯಕ್ತಿಗಳಾಗಲು ನೈತಿಕ ಶಿಕ್ಷಣದ ಅವಶ್ಯಕತೆ ಇದೆ. ಶಿಕ್ಷಕರು ವಿದ್ಯಾರ್ಥಿಗಳಿಗೆ ಶಿಕ್ಷಣದೊಂದಿಗೆ ಉತ್ತಮ ಸಂಸ್ಕಾರ ನೀಡಿ ಅವರನ್ನು ದೇಶಪ್ರೇಮಿಗಳನ್ನಾಗಿ ಮಾಡುವಂತೆ ಕರೆ ನೀಡಿದರು. ಈ ಸಂದರ್ಭದಲ್ಲಿ ಬಿ ಎನ್ ಹುಲಕುಂದ ಅವರಿಗೆ ಗೋಕಾವಿ ಗುರು ರತ್ನ, ಡಾ.ಅಶೋಕ ಮುರಗೋಡ ಅವರಿಗೆ ವೈದ್ಯ ರತ್ನ, ಜಯಾನಂದ ಮುನವಳ್ಳಿ ಅವರಿಗೆ ಸೇವಾ ರತ್ನ ಹಾಗೂ ವೈ ಬಿ ಪಾಟೀಲ ಅವರಿಗೆ ಶಿಕ್ಷಣ ರತ್ನ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು.

ವೇದಿಕೆಯ ಮೇಲೆ ಶ್ರೀ ಬಸವಪ್ರಭು ಸ್ವಾಮಿಜಿ, ಡಾ.ಸಪ್ನಾ ಅನಿಗೋಳ, ಕ್ಷೇತ್ರ ಶಿಕ್ಷಣಾಧಿಕಾರಿ ಜಿ ಬಿ ಬಳಗಾರ, ಎಸ್ ಎಮ್ ಲೋಕನ್ನವರ, ಮಹಾಂತೇಶ ತಾಂವಶಿ, ಡಾ.ತೇಜಸ್ವಿ ಹೊಸಮನಿ, ಡಾ.ಕೀರ್ತಿ ಬೀರನಗಡ್ಡಿ, ರಜನಿ ಜೀರಗ್ಯಾಳ, ಸುರೇಖಾ ತೋಳಿ, ಚೇತನ ಜೋಗನ್ನವರ ಇದ್ದರು.

# ಜಮಖಂಡಿ ಜ್ಞಾನದ ದಿವ್ಯಶಕ್ತಿಯಾಗಿ ಗುರುತಿಸಿಕೊಂಡಿದೆ

**ಜಮಖಂಡಿ:** ಬೆಳಗಾವಿ, ಧಾರವಾಡ ಜಿಲ್ಲೆಗಳಲ್ಲಿ ಇರತಕ್ಕ ಸರಕಾರಿ ಶಾಲೆಗಳು ಬಾಗಲಕೋಟೆ ಜಿಲ್ಲೆಯಲ್ಲಿವೆ. ತಾಲೂಕಿನ 580 ಸರಕಾರಿ ಶಾಲೆಗಳಿದ್ದು, ಎಸ್.ಎಸ್. ಎಲ್.ಸಿ. ಪರೀಕ್ಷೆ ಫಲಿತಾಂಶದಲ್ಲಿ ಜಮಖಂಡಿ ತಾಲೂಕು ಜಿಲ್ಲೆಗೆ ಪ್ರಥಮಸ್ಥಾನ ಪಡೆದುಕೊಂಡಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕ ಬಸನ್ನವರ ಹೇಳಿದರು.

ನಗರದ ಬಸವಭವನ ಸಭಾಭವನದಲ್ಲಿ ಶನಿವಾರ ಜಿಲ್ಲಾ ಪಂಚಾಯತ, ಶಾಲಾ ಶಿಕ್ಷಣ ಇಲಾಖೆ, ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ತಾಲೂಕಾಡಳಿತ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳ ಕಛೇರಿ, ಶಿಕ್ಷಕ ವಿವಿಧ ಸಂಘಟನೆಗಳು, ತಾಲೂಕಾ ಸರಕಾರಿ ನೌಕರರ ಸಂಘ ಮತ್ತು ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ಬೆಂಗಳೂರ ಸಹಯೋಗದಲ್ಲಿ ಸರ್ವಪಲ್ಲಿ ಡಾ.ರಾಧಾಕೃಷ್ಣನರ ಜನ್ಮ ದಿನಾಚರಣೆ ಮತ್ತು ಶಿಕ್ಷಕರ ದಿನೋತ್ಸವ ಸಮಾರಂಭದಲ್ಲಿ ಮಾತನಾಡಿದರು.

ಜಮಖಂಡಿ ತಾಲೂಕು ಶಿಕ್ಷಣ ಕ್ಷೇತ್ರಕ್ಕೆ ಪ್ರಮುಖ ವೇದಿಕೆಯಾಗಿದೆ. ಶಿಕ್ಷಣ, ಕ್ರೀಡೆ, ಸಾಹಿತ್ಯ, ನೀರಾವರಿ ಎಲ್ಲ ಕ್ಷೇತ್ರದಲ್ಲಿ ಮುಂದಿದೆ. ಸರಕಾರ ಯಾವುದೇ ಹುದ್ದೆಗಳ ನೇಮಕಾತಿಯಲ್ಲಿ ಜಮಖಂಡಿ ತಾಲೂಕಿನ ವಿದ್ಯಾರ್ಥಿಗಳು ಇದ್ದೇ ಇರುತ್ತಾರೆ. ಜಮಖಂಡಿ ತಾಲೂಕು ಜ್ಞಾನದ ದಿವ್ಯಶಕ್ತಿಯಾಗಿ




ಗುರುತಿಸಿಕೊಂಡಿದೆ. ಆಧ್ಯಾತ್ಮಿಕ ಕ್ಷೇತ್ರದಲ್ಲಿ ಶ್ರೀ ಗುರುದೇವ ರಾನಡೆ, ಸಾಹಿತ್ಯದಲ್ಲಿ ಸತ್ಯಕಾಮ, ಕ್ರೀಡೆಯಲ್ಲಿ ಕುರಣಿ ಸಹಿತ ಹಲವರು ದೇಶದಲ್ಲಿ ಗುರುತಿಸಿ ಕೊಂಡಿದ್ದಾರೆ ಎಂದರು.

ತಹಶೀಲ್ದಾರ ಅನೀಲ ಬಡಿಗೇರ ಮಾತನಾಡಿ, ಪ್ರತಿ ವಿದ್ಯಾರ್ಥಿಗೆ ಓರ್ವ ಶಿಕ್ಷಕ ಆದರ್ಶಪ್ರಾಯರಾಗಿರುತ್ತಾರೆ. ವಿದ್ಯಾರ್ಥಿಯ ಜೀವನದ ದಿಕ್ಕು ಬದಲಿಸುವ ಶಕ್ತಿ ಶಿಕ್ಷಕರಲ್ಲಿ ಮಾತ್ರ ಸಾಧ್ಯವಿದೆ. ಶಿಕ್ಷಕರ ಪರಿಶ್ರಮದ ಶಿಕ್ಷಣದಿಂದ ದೇಶದ ಅಭಿವೃದ್ಧಿ ಆಗಲಿದೆ. ಬದಲಾವಣೆಗೆ ತಕ್ಕಂತೆ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಬದಲಾವಣೆ ಅಳವಡಿಕೊಳ್ಳ ಬೇಕು. ಶಿಕ್ಷಕ ವೃತ್ತಿಯಲ್ಲಿ ಲಭಿಸುವ ತೃಪ್ತಿ ಯಾವುದೇ ಹುದ್ದೆಯಲ್ಲಿ ಲಭಿಸಲು ಸಾಧ್ಯವಿಲ್ಲ. ಶಿಕ್ಷಕ ವೃತ್ತಿ ದೇಶದಲ್ಲಿ ಪವಿತ್ರ ಹುದ್ದೆಯಾಗಿದೆ. ನಾನು ಮೊದಲು ಶಿಕ್ಷಕನಾಗಿ ವೃತ್ತಿ ಆರಂಭಿಸಿದ ನಂತರ ಈಗ ತಹಶೀಲ್ದಾರನಾಗಿ ನೇಮಕ ಆಗಿದ್ದೇನೆ. ಆದರೇ ಶಿಕ್ಷಕ ವೃತ್ತಿಯಲ್ಲಿ ಲಭಿಸಿದ ಸಂತೋಷ ಈ ಹುದ್ದೆಯಲ್ಲಿ ಇಲ್ಲ ಎಂದರು.

ಬೆಳಗಾವಿಯ ಬಸವರಾಜ ಕಟ್ಟಿಮನಿ ಪ್ರತಿಷ್ಠಾನ ಅಧ್ಯಕ್ಷ, ಲೇಖಕ ಡಾ.ಯಲ್ಲಪ್ಪ ಹಿಮ್ಮಡಿ ಮಾತನಾಡಿ, ರೈತರು ಮತ್ತು ಶಿಕ್ಷಕರು ಇಲ್ಲದೇ ಜೀವನ ಸಾಗಿಸಲು ಸಾಧ್ಯವಿಲ್ಲ. ರೈತರು ಇರದಿದ್ದರೇ ಬದುಕು ನಡೆಸಲು ಸಾಧ್ಯವಿಲ್ಲ. ಶಿಕ್ಷಣ ಇಲ್ಲದಿದ್ದರೇ ಶೋಷಣೆ ತಡೆಯಲು ಸಾಧ್ಯವಿಲ್ಲ ಎಂದರು.

ಓಲೇಮಠದ ಪ.ಪೂ.ಆನಂದೇವರು ಸಾನಿಧ್ಯ ವಹಿಸಿ ಆರ್ಶೀವದಿಸಿದರು. ನಗರಸಭೆ ಅಧ್ಯಕ್ಷ ಈಶ್ವರ ವಾಳೆನ್ನವರ ಕಾರ್ಯಕ್ರಮ ಉದ್ಘಾಟಿಸಿದರು. ವೇದಿಕೆಯಲ್ಲಿ ನಗರಸಭೆ ಉಪಾಧ್ಯಕ್ಷೆ ರೇಖಾ ಕಾಂಬಳೆ, ಪ್ರಾಥಮಿಕ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಬಸವರಾಜ ಬಾಗೆನ್ನವರ, ಕ್ಷೇತ್ರ ಸಮನ್ವಯಾಧಿಕಾರಿ ಕೆ.ಎಂ.ಕೋಲೂರ, ತಾಲೂಕಾ ದೈಹಿಕ ಶಿಕ್ಷಣ ಪರೀವಿಕ್ಷಕ ಪಂಚಾಕ್ಷರಿ ನಂದೇಶ, ಅಕ್ಷರ ದಾಸೋಹ ಯೋಜನೆ ಸಹಾಯಕ ನಿರ್ದೇಶಕ ಸಿ.ಎಸ್.ಕಲ್ಯಾಣಿ, ನಿವೃತ್ತ ಹಿರಿಯ ಉಪನ್ಯಾಸಕ ಸಿ.ಎಂ.ನ್ಯಾಮಗೌಡ, ಪಿ.ಬಿ.ಅಜ್ಜನವರ, ಸಿ.ಜಿ.ಕಡಕೋಳ, ನರಸಿಂಹ ಕಲ್ಲೋಳ್ಳಿ, ಲಕ್ಷ್ಮಣ ಬಡಿಗೇರ, ಸಂತೋಷ ತಳಕೇರಿ, ಭೂಷಣ ಪತ್ತಾರ, ಎಸ್.ಎಸ್.ಭೋಸಲೆ, ಮಹೇಶ ಜೋಶಿ, ಎಂ. ಎನ್.ಹುಂಡೇಕಾರ, ಎ.ಜಿ.ಕರಡಿ, ಎಂ.ಎಸ್.ಬಡಿಗೇರ, ಜಗದೀಶ ಮೇತ್ರಿ ಸಹಿತ ಹಲವರು ಇದ್ದರು.




## ಶಿಕ್ಷಕಿ ಎಂ.ಎಂ ಬಾಗೇವಾಡಿಗೆ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ

**ಬೈಲಹೊಂಗಲ** ಪಟ್ಟಣದ ಶಿವಬಸವ ಕಲ್ಯಾಣ ಮಂಟಪದಲ್ಲಿ ನಡೆದ ಶಿಕ್ಷಕರ ದಿನಾಚಾರಣೆ ಕಾರ್ಯಕ್ರಮದಲ್ಲಿ ತಾಲೂಕಿನ ದೇವಲಾಪುರ ಗ್ರಾಮದ ಸರಕಾರಿ ಪ್ರೌಢಶಾಲೆಯ ಶಿಕ್ಷಕಿ ಎಂ ಎಂ ಬಾಗೇವಾಡಿ ಅವರು ಪ್ರೌಢಶಾಲಾ ವಿಭಾಗದಿಂದ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿಗೆ ಆಯ್ಕೆಯಾದ ಹಿನ್ನಲೆಯಲ್ಲಿ ಶಾಸಕ ಮಹಾಂತೇಶ ಕೌಜಲಗಿ ಅವರು ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ ನೀಡಿ ಗೌರವಿಸಿದರು.

## ನಿಧನ ವಾರ್ತೆ



### ಮಹಾದೇವಿ ಕುಲಗೋಡ

**ರಬಕವಿ-ಬನಹಟ್ಟಿ:** ನಗರದ ವೈಭವ ಚಿತ್ರಮಂದಿರ ಬಳಿ ನಿವಾಸಿ ಮಹಾದೇವಿ ಕುಲಗೋಡ(77) ನಿಧನರಾದರು. ಮೃತರಿಗೆ ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಳಗವಿದೆ.

# ಉಚಿತ ಕಣ್ಣಿನ ತಪಾಸಣೆ ಶಿಬಿರ



**ಘಟಪ್ರಭಾ:** ರವಿವಾರ ರಂದು ಮಲ್ಲಾಪುರ ಪಿ ಜಿ ವಿಠ್ಠಲ ರುಕ್ಮಿಣಿ ಮಂದಿರದಲ್ಲಿ ಏಕತಾ ಫೌಂಡೇಶನ್ ಗೋಕಾಕ ಇವರ ನೇತೃತ್ವದಲ್ಲಿ ಉಚಿತ ಕಣ್ಣಿನ ಶಿಬಿರ ನಡೆಯಿತು. ಶಾಸಕರಾದ ರಮೇಶ್ ಲ ಜಾರಕಿಹೊಳಿ ಅವರ ಮಾರ್ಗದರ್ಶನದಲ್ಲಿ ನಡೆದ ಕಾರ್ಯಕ್ರಮದಲ್ಲಿ ನೂರಾರು ರೋಗಿ ಕಣ್ಣುಗಳ ತಪಾಸಣೆ ನಡೆಸಲಾಯಿತು. ಅಗತ್ಯ ಇದ್ದವರಿಗೆ ಕನ್ನಡಕ ವಿತರಣೆ, ಹಾಗೂ ಶಸ್ತ್ರಚಿಕಿತ್ಸೆ ನಡೆಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸಂಘಟಕರು ತಿಳಿಸಿದ್ದಾರೆ.

ಕಣ್ಣು ಮನುಷ್ಯನ ಶ್ರೇಷ್ಠವಾದ ಒಂದು ಅಂಗ ಕಣ್ಣು ಇಲ್ಲದಿದ್ದರೆ ಮನುಷ್ಯನಿಗೆ ಜಗತ್ತೇ ಶೂನ್ಯ, ಏಕ್ತಾ ಫೌಂಡೇಶನ್ ಗೋಕಾಕದವರು ಹಾಕಿಕೊಂಡ ಈ ಕಾರ್ಯಕ್ರಮ ಘಟಪ್ರಭಾ ಸುತ್ತಮುತ್ತಲಿನ ಭಾಗದ ಜನರು ಇದರ ಸದುಪಯೋಗವನ್ನು ಪಡೆಸಿಕೊಳ್ಳಬೇಕೆಂದು ಕರವೇ ರಾಜ್ಯಾಧ್ಯಕ್ಷರಾದ ಡಾ. ಕೆಂಪಣ್ಣ ಚೌಕಶಿ ಹೇಳಿದರು, ಸಾಮಾಜಿಕ ಕಾರ್ಯಕರ್ತ ಶ್ರೀಕಾಂತ ವಿ ಮಹಾಜನ, ಮಾತನಾಡಿ ಜನರಿಗೆ ಉಪಯೋಗ ಆಗುವ ಕಾರ್ಯ ಮಾಡುತ್ತಿರುವ ಏಕತಾ ಫೌಂಡೇಷನ್ ಸದಸ್ಯರಿಗೆ ಸಮಸ್ತ ಘಟಪ್ರಭಾದ ಜನತೆಯ ಪರವಾಗಿ ಧನ್ಯವಾದಗಳನ್ನು ತಿಳಿಸಿದರು, ಈ ಸಂದರ್ಭದಲ್ಲಿ ಯುವ ಮುಖಂಡರುಗಳಾದ ಮಾರುತಿ ಹುಕ್ಕೇರಿ, ಶಿವಪುತ್ರ ಕೊಗನೂರ, ಕುಮಾರ್ ಹುಕ್ಕೇರಿ, ಮಲ್ಲಿಕಾರ್ಜುನ ತುಕ್ಕಾನಟ್ಟಿ, ಕನ್ನಡ ಸೇನೆ ಗೋಕಾಕ ತಾಲೂಕು ಅಧ್ಯಕ್ಷ ಅಪ್ಪಾಸಾಬ ಮುಲ್ಲಾ, ಕರವೇ ಸಂತೋಷ ಅರಳಿಕಟ್ಟಿ ಬಣದ ರಾಜ್ಯಾಧ್ಯಕ್ಷ ಪ್ರಶಾಂತ್ ಅರಳಿಕಟ್ಟಿ, ಕಾಡಪ್ಪಾ ಕರೋಶಿ, ವೀರಭದ್ರ ಕಾಡದವರ, ಶಶಿ ಚೌಕಶಿ, ಆನಂದ್ ಬನ್ನನವರ್, ಹಾಲಪ್ಪ ನಿಡಸೋಶಿ ,ಅಶೋಕ್ ಚಚಡಿ, ರಮೇಶ್ ಕರೋಶಿ, ಪ್ರಕಾಶ್ ಬಡಕುಂದ್ರಿ, ಮಾಂತೇಶ್ ಸಂಕೇಶ್ವರಿ, ಶಂಕರ್ ಬಡಕುಂದ್ರಿ, ಅಜ್ಜಪ್ಪ ಕುಡ್ಡಗೋಳ. ಏಕ್ತಾ ಫೌಂಡೇಶನ್ ಗೋಕಾಕ್ ಅಧ್ಯಕ್ಷರಾದ ಅಜರ್ ಮುಜಾವರ್, ಅಬ್ದುಲ್ ಪಠಾಣ, ಸದ್ದಾಮ್ ಸೌದಾಗರ್, ಬಾಳು ಲಂಕೆನ್ನವರ್, ಅಜೀಮ್ ಮುಜಾವರ್, ಶಾಹಿದ್ ಮುಜಾವರ್, ಹಾಗೂ ವೈದ್ಯರುಗಳು, ಮುಂತಾದವರು ಭಾಗವಹಿಸಿದ್ದರು.

## ಬೆಳಗಾವಿ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅಭಿಪ್ರಾಯ

# ಕ್ರೀಡಾ ಮನೋಭಾವ ಬೆಳೆಸಿಕೊಂಡಾಗ ಜೀವನದಲ್ಲೂ ಯಶಸ್ಸು ಸಾಧ್ಯ

**ಬೆಳಗಾವಿ:** ಕ್ರೀಡೆಗಳಲ್ಲಿ ಸೋಲು –ಗೆಲುವು ಮಹತ್ವವಲ್ಲ. ಭಾಗವಹಿಸುವ ಮನೋಭಾವ ಮುಖ್ಯ. ಪಾಠದ ಜೊತೆಗೆ ಆಟವನ್ನೂ ಅಳವಡಿಸಿಕೊಂಡಾಗ ಮಾತ್ರ ಜೀವನದಲ್ಲೂ ಕ್ರೀಡಾ ಮನೋಭಾವ ಬೆಳೆದು ಯಶಸ್ಸು ಸಾಧ್ಯವಾಗುತ್ತದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

ಬೆಳಗಾವಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಜಿಲ್ಲಾ ಕ್ರೀಡಾಂಗಣದಲ್ಲಿ ಸೋಮವಾರ ಹಮ್ಮಿಕೊಳ್ಳಲಾಗಿದ್ದ ಬೆಳಗಾವಿ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕ್ರೀಡೆಗಳ ಬಗ್ಗೆ ನನಗೆ ಯಾವಾಗಲೂ ಅಪಾರ ಆಸಕ್ತಿ, ಎಲ್ಲ ಕ್ರೀಡೆಗಳಲ್ಲೂ ಭಾಗವಹಿಸುತ್ತಿದ್ದೆ. ಇಂತಹ ಅವಕಾಶಗಳು ಪದೇ ಪದೇ ಸಿಗುವುದಿಲ್ಲ, ಆದ್ದರಿಂದ ಕ್ರೀಡಾ ಚಟುವಟಿಕೆಗಳನ್ನು ಪ್ರತಿಯೊಬ್ಬರೂ ಸದುಪಯೋಗ ಪಡಿಸಿಕೊಳ್ಳಬೇಕು. ಇಂದು ಮೊಬೈಲ್, ಇಂಟರ್ನೆಟ್ ಮತ್ತು ರ್ಯಾಂಕ್ ಬರಬೇಕೆನ್ನುವ ಮನೋಭಾವದಿಂದಾಗಿ ನಾವು ಆಟ ಆಡುವುದನ್ನೇ ಮರೆತಿದ್ದೇವೆ. ಆದರೆ ನೆನಪಿರಲಿ?ಕ್ರೀಡೆಯಲ್ಲಿ ಬೆಳೆದ ಶಿಸ್ತು, ಸಹಕಾರ, ಹೋರಾಟದ ಮನೋಭಾವ ಜೀವನದಲ್ಲಿ ಒಳ್ಳೆಯ ಯಶಸ್ಸನ್ನು ತಂದುಕೊಡುತ್ತವೆ ಎಂದು ಅವರು ಹೇಳಿದರು.



ನಮ್ಮಲ್ಲಿ ಪ್ರತಿಭೆಗೆ ಕೊರತೆ ಇಲ್ಲ. ಕ್ರೀಡೆಯಲ್ಲಿ ಭಾಗವಹಿಸಿದ ಪ್ರತಿಯೊಬ್ಬರೂ ಪ್ರತಿಭಾವಂತರೇ, ನಾವೆಲ್ಲರೂ ಅವರಿಗೆ ಪ್ರೋತ್ಸಾಹ ನೀಡಬೇಕು. ಅವರಲ್ಲಿ ಸ್ಫೂರ್ತಿ ತುಂಬಿದಾಗ ಖಂಡಿತ ಯಶಸ್ವಿಯಾಗುತ್ತಾರೆ ಎಂದು ಸಚಿವರು ಹೇಳಿದರು.

ಈ ವೇಳೆ ಶಾಸಕರಾದ ಆಸೀಫ್ ಸೇಠ್, ಕ್ರೀಡಾ ಇಲಾಖೆಯ ಉಪ ನಿರ್ದೇಶಕ ಬಿ.ಶ್ರೀನಿವಾಸ್, ಇಲಾಖೆಯ ಅಧಿಕಾರಿಗಳು, ಕ್ರೀಡಾಪಟುಗಳು ಉಪಸ್ಥಿತರಿದ್ದರು.

## ಸರ್ವಪಲ್ಲಿ ರಾಧಾಕೃಷ್ಣನ್ ಜಯಂತಿ : ಶಿಕ್ಷಕರ ದಿನಾಚರಣೆ

# ಗುರು ಶಿಷ್ಯರ ಸಂಬಂಧ ಬಹಳ ಗಟ್ಟಿಯಾದದ್ದು: ಕುಲಿಗೋಡ

**ಮುಗಳಖೋಡ:** ಮನುಷ್ಯನಲ್ಲಿರುವ ಅಂಧಕಾರ, ಅಜ್ಞಾನವನ್ನು ತೊಳೆದು ಅಕ್ಷರ ಜ್ಞಾನದ ಜೊತೆಗೆ ಸಂಸ್ಕೃತಿ, ಸಂಸ್ಕಾರ ತುಂಬಿ, ತಂದೆ ತಾಯಿಯಂತೆ ಮಕ್ಕಳಿಗೆ ಪ್ರೀತಿ ತೋರುತ್ತಾ ಸಮಾಜದಲ್ಲಿ ನಮ್ಮನ್ನು ದೊಡ್ಡ ಸ್ಥಾನದಲ್ಲಿ ನೋಡುವಂತಹ ಕನಸು ಕಾಣುವ ಏಕೈಕ ವ್ಯಕ್ತಿ ಎಂದರೆ ಅದು ಒಬ್ಬ (ಗುರು) ಶಿಕ್ಷಕನಿಂದ ಮಾತ್ರ ಸಾಧ್ಯ. ಯಾವತ್ತಿಗೂ ಕೊನೆಗೊಳ್ಳದೆ ಗಟ್ಟಿಯಾಗಿರುವ ಸಂಬಂಧ ಎಂದರೆ ಅದು ಗುರು ಶಿಷ್ಯರ ಸಂಬಂಧ ಎಂದು ಶ್ರೀ ಚ.ವಿ.ವ ಸಂಘದ ಅಧ್ಯಕ್ಷ ಸಂಜಯ ಕುಲಿಗೋಡ ಹೇಳಿದರು.

ಅವರು ಪಟ್ಟಣದ ಡಾ.ಸಿ.ಬಿ.ಕುಲಿಗೋಡ ಪದವಿ ಮಹಾವಿದ್ಯಾಲಯದಲ್ಲಿ ಸರ್ವೇಪಲ್ಲಿ ರಾಧಾಕೃಷ್ಣನ್ ಅವರ ಜಯಂತಿ ನಿಮಿತ್ಯ ವಿದ್ಯಾರ್ಥಿಗಳು ಹಮ್ಮಿಕೊಂಡ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ಇದು ಕೇವಲ ಒಂದು ದಿನಕ್ಕೆ ಮಾತ್ರ ಸೀಮಿತವಾಗಿರದೆ ನಮ್ಮ ಜೀವಿತಾವಧಿಯವರೆಗೂ ಗುರುವಿಗೆ ಒಳ್ಳೆಯ ಗೌರವ ನೀಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಗುರು ಶಿಷ್ಯರ ಸಂಬಂಧದ ಬಗ್ಗೆ ತಿಳಿಸಿದರು.

ನಂತರ ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಉಪ ಪ್ರಾಚಾರ್ಯ ಆರ್. ಎಸ್. ಶೇಗುಣಿಸಿ ಮಾತನಾಡಿ ತಾವು ಪಡೆದುಕೊಂಡ ವಿದ್ಯೆಗೆ ಅನುಸಾರವಾಗಿ ಅಕ್ಷರವನ್ನು ಬಿತ್ತಿದ ಶಿಕ್ಷಕರನ್ನು ಗುರುತಿಸಿ ಅವರಿಗಾಗಿ ಒಂದು ದಿನ ಮೀಸಲಿಟ್ಟು ಗುರುಗಳನ್ನು ಗೌರವಿಸುತ್ತಿರುವ ಇವತ್ತಿನ ಈ ಸುಂದರ ದಿನ ತುಂಬಾ ಸಂತೋಷ ತಂದಿದೆ. ತಮ್ಮ ಮುಂದಿನ ಭವಿಷ್ಯ ಉಜ್ವಲವಾಗಿ ಬೆಳೆಯಲಿ ಸಮಾಜದಲ್ಲಿ ಅತಿ ಶ್ರೇಷ್ಠವಾದ ಹುದ್ದೆಗಳು ತಮ್ಮದಾಗಲಿ ಎಂದು ಶುಭ ಹಾರೈಸಿದರು.



> ಶಿಕ್ಷಕರು ವಿದ್ಯಾರ್ಥಿಗಳ ಕೌಶಲ್ಯಗಳಿಗೆ ಪ್ರೋತ್ಸಾಹಿಸಿದರೆ ಅವರಲ್ಲಿ ಕಲಿಕೆಯ ಆಸಕ್ತಿ ಹೆಚ್ಚುತ್ತದೆ. ಮನೆಯಿಂದ ಹೊರಗಿದ್ದೇವೆಂಬ ಭಾವನೆ ತೊರೆದು ಆಪ್ತತೆಯಿಂದ ಕಲಿಕೆಯಲ್ಲಿ ಮುಂದಾದರೆ ಬರುವ ಭವಿಷ್ಯ ಉಜ್ವಲವಾಗುತ್ತದೆ. ಇಂದು ಗುರುಗಳಿಗಾಗಿ ಆಯೋಜಿಸಿದ ಈ ಸಂಭ್ರಮಾಚರಣೆ ತಮ್ಮ ಅಭಿಮಾನವನ್ನು ತೋರುತ್ತಿದೆ. ನಮ್ಮಲ್ಲಿ ತುಂಬಾ ಸಂತೋಷ ತಂದಿದೆ. ಅತಿ ಶ್ರೇಷ್ಠರಲ್ಲಿ ತಮ್ಮನ್ನು ಕಾಣುವ ಆಸೆ ನಮ್ಮದಾಗಿದೆ.
>
> **ಡಾ.ಪಿ.ಬಿ.ಕೊರವಿ**
> **ಕನ್ನಡ ಉಪನ್ಯಾಸಕರು.**

ಇನ್ನೋರ್ವ ಅತಿಥಿಗಳಾದ ಪ್ರಾಚಾರ್ಯ ಪಿ. ಸಿ. ಕಂಬಾರ ವಿದ್ಯಾರ್ಥಿಗಳನ್ನುದ್ದೇಶಿಸಿ ಪ್ರಸ್ತಾವಿಕ ನುಡಿಗಳನ್ನಾಡಿದರು. ಕನ್ನಡ ಉಪನ್ಯಾಸಕ ಪಿ.ಬಿ. ಕೊರವಿ, ಸಾಂಸ್ಕೃತಿಕ ವಿಭಾಗದ ಮುಖ್ಯಸ್ಥ ಎಸ್.ಎ. ಹಿರೇಮಠ, ವಾಣಿಜ್ಯ ವಿಭಾಗದ ಉಪನ್ಯಾಸಕ ಪ್ರದೀಪ್ ನಾಯಿಕ ಮಾತನಾಡಿದರು. ಶಿಕ್ಷಕರನ್ನು ಕುರಿತು ಹಲವಾರು ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಎಲ್ಲ ವಿದ್ಯಾರ್ಥಿಗಳು ಸೇರಿ ಶಿಕ್ಷಕರಿಗೆ ಪುಷ್ಪವೃಷ್ಠಿ ಮಾಡುವುದರೊಂದಿಗೆ ಕಾರ್ಯಕ್ರಮಕ್ಕೆ ಕರೆತಂದು ಕವನಗಳ ಮೂಲಕ ಹಾಡಿ ಹೊಗಳಿ, ಕೇಕ್ ಕತ್ತರಿಸುಮ ಮೂಲಕ ಚಪ್ಪಾಳೆಯ ಸುರಿಮಳೆಯೊಂದಿಗೆ ಗೌರವ ನಮನಗಳನ್ನು ಸಲ್ಲಿಸಿ ಶಿಕ್ಷಕರಿಗಾಗಿ ಆಟಗಳ ಆಯೋಜನೆ ಮಾಡಿದ್ದರು. ಸಕಲರಿಗೂ ಭೋಜನದ ವ್ಯವಸ್ಥೆ ಮಾಡಿ ಸಂಭ್ರಮದಿಂದ ಶಿಕ್ಷಕರ ದಿನವನ್ನು ಆಚರಣೆ ಮಾಡಿದರು. ಕಾರ್ಯಕ್ರಮವನ್ನು ಭೂಮಿಕಾ ಅಂಕಲಿ ನಿರೂಪಿಸಿ, ಕಾದಂಬರಿ ತಳವಾರ ಸ್ವಾಗತಿಸಿ, ಅಕ್ಷತಾ ಶೇಗುಣಸಿ ವಂದಿಸಿದರು.

> ವಿದ್ಯಾರ್ಥಿಗಳಿಗೆ ಗುರುಗಳು ಕೇವಲ ಪಾಠ ಹೇಳುವವರಲ್ಲ, ಬದಲಿಗೆ ಜೀವನ ರೂಪಿಸುವ ಮಾರ್ಗದರ್ಶಕರು ಮತ್ತು ಸ್ಫೂರ್ತಿ. ಅವರು ಜ್ಞಾನದ ದೀಪವಾಗಿ ಕತ್ತಲನ್ನು ಹೋಗಲಾಡಿಸಿ, ತಾಳ್ಮೆ, ಬೆಂಬಲದ ಮೂಲಕ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಅರಳಿಸುತ್ತಾರೆ. ಇಂದು ಪುಷ್ಪವೃಷ್ಠಿಯಿಂದ ಸ್ವಾಗತಿಸಿ, ಶಿಕ್ಷಕರನ್ನು ಗೌರವಿಸುವ ಅವಕಾಶ ಸಿಕ್ಕಿರುವುದು ನಮ್ಮೆಲ್ಲರ ಪುಣ್ಯ. ಗುರುಗಳನ್ನ ಗಮನಿಸಿ ನಾನು ಶಿಕ್ಷಕಿ ಆಗಬೇಕೆಂದು ನಿರ್ಧರಿಸಿದ್ದೇನೆ.
>
> **ಭಾಗ್ಯಶ್ರೀ ಯಡವಣ್ಣವರ**
> **ವಿದ್ಯಾರ್ಥಿ**

ಈ ಸಂದರ್ಭದಲ್ಲಿ ಎಚ್.ಎಂ. ಕಂಕಣವಾಡಿ, ಎಸ್. ಎಸ್. ಕುಲಿಗೋಡ, ಬಿ. ಎಸ್. ಸವಸುದ್ದಿ, ಕುಮಾರಿ ರತ್ನಾ ಖೇತಗೌಡರ, ಗೀತಾ ಬೊಮ್ಮಣ್ಣವರ, ಗ್ರಂಥಪಾಲಕ ಸಂಗಣ್ಣ ತೇಲಿ, ಕಚೇರಿ ವ್ಯವಸ್ಥಾಪಕ ಹುಸೇನಸಾಬ ಯಲಿಗಾರ, ವಿದ್ಯಾರ್ಥಿಗಳ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಕಾಂತ ಹೊಸಪೇಟಿ, ಭಾಗ್ಯಶ್ರೀ ಯಡವನ್ನವರ, ಆನಂದ ಕಂಕಣವಾಡಿ ಸೇರಿದಂತೆ ವರ್ಗಪ್ರತಿನಿಧಿಗಳು ಹಾಗೂ ಎಲ್ಲ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ನಾಳೆ ಮಾಜಿ ರಾಷ್ಟ್ರಪತಿ ಡಾ. ಬಿ.ಡಿ. ಜತ್ತಿ ಜಯಂತಿ

**ಬೆಂಗಳೂರು:** ಭಾರತದ ಮಾಜಿ ರಾಷ್ಟ್ರಪತಿಗಳು ಹಾಗೂ ಬಸವ ಸಮಿತಿಯ ಸಂಸ್ಥಾಪಕರಾದ ಡಾ. ಬಿ.ಡಿ.ಜತ್ತಿಯವರ 113ನೇ ಜಯಂತೋತ್ಸವ ಮತ್ತು ಸಂಸ್ಥಾಪನಾ ದಿನಾಚರಣೆಯನ್ನು ದಿ.10ರಂದು ಬೆಳಿಗ್ಗೆ 11:30ಕ್ಕೆ ಬೆಂಗಳೂರಿನ ಬಸವೇಶ್ವರ ವೃತ್ತದಲ್ಲಿರುವ ಅನುಭವ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಬಸವ ಸಮಿತಿಯ ಅಧ್ಯಕ್ಷರಾದ ಡಾ.ಅರವಿಂದ ಜತ್ತಿ,ಕಾರ್ಯಕಾರಿ ಸಮಿತಿಯ ಹಿರಿಯ ಸದಸ್ಯರಾದ ಮೋಹನ ಬಸನಗೌಡ ಪಾಟೀಲ ತಿಳಿಸಿದ್ದಾರೆ.



ಬೆಂಗಳೂರು ಬೇಲಿಮಠದ, ಮಠಾಧ್ಯಕ್ಷರಾದ ಪೂಜ್ಯಶ್ರೀ ಶಿವರುದ್ರ ಮಹಾಸ್ವಾಮಿಗಳು ಸಾನಿಧ್ಯ ವಹಿಸಿದ್ದಾರೆ, ಭಾರತ ಸರ್ಕಾರದ ರೈಲ್ವೆ ಖಾತೆ ರಾಜ್ಯ ಸಚಿವರಾದ ವಿ. ಸೋಮಣ್ಣ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು, ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾದ ಎಂ. ವೀರಪ್ಪ ಮೊಯಿಲಿ ಅವರು ಮುಖ್ಯ ಅತಿಥಿಗಳಾಗಿ ಆಗಮಿಸುವರು. ಬಸವ ಸಮಿತಿ ಅಧ್ಯಕ್ಷರಾದ ಡಾ. ಅರವಿಂದ ಜತ್ತಿ ಅವರು ಅಧ್ಯಕ್ಷತೆಯನ್ನು ವಹಿಸುವರು. ಬಸವ ಮಣಿಹದಲ್ಲಿ ವಿಶಿಷ್ಟ ಸಾಧನೆಗೈದಿರುವ ಬೆಂಗಳೂರಿನ ಹಿರಿಯ ಸಾಹಿತಿ ಡಾ. ಗೊ. ರು. ಚನ್ನಬಸಪ್ಪ ಅವರಿಗೆ ಬಸವ ವಿಭೂಷಣ ಪುರಸ್ಕಾರ, ಹಾಸನದ ಯುನೈಟೆಡ್ ಅಕಾಡೆಮಿಯ ಸಿ.ಎಂ. ಚಂದ್ರಶೇಖರ, ಬೆಂಗಳೂರಿನ ವಚನ ಜ್ಯೋತಿ ಬಳಗದ ಎಸ್. ಪಿನಾಕಪಾಣಿ ಅವರಿಗೆ ಬಸವಶ್ರೀ ಪುರಸ್ಕಾರವನ್ನು ಮತ್ತು ಗೌರವ ಸನ್ಮಾನವನ್ನು ಬಸವ ಸಮಿತಿಯಿಂದ ಇದೇ ಸಂದರ್ಭದಲ್ಲಿ ಹಮ್ಮಿಕೊಳ್ಳಲಾಗಿದೆ.

ಹಿರಿಯ ಉಪಾಧ್ಯಕ್ಷರಾದ ಪ್ರಭುದೇವ ಚಿಗಟೇರಿ, ಉಪಾಧ್ಯಕ್ಷರಾದ ಲೀಲಾದೇವಿ ಆರ್ ಪ್ರಸಾದ್, ಶ್ರೀ ಹನುಮಂತರೆಡ್ಡಿ ಮುದ್ನಾಳ, ಪ್ರಧಾನ ಕಾರ್ಯದರ್ಶಿಗಳಾದ ದಿಬ್ಬೂರು ಗಿರೀಶ್, ಡಾ. ಟಿ ಜಿ ಪ್ರಭಾಶಂಕರ, ಕೋಶಾಧ್ಯಕ್ಷರಾದ ಡಾ. ನಿರ್ಮಲಾ ಯಲಿಗಾರ,ಜಂಟಿ ಕಾರ್ಯದರ್ಶಿಗಳಾದ ಜೆ. ಎಸ್. ವಿರೂಪಾಕ್ಷಯ್ಯ, ಸುನಿಲಕುಮಾರ ರಗಟೆ ಅವರು ಉಪಸ್ಥಿತರುವರು. ಕಾರಣ ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಕೇಂದ್ರ ಬಸವ ಸಮಿತಿಯ ಕಾರ್ಯ ಸಮಿತಿಯ ಹಿರಿಯ ಸದಸ್ಯರಾದ ಮೋಹನ ಬಸನಗೌಡ ಪಾಟೀಲ ತಿಳಿಸಿದ್ದಾರೆ.

# ಸಹಕಾರಿ ಸಂಘದ ವಾರ್ಷಿಕ ಸರ್ವಸಾಧಾರಣ ಸಭೆ




**ತಾಲೂಕಿನ ನಸಲಾಪೂರ ಗ್ರಾಮದ ನಂದೇಶ್ವರ ವಿ ವಿ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರಿ ಸಂಘದ ವಾರ್ಷಿಕ ಸರ್ವಸಾಧನಾ ಸಭೆಯಲ್ಲಿ ಮಾತನಾಡುವಾಗ ಪಾಸಗೌಡ ಪಾಟೀಲ.**

**ರಾಯಬಾಗ:** ರೈತರು ಪಡೆದ ಸಾಲವನ್ನು ಮರುಪಾವತಿಸಿದರೆ ಮಾತ್ರ ಸಂಘ ಸಂಸ್ಥೆ ಅಭಿವೃದ್ಧಿಗೆ ಸಾಧ್ಯ ಎಂದು ಪಾಸಗೌಡ ಪಾಟೀಲ ಅವರು ಹೇಳಿದರು.

ತಾಲೂಕಿನ ನಸಲಾಪೂರ ಗ್ರಾಮದ ನಂದೇಶ್ವರ ವಿವಿಧ ಉದ್ದೇಶಗಳ ಪ್ರಾಥಮಿಕ ಸಹಕಾರಿ ಸಂಘ ಹಾಗೂ ನಂದೇಶ್ವರ ಸೌಹಾರ್ದ ಸಹಕಾರಿ ಸಂಘದ ವಾರ್ಷಿಕ ಸರ್ವಸಾಧಾರಣ ಸಭೆಯಲ್ಲಿ ಮಾತನಾಡಿ, ಸಂಘ ಬೆಳೆಯಬೇಕಾದರೆ, ಸಂಘದ ಸದಸ್ಯರುಗಳು ಹಾಗೂ ಸಿಬ್ಬಂದಿಗಳು ಬಹಳ ಮುಖ್ಯಇರುತ್ತಾರೆ. ಎಲ್ಲರೂ ನಮ್ಮದೇ ಸಂಘ ಎಂದು ತಿಳಿದು ಕಾರ್ಯನಿರ್ವಹಿಸಬೇಕು ಎಂದರು.

ಸಂಸ್ಥೆಯ ಸಂಸ್ಥಾಪಕರಾದ ಭಾವುಸಾಬ ಪಾಟೀಲ ಅವರು ಮಾತನಾಡಿ, ಸಂಘದ ಸದಸ್ಯರಿಗೆ ಶೇ.15 ಲಾಭಾಂಶವನ್ನು ನೀಡಲಾಗುವುದು ಎಂದು ಘೋಷಿಸಿದರಲ್ಲದೇ ನಂದೇಶ್ವರ ವಿ ವಿ ಉದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರಿ ಸಂಘದ ವಾರ್ಷಿಕ ಆದಾಯ 2 ಕೋಟಿ 81 ಲಕ್ಷ ಯಾಗಿದ್ದು ನಂದೇಶ್ವರ ಸೌಹಾರ್ದ ಸಹಕಾರಿ ಸಂಘದ ವಾರ್ಷಿಕ ವ್ಯವಹಾರ 9 ಕೋಟಿ 79,26343 ಕೋಟಿ ಆಗಿದ್ದು ಸಂಘ ಪ್ರಗತಿಯುತ್ತ ಸಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಸುಖದೇವ ಚಾವರೆ, ವಿಕಾಸ ಪಾಟೀಲ, ಅಪ್ಪಾಸಾಬ ತಾಂಬಟ, ಬಾಬಾಸಾಹೇಬ ಚೌಗಲಾ, ಭೂಪಾಲ ಸಮಾಜೆ, ನಿಂಗೌಡಾ ನಾಗರಾಳೆ, ಮಹಾವೀರ ಮಗದುಮ, ಕುಮಾರ ಕಡಟ್ಟಿ ಬಾಬು ಪಾಟೀಲ, ಪ್ರದೀಪ ಪಾಟೀಲ, ರಾಮು ವಡೇರ, ನೆಹರು ಮಗದುಮ, ಸಂಜು ಚಿಗರೇ, ಆದೇಶ ಪಾಟೀಲ, ಶ್ರೀಕಾಂತ ಹಿರೆಕುಡಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ರಾಜು ಕಾಗೆ ಸ್ವಾಗತಿಸಿದರು ಗಿರೀಶ ಸಂಗೋಟೆ ನಿರೂಪಿಸಿದರು ಮಂಜುಳಾ ಸಮಾಜೆ ವಂದಿಸಿದರು.



# ವಿವಿಧ ಕಾಮಗಾರಿಗಳಿಗೆ ಶಾಸಕ ಸಿದ್ದು ಸವದಿ ಚಾಲನೆ

**ತೇರದಾಳ:** ಸರಕಾರಗಳು ನೀಡುವ ಅಭಿವೃದ್ಧಿ ಅನುದಾನವನ್ನು ಸಮಸ್ಯೆಗಳು ಇದ್ದಲ್ಲಿ ಬಳಸಿಕೊಳ್ಳುವ ಮೂಲಕ ಯೋಜನೆಗಳನ್ನು ಸದ್ಬಳಿಕೆ ಮಾಡಿಕೊಳ್ಳಬೇಕೆಂದು ತೇರದಾಳ ಶಾಸಕ ಸಿದ್ದು ಸವದಿ ಸಲಹೆ ನೀಡಿದರು.

ನಗರೋತ್ಥಾನ ನಾಲ್ಕನೇ ಹಂತದ ಯೋಜನೆಯಡಿ ಪುರಸಭೆ ವ್ಯಾಪ್ತಿಯಲ್ಲಿ ವಿವಿಧ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಕಾಮಗಾರಿ ಕಾಲಮಿತಿಯಲ್ಲಿ ಪೂರ್ಣಗೊಳಿಸಿದಾಗ ಮಾತ್ರ ಸಾರ್ಥಕ ಆಗುತ್ತದೆ. ಆ ದಿಸೆಯಲ್ಲಿ ಗುತ್ತಿಗೆದಾರರು ಅಧಿಕಾರಿಗಳು ತಮ್ಮ ಕರ್ತವ್ಯ ನಿಭಾಸಬೇಕೆಂದು ಹೇಳಿದರು. ಬಿಜೆಪಿ ನಗರ ಘಟಕ ಅಧ್ಯಕ್ಷ ಮಹಾವೀರ ಕೊಕಟನೂರ, ಪ್ರಭಾಕರ ಬಾಗಿ, ಕೇದಾರಿ ಪಾಟೀಲ, ಶಂಕರ ಕುಂಬಾರ, ಲಕ್ಷ್ಮಣ ನಾಯಕ, ರಮೇಶ ಧರೆನ್ನವರ, ಅಲ್ಲಯ್ಯ ದೊಡಮನಿ, ಶ್ರೀಶೈಲ ತೆಳಗಿನಮನಿ, ಸಂತೋಷ ಅಕ್ಕೆನ್ನವರ, ವಿಠ್ಠಲ ಹಾಡಕರ, ವರ್ಧಮಾನ ಕಡಹಟ್ಟಿ, ಆನಂದ ಮಧುಮಲಿ, ಕಾಶಿನಾಥ ಕಾಲತಿಪ್ಪಿ ಇನ್ನಿತರರಿದ್ದರು.

# ಮಹಾನ್ ದಾರ್ಶಣಿಕ ಬಸವಣ್ಣ ಗ್ರಂಥ ಲೋಕಾರ್ಪಣೆ

**ಹಾವೇರಿ.** ಮಹಾನ ದಾರ್ಶನಿಕ ಬಸವಣ್ಣ ಗ್ರಂಥ ಲೋಕಾರ್ಪಣೆ ಹಾವೇರಿ–ಕೇಂದ್ರ ಬಸವ ಸಮಿತಿ ಪ್ರಕಟಿಸಿರುವ ಮಹಾನ ದಾರ್ಶನಿಕ ಬಸವಣ್ಣ ಗ್ರಂಥ ಲೋಕಾರ್ಪಣೆ ಕಾರ್ಯಕ್ರಮ ಹಾವೇರಿ ಕಸ್ತೂರಿ ಸಿರಿಗನ್ನಡ ವೇದಿಕೆ, ಅಕ್ಕನ ಬಳಗದ ಸಹಯೋಗದೊಂದಿಗೆ ಹೊಂಡದ ಮಠದ ಆವರಣದಲ್ಲಿ ಶಿಕ್ಷಕಿ ಲಲಿತಾ ನಿರಾಕಾರಿ ಅಧ್ಯಕ್ಷತೆಯಲ್ಲಿ, ಶೈಲಜಾ ಎಮ್. ಕೋರಿಶೆಟ್ಟರ ನೇತೃತ್ವದಲ್ಲಿ ನಡೆಯಿತು.

ಗ್ರಂಥ ಲೋಕಾರ್ಪಣೆ ಗೊಳಿಸಿದ ಶಿಕ್ಷಕಿ ಶ್ರೀಮತಿ ಶೋಭಾ ಜವಟಗೇರಿ ಅವರು ಮಾತನಾಡಿ ಕೇಂದ್ರ ಬಸವ ಸಮಿತಿ ಪ್ರಕಟಿಸಿರುವ *ಮಹಾನ್ ದಾರ್ಶನಿಕ ಬಸವಣ್ಣ* ಗ್ರಂಥ ಬಸವಣ್ಣನವರ ಜನನ, ಕಪ್ಪಡಿ ಸಂಗಮದಲ್ಲಿ ಬಸವಣ್ಣನವರ ವಿದ್ಯಾಭ್ಯಾಸ, ಕಾಯಕ ಜೀವನ, ಕಲ್ಯಾಣದಲ್ಲಿ ಬಸವಣ್ಣನವರ ಸಾಧನೆಗಳು, ಬಸವ ಮಹಾಮನೆ, ಪ್ರಸಾದ–ದಾಸೋಹ, ಅನುಭವ ಮಂಟಪದ ಸ್ಥಾಪನೆ, ಬಸವ ಪೂರ್ವದ ಪರಿಸ್ಥಿತಿ




ಹಾಗೂ ನಂತರದ ಸಾಮಾಜಿಕ, ಆರ್ಥಿಕ, ಸಾಹಿತ್ಯಕ, ಶೈಕ್ಷಣಿಕ ಪರಿಸ್ಥಿತಿ ವಿವರದೊಡನೆ ಬಸವಣ್ಣನವರ ಘನ ವ್ಯಕ್ತಿತ್ವ ಹಾಗೂ ಜೀವನದ ಘಟನೆಗಳನ್ನು ಒಳಗೊಂಡು ಜನರಿಗೆ ಒಳ್ಳೆಯ ಸಂದೇಶಗಳನ್ನು ತಲುಪಿಸುತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ಹಾವೇರಿಯ ಕಸ್ತೂರಿ ಸಿರಿಗನ್ನಡ ವೇದಿಕೆ ಅಧ್ಯಕ್ಷ ಅಧ್ಯಕ್ಷರಾದ ಶೈಲಜಾ ಕೋರಿಶೆಟ್ಟರ ಮಾತನಾಡಿ ಸಕಲ ಜೀವಾತ್ಮರಿಗೆಲೇಸನೆ ಬಯಸಿದ ಮಹಾನ್ ಮಾನವತಾವಾದಿ, ಕಲ್ಯಾಣಕ್ಕಾಗಿ ಹಗಲಿರುಳು ಶ್ರಮಿಸಿದ ವಿಶ್ವದ ಯುಗಪುರುಷ ಬಸವಣ್ಣನವರು ಮಹಾ ಮಾನವತಾವಾದಿ, ಸ್ವತಂತ್ರ ವಿಚಾರವಾದಿ, ಸಮತಾವಾದಿ, ದಲಿತೋದ್ಧಾರಕ, ಶ್ರೇಷ್ಠ ಅರ್ಥಶಾಸ್ತ್ರಜ್ಞ, ಸ್ತ್ರೀಕುಲೋದ್ಧಾರಕ, ಪ್ರಾಮಾಣಿಕ ಬದುಕಿನ ಪಾರದರ್ಶಕ ವ್ಯಕ್ತಿತ್ವದ ಮಹಾನ್ ದಾರ್ಶನಿಕರಾಗಿದ್ದರು. ಇಂದಿನ ವಿದ್ಯಾರ್ಥಿಗಳಲ್ಲಿ ಇಂತಹ ಕಲ್ಪನೆ ಬಿತ್ತುವುದು ನಮ್ಮ ಜವಾಬ್ದಾರಿಯಾಗಿದೆ ಎಂದರು.

ಉದಯೋನ್ಮುಖ ಬರಹಗಾರ ಅರುಣ ರೇವಣೆಪ್ಪ ಬಂಕಾಪುರ ಅವರು ಮಾತನಾಡಿ ಬಸವ ಸಮಿತಿಯು ಈಗಾಗಲೇ 50 ಭಾಷೆಗಳಲ್ಲಿ ವಚನಗಳನ್ನು ಭಾಷಾಂತರಿಸಿದೆ. ಶಾಲೆಯಿಂದ ಶಾಲೆಗೆ, ಕಾಲೇಜಿನಿಂದ ಕಾಲೇಜಿಗೆ, ವಚನಕಾರರು ಮತ್ತು ವ್ಯಕ್ತಿತ್ವ ಕಾರ್ಯಕ್ರಮವನ್ನು ಹಮ್ಮಿಕೊಂಡು ಲಕ್ಷಾಂತರ ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ವಿಕಸನವಾಗಿದೆ ಎಂದು ಹೇಳಿದರು.

ಶಿಕ್ಷಕರ ದಿನಾಚರಣೆಯ ನಿಮಿತ್ತ ಶಿಕ್ಷಕಿಯರಾದ ಶೋಭಾ ಜವಟಗೇರಿ, ಲಲಿತಾ ನಿರಾಕಾರಿ ಅವರು ಸನ್ಮಾನಿಸಲಾಯಿತು. ರಶ್ಮಿ ತುಪ್ಪದ ಸ್ವಾಗತಿಸಿದರು,ಕುಮಾರಿ ಕಾವ್ಯಾ ಪ್ರಾರ್ಥನೆ ಮಾಡಿದರು, ರುದ್ರಾಕ್ಷಿ ಬೆಂಬಳಗಿ ನಿರೂಪಿಸಿದರು, ಸಿದ್ದುಮತಿ ನೇಲುಗಿ, ಸುಧಾ ಆನೂರ್ ಶೆಟ್ಟರ, ಪ್ರೇಮಕ್ಕ ಅರವಿಬ್ಯಂಗಿಮಠ ಅಕ್ಕನ ಬಳಗದ ಅಧ್ಯಕ್ಷರಾದ ವಿಮಲಾ ಮರ್ತೂರ್ ,ರೇಷ್ಮಾ ಮುಷ್ಟಿ, ತೋಟಕ್ಕ ಅಕ್ಕಿ, ರೇಖಾ ಬಸೂನಾಳ, ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಸಮಾಜ ಸುಧಾರಣೆಗಾಗಿ ಶ್ರಮಿಸಿದವರು ನಾರಾಯಣ ಗುರುಗಳು

**ವಿಜಯಪುರ:** ಸಮಾಜದಲ್ಲಿನ ಮೂಢನಂಬಿಕೆ ಹಾಗೂ ಮೌಢ್ಯತೆ, ಅಸಮಾನತೆ ನಿವಾರಿಸಲು ಸಮಾಜಕ್ಕೆ ಸಂದೇಶ ನೀಡಿ, ಸಮಾಜ ಸುಧಾರಣೆಗಾಗಿ ಶ್ರಮಿಸಿದವರು ಬ್ರಹ್ಮಶ್ರೀ ನಾರಾಯಣಗುರು ಎಂದು ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರು ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾಪಂಚಾಯತ್ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಇವರ ಸಹಯೋಗದಲ್ಲಿ ಭಾನುವಾರ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಬ್ರಹ್ಮಶ್ರೀ ನಾರಾಯಣಗುರು ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಮೌಢ್ಯತೆ, ಶೋಷಣೆಗಳಿಂದ ತುಂಬಿದ ಸಮಾಜದಲ್ಲಿನ ಅಂಕುಡೊಂಕುಗಳನ್ನು ತಿದ್ದಲು ಶ್ರಮಿಸಿದ ಬ್ರಹ್ಮಶ್ರೀ ಅವರ ಆದರ್ಶ–ವಿಚಾರಗಳ ಬಗ್ಗೆ ಅರಿವು ಹೊಂದಬೇಕು. ಅವರು ಹಾಕಿಕೊಟ್ಟ ಮಾರ್ಗದದಲ್ಲಿ ನಡೆಯಬೇಕು ಸರ್ವರ ಒಳಿತಿಗಾಗಿ ಶ್ರಮಿಸಿದ ಇವರು ಮಾನವ ಜನಾಂಗದ ಗುರು ಆಗಿದ್ದಾರೆ. ಅವರು ಅನೇಕ ಸಮಾಜ ಮುಖಿ ಸುಧಾರಣೆಗಾಗಿ ಶ್ರಮಿಸಿದ್ದಾರೆ. ನಾರಾಯಣ ಗುರುಗಳು ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿದು, ಎಲ್ಲರಿಗೂ ಆದರ್ಶಪ್ರಾಯರಾದ ಸಮಾಜ ಸುಧಾರಕರಾಗಿದ್ದಾರೆ. ಸಮಾಜದ ಒಳಿತಿಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟ ಮಹನೀಯರ ಆದರ್ಶ ಜೀವನ ಚರಿತೆಯನು ನಾವು ಅರಿಯಬೇಕಾಗಿದೆ. ಬ್ರಹ್ಮಶ್ರೀ ನಾರಾಯಣ ಗುರಗಳವರ ತತ್ವಾದರ್ಶಗಳು, ಚಿಂತನೆಗಳನ್ನು ಮುಂದಿನ ಯುವ ಪೀಳಿಗೆಗೆ ತಲುಪಿಸಬೇಕಾಗಿದೆ.ಅವರ ತತ್ವಾದರ್ಶದಲ್ಲಿ ನಡೆದು ಸಶಕ್ತ ಸಮಾಜ ನಿರ್ಮಾಣಕ್ಕೆ ಕೈಜೋಡಿಸೋಣ ಎಂದು ಅವರು ಹೇಳಿದರು.




> ### ಮೆರವಣಿಗೆಗೆ ಚಾಲನೆ
>
> ಬ್ರಹ್ಮಶ್ರೀ ನಾರಾಯಣಗುರುಗಳ ಜಯಂತಿ ಅಂಗವಾಗಿ ನಗರದ ಸಿದ್ದೇಶ್ವರ ದೇವಸ್ಥಾನದ ಆವರಣದಲ್ಲಿ ಬ್ರಹ್ಮಶ್ರೀ ನಾರಾಯಣಗುರು ಅವರ ಭಾವಚಿತ್ರದ ಮೆರವಣಿಗೆಗೆ ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರು ಅವರು ಚಾಲನೆ ನೀಡಿದರು. ಮೆರವಣಿಗೆಯೂ ಕಲಾಮೇಳ ಹಾಗೂ ಕಲಾ ತಂಡಗಳೊಂದಿಗೆ ಗಾಂಧಿ ಚೌಕ್, ಬಸವೇಶ್ವರ ವೃತ್ತ, ಅಂಬೇಡ್ಕರ ವೃತ್ತ ಮಾರ್ಗವಾಗಿ ಕಂದಗಲ್ ಹನುಮಂತರಾಯ ರಂಗಮಂದಿರ ತಲುಪಿ, ಸಮಾವೇಶಗೊಂಡಿತು.

ಡಾ.ಎಂ.ಎಸ್.ಮಾಗಣಗೇರಿ ಅವರು ವಿಶೇಷ ಉಪನ್ಯಾಸ ನೀಡಿ, ಬ್ರಹ್ಮಶ್ರೀ ನಾರಾಯಣಗುರುಗಳು ಅಸಮಾನತೆ ಹಾಗೂ ಶೋಷಣೆ ವಿರುದ್ಧ ಹೋರಾಡಿ, ಎಲ್ಲರೂ ಪರಸ್ಪರ ಗೌರವಿಸುವಂತಹ ಸಮ ಸಮಾಜದ ನಿರ್ಮಾಣಕ್ಕೆ ಒತ್ತು ನೀಡಿದವರು ಶಿಕ್ಷಣದ ಮಹತ್ವದ ಕುರಿತು ತಿಳಿಸಿದ್ದಾರೆ.ಬ್ರಹ್ಮಶ್ರೀ ನಾರಾಯಣಗುರುಗಳು ಅದ್ದೂರಿ ವಿವಾಹ, ಮಹಿಳೆಯರ ಶೋಷಣೆ,ಸಮಾಜದಲ್ಲಿನ ಮೌಢ್ಯತೆಗಳಂತಹ ಅನಿಷ್ಟ ಪದ್ಧತಿ ವಿರೋಧಿಸಿ ಅವುಗಳನ್ನು ತೊಡೆದು ಹಾಕಲು ಶಿಕ್ಷಣದಿಂದಲೇ ಸಾಧ್ಯ ಎಂದು ಪ್ರತಿಪಾದಿಸಿದ ಅವರ ಚಿಂತನೆಗಳನ್ನು ಅರಿಯಬೇಕು ಎಂದು ಹೇಳಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಂತೋಷ ಭೋವಿ ಸ್ವಾಗತಿಸಿದರು.ಜಿಲ್ಲಾ ಪಂಚಾಯತಿಯ ಉಪ ಕಾರ್ಯದರ್ಶಿಗಳಾದ ಚಂದ್ರಕಾಂತ ಕುಂಬಾರ ವಂದಿಸಿದ್ದರು. ಈ ಸಂದರ್ಭದಲ್ಲಿ ಡಿವೈಎಸ್‌ಪಿ ಎಂ.ಎ.ಉಪಾಸೆ, ಬಸವರಾಜ ಈಳಿಗೇರ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಉಪಸ್ಥಿತರಿದ್ದರು.

BELAGINA SURYODHYA KANNADA DAILY MORNING Editor, Printer, PUblisher and Owned By GURURAJ IRAPPA KADAM Plot No.2743 NEAR KEB POWER HOUSE RAMTEERTH NAGAR, SHIVAJI NAGAR BELAGAVI-590016
DIST-BELAGAVI,STATE KARNATAKA PRINTED At M/S LAXMI PRINTERS, No. 627,Auto Nagar,Belagavi,Dist- Belagavi Karnataka, RNI No. KARKAN/2019/77640, Volume : 07, Issue :182, Postal Reg No. PMG/KA/NK/BM/135/25-27 / POST AT Vantamury Colony Post Office